ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 23 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 246 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವರ್ಣರಂಜಿತ ತೆರೆ

ವೈಜ್ಞಾನಿಕವಾಗಿ ಕನ್ನಡ ಉಳಿಸಲು ಹೋರಾಟ ಅತ್ಯಗತ್ಯ

ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿಮತ





ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಬಲಚಿತ್ರದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸಮ್ಮೇಳನದ ಸರ್ವಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರು ಸನ್ಮಾನಿಸಿದ್ದನ್ನು ಕಾಣಬಹುದು.

ಮಂಡ್ಯ, ಡಿ.22(ಮೋಹನ್‌ರಾಜ್)– ಸಮಾಜದ ವೈಜ್ಞಾನಿಕ ಪ್ರಗತಿಯಲ್ಲಿ ಕನ್ನಡ ಭಾಷೆಯನ್ನು ಉಳಿಸಲು ಹೋರಾಟ ಅಗತ್ಯವಾಗಿದ್ದು, ಕನ್ನಡವನ್ನು ಉಳಿಸಿ ಬೆಳೆಸುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂದು ಕೇಂದ್ರದ ಉಕ್ಕು ಹಾಗೂ ಭಾರಿ ಕೈಗಾರಿಕಾ ಸಚಿವರೂ ಆದ ಮಂಡ್ಯ ಸಂಸದ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಸಾಹಿತಿಗಳು ಕನ್ನಡ ಭಾಷೆಗೆ ಶಕ್ತಿ ಕಲ್ಪಿಸುವ ನಿಟ್ಟಿನಲ್ಲಿ ತಮ್ಮ ವಿಚಾರಧಾರೆಗಳನ್ನು ಇಡೀ ಸಮ್ಮೇಳನದಲ್ಲಿ ಧಾರೆ ಎರೆದಿದ್ದಾರೆ. ರಾಜ್ಯದಲ್ಲಿ ತ್ರಿಭಾಷಾ ಸೂತ್ರಕ್ಕೆ ವಿರೋಧ ಮಾಡಿ, ದ್ವಿಭಾಷಾ ಸೂತ್ರ ಅಳವಡಿಸಿ ಎಂದು ಕೆಲ ಸಾಹಿತಿಗಳು ಅಭಿಮತ ವ್ಯಕ್ತಪಡಿಸಿದ್ದಾರೆ. ಇದಕ್ಕೆ ನನ್ನ ಬೆಂಬಲವೂ ಇದೆ ಎಂದರು.

ರಾಜ್ಯದಲ್ಲಿ ಅಪ್ಪಟ ಕನ್ನಡ ಭಾಷೆ ಉಳಿದಿದ್ದರೆ ಜೊತೆಗೆ ಬೆಳೆದಿದ್ದರೆ ಮಂಡ್ಯ ಜಿಲ್ಲೆಯಲ್ಲಿ ಮಾತ್ರ. ಆ ನಿಟ್ಟಿನಲ್ಲಿ ಕಳೆದ ಮೂರು ದಿನಗಳಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಜಿಲ್ಲೆಯ ಜನತೆ ಅಭೂತಪೂರ್ವ ಬೆಂಬಲ ನೀಡಿದ್ದಾರೆ. ಜೊತೆಗೆ ಭಾಷಾ ಬೆಳವಣಿಗೆಗೆ ಮಂಡ್ಯ ಜಿಲ್ಲೆ ಸಾಕ್ಷಿಯಾಗಿದೆ. ಮಕ್ಕಳಲ್ಲಿ ಭಾಷಾ ಬೆಳವಣಿಗೆ ತುಂಬಲು ಶಿಕ್ಷಕರು ಮತ್ತು ಪೋಷಕರ ಜವಾಬ್ದಾರಿ ಅತ್ಯಗತ್ಯವಾಗಿದೆ. ಕನ್ನಡ ಭಾಷಾ ಬೆಳವಣಿಗೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯವಿದೆ ಎಂದು ನುಡಿದರು.

ಕನ್ನಡಿಗರು ಅನ್ಯ ಭಾಷೆಯನ್ನು ಹೆಚ್ಚು ಬಳಸಿದ ಪರಿಣಾಮ ನಮ್ಮ ಭಾಷೆ ಮೇಲೆ ಪರಿಣಾಮ ಹೆಚ್ಚಿನ ಮಟ್ಟದಲ್ಲಿ ಬೀರುತ್ತದೆ. ನಮ್ಮ ಭಾಷೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವಲ್ಲಿ ನಾವು ವಿಫಲವಾಗುತ್ತಿದ್ದೇವೆ. ನಮ್ಮ ಭಾಷೆಯನ್ನು ನಾವೇ ಪ್ರೋತ್ಸಾಹಿಸದಿದ್ದರೆ ಇನ್ಯಾರು ಬೆಳೆಸುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು. ನಾನು ಮೊದಲ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಬಸವರಾಜ ಹೊರಟ್ಟಿ ಶಿಕ್ಷಣ ಸಚಿವರಾಗಿದ್ದರು. ಆಗ ರಾಜ್ಯದಲ್ಲಿ ಕಾಲೇಜುಗಳ ಸಂಖ್ಯೆ ಕಡಿಮೆ ಇತ್ತು. ಆಗ ನಮ್ಮ ಸರ್ಕಾರ 500 ಕಾಲೇಜುಗಳನ್ನು ಮಂಜೂರು ಮಾಡಿತು. 1400 ಶಾಲೆಗಳ ಸ್ಥಾಪನೆಗೆ ಮುಂದಾದೆವು. 56 ಸಾವಿರ ಅಧ್ಯಾಪಕರ ನೇಮಕವಾಯಿತು. ಈ ಮೂಲಕ ಕನ್ನಡದ ಪ್ರೋತ್ಸಾಹ ಬೆಳವಣಿಗೆಗೆ ನಾವು ದಿಟ್ಟ ಹೆಜ್ಜೆ ಇಟ್ಟೆವು. ಎರಡನೇ ಬಾರಿಗೆ ನಾನು ಮುಖ್ಯಮಂತ್ರಿಯಾದಾಗ ನಗರ ಪ್ರದೇಶದ ಮಕ್ಕಳಿಗೆ ಗ್ರಾಮೀಣ ಪ್ರದೇಶದ ಮಕ್ಕಳು ಪೈಪೋಟಿ ಕೊಡಬೇಕೆಂದು ಕನ್ನಡ ಪಬ್ಲಿಕ್ ಶಾಲೆಗಳನ್ನು ಪ್ರತಿ ಜಿಲ್ಲೆಯ ಹಲವು ಕಡೆ ಸ್ಥಾಪನೆ ಮಾಡಲು ಕಾರ್ಯವಹಿಸಿ ಕಡಿಮೆ ದರದಲ್ಲಿ ಉತ್ತಮ ಶಿಕ್ಷಣ ಗ್ರಾಮೀಣ ಮಕ್ಕಳಿಗೂ ಸಿಗುವಂತೆ ಮಾಡಿದೆ ಎಂದು ತಿಳಿಸಿದರು.

ಕನ್ನಡ ಚಿತ್ರರಂಗದಿಂದ ನನ್ನ ವೃತ್ತಿ ಜೀವನ ಆರಂಭವಾಯಿತು. ಅಂದಿನ ಚಲನ ಚಿತ್ರಗಳಿಗೂ ಇಂದಿನ ಚಲನಚಿತ್ರಗಳಿಗೂ ಬಹಳ ವ್ಯತ್ಯಾಸವಿದೆ. ಡಾ.ರಾಜ್‌ಕುಮಾರ್ ಸೇರಿದಂತೆ ಅಂದಿನ ನಟರ ಹಾಡುಗಳು ಮನಸ್ಸಿನಲ್ಲಿ ಎಷ್ಟೇ ದುಃಖವಿದ್ದರೂ ಅವುಗಳನ್ನು ಹೋಗಲಾಡಿಸುತ್ತಿದ್ದವು. ■ 9ನೇ ಪುಟಕ್ಕೆ

ಮುಂದಿನ ಸಮ್ಮೇಳನ ಬಳ್ಳಾರಿಯಲ್ಲಿ

88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದಿನ ವರ್ಷ ಬಳ್ಳಾರಿಯಲ್ಲಿ ನಡೆಸಲು ಪರಿಷತ್ತು ತೀರ್ಮಾನಿಸಿದೆ. ವಾಡಿಕೆಯಂತೆ ಒಮ್ಮೆ ಸಮ್ಮೇಳನ ರಾಜ್ಯದ ದಕ್ಷಿಣ ಭಾಗದಲ್ಲಾದರೆ ಮುಂದಿನ ಸಮ್ಮೇಳನ ಉತ್ತರದಲ್ಲಿ ನಡೆಯುತ್ತಾ ಬಂದಿದೆ. ಹಾಗಾಗಿ ಮುಂದಿನ ಸಮ್ಮೇಳನವನ್ನು ಬಿಸಿಲ ನಾಡು ಬಳ್ಳಾರಿ ಜಿಲ್ಲೆಯಲ್ಲಿ ಆಯೋಜಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಈ ಬಗ್ಗೆ ಸಮಾರೋಪ ಭಾಷಣ ಮಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ಮುಂದಿನ ಸಮ್ಮೇಳನವನ್ನು ಬಳ್ಳಾರಿ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ ಎಂದರು.

ಸಮ್ಮೇಳನದಲ್ಲಿ ಕೈಗೊಂಡ ಆರು ನಿರ್ಣಯಗಳು...

- ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಎಲ್ಲಾ ಉಪ– ಬಂಧುಗಳು ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮವು ಸಮಗ್ರವಾಗಿ ಜಾರಿಗೆ ಬರಬೇಕಿದ್ದು, ಕೂಡಲೇ ಅನುಷ್ಠಾನ ಆಗಬೇಕು. ಸ್ವಾಯತ್ತ ಹೊಂದಿರುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ರಾಜ್ಯ ಮಟ್ಟದ ಸಮಿತಿಯು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲು ಸೂಕ್ತ ತಿದ್ದುಪಡಿ ತರಬೇಕು.
- ರಾಜ್ಯದಲ್ಲಿರುವ ಸರ್ಕಾರದ ಎಲ್ಲಾ ಕನ್ನಡ ಶಾಲೆಗಳಿಗೆ ಕಟ್ಟಡ ವಾಚನಾಲಯ, ಆಟದ ಮೈದಾನ ಸೇರಿದಂತೆ ಇತರೆ ಮೂಲಸೌಕರ್ಯಗಳನ್ನು ಒದಗಿಸುವ ಮತ್ತು ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿಯ ಕ್ರಮಕ್ಕೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಕನ್ನಡೇತರ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕು.
- ಕನ್ನಡ ಅನ್ನದ ಭಾಷೆಯಾಗಲು ಕನ್ನಡಿಗರ ಉದ್ಯೋಗಕ್ಕೆ ತಡೆಯಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರ್ಕಾರ ಸಮರ್ಪಕವಾಗಿ ಎದುರಿಸಬೇಕು. ಸರೋಜಿನಿ ಮಹಿಷಿ ವರದಿಯನ್ನು ಶಾಸನಬದ್ಧಗೊಳಿಸಿ ಅನುಷ್ಠಾನಗೊಳಿಸಬೇಕು.
- ದಾವಣಗೆರೆಯಲ್ಲಿ ನಡೆಯಬೇಕಿರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಅತಿ ಶೀಘ್ರದಲ್ಲೇ ನಡೆಸಬೇಕು.
- ಕರ್ನಾಟಕ ಸರ್ಕಾರವು ರಾಷ್ಟ್ರಕವಿಯನ್ನು ಅತಿ ಶೀಘ್ರದಲ್ಲೇ ಘೋಷಿಸಬೇಕು.
- ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಗೊಳಿಸಲು ಕಾರಣರಾದ ಸ್ವಾಗತ ಸಮಿತಿಯ ಅಧ್ಯಕ್ಷರಾದಿಯಾಗಿ ಎಲ್ಲಾ ಸದಸ್ಯರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಬಾಹ್ಯಾಕಾಶದಲ್ಲಿ ಬೆಳೆ; ಇಸ್ರೋ ಪ್ರಯೋಗ

ನವದೆಹಲಿ, ಡಿ.22– ಬಾಹ್ಯಾಕಾಶದಲ್ಲಿ ಬೀಜಗಳು ಮೊಳಕೆಯೊಡೆಯುವುದು ಮತ್ತು ಅಲ್ಲಿ ಸಂಗ್ರಹವಾಗಿರುವ ಉಪಗ್ರಹಗಳ ಅವಶೇಷಗಳನ್ನು 'ರೋಬಾಟಿಕ್ ತೋಳು' ಬಳಸಿ ತೆರವುಗೊಳಿಸುವ ಪ್ರಯೋಗವನ್ನು ಕೈಗೊಳ್ಳಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮುಂದಾಗಿದೆ.

ಇಸ್ರೊ ತನ್ನ ಮುಂದಿನ ಉಡಾವಣೆಗೆ ಬಳಸುವ 'ಪಿಒಇಎಂ–4' ರಾಕೆಟ್ ಹಲವು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದೆ. 'ಪಿಎಸ್‌ಎಲ್‌ವಿ–60' ಮಿಷನ್ ಈ ತಿಂಗಳ ಕೊನೆಯಲ್ಲಿ ನಡೆಯಲಿದ್ದು, 'ಚೇಸರ್' ಮತ್ತು 'ಟಾರ್ಗೆಟ್' ಹೆಸರಿನ ಎರಡು ಉಪಗ್ರಹಗಳನ್ನು 'ಪಿಒಇಎಂ–4' ರಾಕೆಟ್ ಕಕ್ಷೆಗೆ ಸೇರಿಸಲಿದೆ.

ಈ ಉಪಗ್ರಹಗಳನ್ನು ನಿರ್ದಿಷ್ಟ ಕಕ್ಷೆಯಲ್ಲಿ ಸೇರಿಸಿದ ನಂತರ, ಪಿಎಸ್‌ಎಲ್‌ವಿ ಆರ್ಬಿಟಲ್ ಎಕ್ಸ್‌ಪರಿಮೆಂಟ್ ಮಾಡ್ಯೂಲ್ (ಪಿಒಇಎಂ) ರಾಕೆಟ್ ನೆರವಿನಿಂದ ವಿವಿಧ ರೀತಿಯ 24 ಪ್ರಯೋಗಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಇದರಲ್ಲಿ 14 ಪ್ರಯೋಗಗಳು ಇಸ್ರೊದ ಪ್ರಯೋಗಾಲಯಗಳಿಂದ ಮತ್ತು ಇತರ 10 ಪ್ರಯೋಗಗಳು ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ನವೋದ್ಯಮಗಳಿಂದ ನಡೆಯಲಿವೆ. ■ 9ನೇ ಪುಟಕ್ಕೆ

ಗರಗಸ ಆರ್ಡರ್ ನೆಪದಲ್ಲಿ ಭೀಕರ ಹತ್ಯೆ ಪ್ರಕರಣ

ಆನ್‌ಲೈನ್ ಗೇಮ್ ಸುಳಿಗೆ ಸಿಲುಕಿ ಲಕ್ಷ ಲಕ್ಷ ಸಾಲ ಮಾಡಿದ್ದ ಕೊಲೆ ಪಾತಕಿ

- ಸಾಲ ತೀರಿಸಲು ದರೋಡೆ ಪ್ಲ್ಯಾನ್, ಅಡ್ಡ ಬಂದವರ ಹತ್ಯೆಗಾಗಿ ಗರಗಸ ಖರೀದಿ
- ಕೆನ್ನಾಳು ಗ್ರಾಮದಲ್ಲೂ ದರೋಡೆಗೆ ಯತ್ನಿಸಿದ್ದ

ಶ್ರೀರಂಗಪಟ್ಟಣ, ಡಿ.22– ಕ್ಯಾತನಹಳ್ಳಿ ಬರ್ಬರ ಹತ್ಯೆ ಪ್ರಕರಣದ ಪಾತಕಿ ಮೊಹಮದ್ ಇಬ್ರಾಹಿಂ ವಿಚಾರಣೆ ವೇಳೆ ಶಾಕಿಂಗ್ ವಿಚಾರ ಬಾಯ್ಬಿಟ್ಟಿದ್ದಾನೆ. ಕೊಲೆಗಡುಕನ ಹಿನ್ನೆಲೆ ಕೇಳಿ ಪೊಲೀಸರೇ ಶಾಕ್ ಆಗಿದ್ದಾರೆ.



ಮೊಹಮದ್ ಇಬ್ರಾಹಿಂ

ಕೊಲೆ ಆರೋಪಿ ಮೊಹಮ್ಮದ್ ಇಬ್ರಾಹಿಂ ಮೂಲತಃ ಶ್ರೀರಂಗಪಟ್ಟಣದ ಅಂಚೆಕೇರಿ ಬೀದಿ ನಿವಾಸಿ. ಈತ ನಂಜನಗೂಡಿನ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂದಿದೆ. 27 ವರ್ಷದ ಈತ ಆನ್‌ಲೈನ್ ಗೇಮ್ ಚಟ ಹೊಂದಿದ್ದು, ಇದರಿಂದ ಲಕ್ಷ ಲಕ್ಷ ಸಾಲ ಮಾಡಿಕೊಂಡಿದ್ದ. ಸಾಲ ಕೊಟ್ಟವರ ಕಾಟ ತಡೆಯಲಾಗದೇ ತಲೆಮರಿಸಿಕೊಂಡು ಓಡಾಡುತ್ತಿದ್ದ ಮಹಮದ್ ಇಬ್ರಾಹಿಂ, ಹೇಗಾದರೂ ಮಾಡಿ ಸಾಲ ತೀರಿಸಲು ದರೋಡೆಗೆ ಪ್ಲ್ಯಾನ್ ಮಾಡಿದ್ದ ಈತ ಅಡ್ಡ ಬಂದವರನ್ನು ಕತ್ತರಿಸಲು ಯಾಂತ್ರಿಕ ಗರಗಸ ಖರೀಸಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

ಒಂಟಿ ಮನೆಗಳನ್ನೇ ಟಾರ್ಗೆಟ್ ಮಾಡಿದ್ದ ಈತ ಕ್ಯಾತನಹಳ್ಳಿಗೂ ಮುನ್ನ ಕೆನ್ನಾಳು ಗ್ರಾಮ ಒಂಟಿ ಮನೆಗೆ ತೆರಳಿದ್ದಾನೆ. ಅಲ್ಲಿ ಇಂದ್ರಮ್ಮ ಎನ್ನುವವರ ಮನೆಗೆ ಹೋಗಿ ಮರ ಕೊರೆಯುವ ಯಂತ್ರ ಬಂದಿದೆ ಎಂದು ತೋರಿಸಿದಾಗ ಅವರು ನನಗೆ ಯಾವುದೇ ಯಂತ್ರ ಬೇಡ ಎಂದು ಆತನನ್ನು ಕಳುಹಿಸಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಇಂದ್ರಮ್ಮ, ಆ ಮಾರುತಿ ನನ್ನ ಜೀವ ಕಾಪಾಡಿದ್ದಾನೆ. ದೇವರಿಗೆ ಪೂಜೆ ಮಾಡಲು ನಾನು ತಯಾರಿ ಮಾಡಿಕೊಳ್ಳುತ್ತಿದ್ದ ವೇಳೆ ಆತ ಬಂದು ಮನೆಯ ಬಾಗಿಲು ಬಡಿದಿದ್ದ. ಮರ ಕತ್ತರಿಸುವ ಯಂತ್ರ ಬಂದಿದೆ ಎಂದು ಹೇಳಿದ. ನಾನು ಯಾವುದೇ ■ 9ನೇ ಪುಟಕ್ಕೆ

ಇಂದು ಮೈಸೂರಲ್ಲಿ ವಿಶ್ವ ರೈತದಿನ–ರೈತ ಹಬ್ಬ

ಮೈಸೂರು, ಡಿ.22(ಜಿಎ)–ರೈತರಲ್ಲಿ ಜಾಗೃತಿ ಹಾಗೂ ಅನ್ನದಾತರ ಬಗ್ಗೆ ಅಭಿಮಾನ ಮೂಡಿಸುವ ನಿಟ್ಟಿನಲ್ಲಿ ಡಿ.23ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ರೈತ ಸಂಘ ಹಸಿರು ಸೇನೆ, ರಾಜ್ಯ ಕಬ್ಬು ಬೆಳೆಗಾರರ ಸಂಘಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ರೈತ ದಿನ– ರೈತರ ಹಬ್ಬ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಅಂತರಾಷ್ಟ್ರೀಯ ಹಸಿರು ಪರಿಸರ ವಿಜ್ಞಾನಿ ಡಾ.ಚಂದ್ರಶೇಖರ್, ತಮಿಳುನಾಡಿನ ರೈತ ಮುಖಂಡ ಪಿ.ಆರ್. ಪಾಂಡ್ಯನ್, ತೆಲಂಗಾಣದ ರೈತ ಮುಖಂಡ ವೆಂಕಟೇಶ್ವರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಅಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ, ಮುಕ್ತ ವಿವಿ ಕುಲಪತಿ ಶರಣಪ್ಪ ವಿ. ಹಲಸೆ, ಪ್ರಗತಿಪರ ರೈತ ಕಲ್ಮೇಶ್ ಯಲದಗಿ, ಕೇರಳ ರೈತ ಮುಖಂಡ ಕೆ.ವಿ. ಬಿಜು, ತಮಿಳುನಾಡಿನ ರೈತ ಮುಖಂಡ ರಾಮನ್ ಗೌಂಡರ್ ಉಪಸ್ಥಿತರಿರುವರು. ಈ ವೇಳೆ ಪ್ರಗತಿಪರ ರೈತರಿಗೆ ಗೌರವ ಪುರಸ್ಕಾರ ನೀಡಲಾಗುವುದು ಎಂದು ತಿಳಿಸಿದರು.

ಆಹಾರ ಉತ್ಪಾದನೆಗೆ ರೈತ ಮತ್ತು ಕೃಷಿ ಕಾರ್ಮಿಕರ ಶ್ರಮ ಕಾರಣವಾಗಿದೆ. ಈ ಹಿಂದೆ ಆಹಾರ ಸ್ವಾವಲಂಬನೆ ಸಾಧ್ಯವಾಗಿರಲಿಲ್ಲ. ಆದರೆ ಈಗ ಬೇರೆ ದೇಶಗಳಿಗೂ ರಫ್ತು ಮಾಡುವ ಸ್ಥಿತಿಯಲ್ಲಿದ್ದೇವೆ. ಹೀಗಾಗಿ ರೈತರಲ್ಲಿ ಜಾಗೃತಿ ಮೂಡಿಸಿ, ಜನರಿಗೆ ಅನ್ನದಾತರ ಬಗ್ಗೆ ಅಭಿಮಾನ ಮೂಡಿಸುವ ಉದ್ದೇಶ ಈ ಕಾರ್ಯಕ್ರಮವಾಗಿದೆ. ಇನ್ನು, ಈಗ ರೈತರ ಬದುಕು ಸಂಕಷ್ಟದಲ್ಲಿದ್ದು, ಈ ಕುರಿತು ಕ್ರಮಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲು ಕೆಲವೊಂದು ಬೇಡಿಕೆ ಮಂಡಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಅತ್ತಹಳ್ಳಿ ದೇವರಾಜು, ಪೈಲ್ವಾನ್ ವೆಂಕಟೇಶ್, ಬರಡನಪುರ ನಾಗರಾಜ್, ಬನ್ನೂರು ಸೂರಿ, ಸುನಿಲ್ ಉಪಸ್ಥಿತರಿದ್ದರು.

ಮರೀಗೌಡರಿಗೆ ಹುಟ್ಟುಹಬ್ಬದ ಶುಭಾಶಯ



ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಕೇರ್ಗಳ್ಳಿ ಬಸವೇಗೌಡ ಹಾಗೂ ಸ್ನೇಹಿತರು ಚಾಮುಂಡಿಬೆಟ್ಟದಲ್ಲಿ ದೇವಿಗೆ ಪೂಜೆ ಸಲ್ಲಿಸಿ, ಗೌಡರಿಗೆ ಶುಭ ಕೋರಿದರು. ಭರತ್ ಕಾಳಯ್ಯ, ಮಾಜಿ ಸದಸ್ಯರಾದ ರವಿ, ಶಿವಪ್ಪ, ಹುಚ್ಚಪ್ಪ, ನಾಗಣ್ಣಕುಮಾರ್ ಸಿದ್ದರಾಮು, ಮಹದೇವಸ್ವಾಮಿ ಪ್ರಕಾಶ್ ಇದ್ದರು.

ಸಿ.ಟಿ.ರವಿ ಸದಸ್ಯತ್ವ ರದ್ದಾಗಬೇಕು



ಸುಬ್ರಹ್ಮಣ್ಯ

ಮೈಸೂರು,ಡಿ.22–ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಕುರಿತು ಅಶ್ಲೀಲ ಪದ ಬಳಸುವ ಮೂಲಕ ಸಿ.ಟಿ.ರವಿ ಇಡೀ ರಾಜ್ಯದ ಮಹಿಳೆಯರನ್ನು ಅವಮಾನಿಸಿದ್ದು, ಅವರ ಈ ವರ್ತನೆ ಕ್ಷಮಿಸುವಂಥದ್ದಲ್ಲ. ಕೂಡಲೇ ಪರಿಷತ್ ಸದಸ್ಯತ್ವವನ್ನು ಸಭಾಪತಿಗಳು ರದ್ದುಗೊಳಿಸಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆಗ್ರಹಿಸಿದ್ದಾರೆ.

ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ನಿಂದನೆ ಆರೋಪಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಅವರು, ಸಿ.ಟಿ.ರವಿ ಬಂಧನ ವಿರೋಧಿಸಿ ಬಿಜೆಪಿಯವರು ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿರುವುದನ್ನು ನೋಡಿದರೆ ಬಿಜೆಪಿಯವರಿಗೆ ನಾಚಿಕೆ ಆಗಬೇಕು. ದೇಶಕ್ಕಾಗಿ ಹೋರಾಡಿ ಅರೆಸ್ಟ್ ಆಗಿದ್ದಾರಾ ಎಂದು ಕಿಡಿಕಾರಿದರು. ಹೆಣ್ಣು ಮಗಳು ಯಾರೇ ಆಗಿದ್ದರೂ ಈ ರೀತಿ ಪದ ಬಳಸುವುದನ್ನು ಸಮರ್ಥಿಸಿಕೊಳ್ಳಲಾಗದು. ಬಿಜೆಪಿ ನಾಯಕರು ಮಹಿಳೆಯರಿಗೆ ಗೌರವ ನೀಡುವುದಿಲ್ಲ. ಇದು ಅವರ ಮನಸ್ಥಿತಿ ತೋರಿಸುತ್ತದೆ. ಆ ಧೋರಣೆ ಈಗ ಸಿಟಿ ರವಿ ಅವರಿಂದ ಹೊರಗೆ ಬಂದಿದೆ. ಅವರಿಗೆ ಮರ್ಯಾದೆ ಇದ್ದರೆ, ಕೂಡಲೇ ರಾಜೀನಾಮೆ ಕೊಡಬೇಕು. ಇಡೀ ಸದನದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ...



ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೆಂಗಳೂರಿನ ಅವರ ನಿವಾಸದಲ್ಲಿ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ, ಹುಬ್ಬಳ್ಳಿ ಕ್ಷೇತ್ರದ ಶಾಸಕ ಅಬ್ಬಯ್ಯ ಪ್ರಸಾದ್, ಬೆಂಗಳೂರು ಕಂಠೀರವ ಸ್ಟೇಡಿಯಂ ಅಧ್ಯಕ್ಷ ಮೆಹಬೂಬ್ ಪಾಷ, ರಾಜ್ಯ ಯುವ ಕಾಂಗ್ರೆಸ್ ಉಪಾಧ್ಯಕ್ಷ ಶಿವಕುಮಾರ್, ಡಾ.ಮೂರ್ತಿ, ಕೆಪಿಸಿಸಿ ಸಂಯೋಜಕ ಬಂಡೀಪಾಳ್ಯ ವಿಜಯ್‌ಕುಮಾರ್, ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ಮೈಸೂರು ಜಿಲ್ಲಾಧ್ಯಕ್ಷ ನಂಜನಗೂಡು ಪ್ರದೀಪ್, ಮಹೇಶ್ ಇದ್ದರು.

ಡಾ.ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾ ವಜಾಕ್ಕೆ ಆಗ್ರಹ

ಮೈಸೂರು, ಡಿ.22(ಜಿಎ)–ಡಾ.ಬಿ.ಆರ್. ಅಂಬೇಡ್ಕರ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಗೃಹ ಸಚಿವ ಅಮಿತ್ ಶಾ ಅವರನ್ನು ಪ್ರಧಾನಿ ಮೋದಿ ಅವರು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಗೌರವಾಧ್ಯಕ್ಷ ಡಾ.ಉಮಾಪತಿ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರು ಸರ್ವ ಜನಾಂಗದ ಒಳಿತಿಗಾಗಿ ಸಂವಿಧಾನ ರಚಿಸಿದ್ದಾರೆ. ಎಲ್ಲರಿಗೂ ಸಮಾನವಾದ ಅವಕಾಶ ಮತ್ತು ಹಕ್ಕುಗಳನ್ನು ದೊರಕಿಸಿ ಕೊಟ್ಟಿದ್ದಾರೆ. ಅವರಿಗೆ ಅವಮಾನ ಮಾಡಿರುವುದು ದೇಶಕ್ಕೆ ಮಾಡಿದ ಅವಮಾನ. ಆದ್ದರಿಂದ ಅಮಿತ್ ಶಾ ನಮ್ಮ ದೇಶದಲ್ಲಿ ವಾಸಿಸಲು ಸೂಕ್ತ ವ್ಯಕ್ತಿಯಲ್ಲ ಎಂದು ಕಿಡಿಕಾರಿ, ಒಂದು ವೇಳೆ ಅಮಿತ್ ಷಾ ಅವರನ್ನು ಸಂಪುಟದಿಂದ ವಜಾಗೊಳಿಸದೆ ಹೋದರೆ ರಾಜ್ಯದಾದ್ಯಂತ ಹೋರಾಟವನ್ನು ನಡೆಸಲಾಗುವುದು ಎಂದರು. ಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷೆ ಸುಶೀಲ, ಪುಟ್ಟರಾಜು, ಚಾಮರಾಜು, ಭಾಗ್ಯಮ್ಮ, ಲತಾ ಇದ್ದರು.

ಇಂದು ಜನಸಂಪರ್ಕ ಸಭೆ

ಮೈಸೂರು,ಡಿ.22– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ಎನ್.ಆರ್. ಮೊಹಲ್ಲಾ ವಿಭಾಗ ವ್ಯಾಪ್ತಿಯ ಜನಸಂಪರ್ಕ ಸಭೆಯನ್ನು ಡಿ.23ರಂದು ಆಯೋಜಿಸಲಾಗಿದೆ. ಡಿ.23ರಂದು ಬೆಳಗ್ಗೆ 11 ಗಂಟೆಗೆ ಕೇಂದ್ರ ಉಪವಿಭಾಗ ಕಚೇರಿಯಲ್ಲಿ ಹಾಗೂ ಮಧ್ಯಾಹ್ನ 3 ಗಂಟೆಗೆ ಎನ್.ಆರ್.ಮೊಹಲ್ಲಾ ಉಪವಿಭಾಗ ಕಚೇರಿಯಲ್ಲಿ ಜನಸಂಪರ್ಕ ಸಭೆ ನಡೆಯಲಿದ್ದು, ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಉಪವಿಭಾಗಗಳಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಪರಮೇಶ್‌ಗೆ ಪಿಹೆಚ್.ಡಿ

ಮೈಸೂರು, ಡಿ.22– ಮೈಸೂರಿನ ಹಳೆ ಕೆಸರೆ ನಿವಾಸಿ ಎಂ.ಪರಮೇಶ್ ಅವರು ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಮೆಕಾನಿಕಲ್ ವಿಭಾಗದ ಮುಖ್ಯಸ್ಥ ಡಾ.ಜಿ.ಮಲ್ಲೇಶ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಮಂಡಿಸಿದ 'ಡಿಸೈನ್, ಡೆವಲಪ್ಮೆಂಟ್, ಫ್ಯಾಬ್ರಿಕೇಷನ್ ಅಂಡ್ ಟೆಸ್ಟಿಂಗ್ ಆಫ್ ಎಕೋ ಫ್ರೆಂಡ್ಲಿ ಕಾಂಪೋಸಿಟ್ ಮೆಟೀರಿಯಲ್ ಫಾರ್ ಆಟೋಮೋಟಿವ್ ಬ್ರೇಕ್ ಪ್ಯಾಡ್ ಅಪ್ಲಿಕೇಷನ್ಸ್' ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.



ಮರಿಸ್ವಾಮಿ ಹಾಗೂ ಪುಟ್ಟ ಚಂದ್ರಮ್ಮ ದಂಪತಿ ಪುತ್ರರಾದ ಎಂ.ಪರಮೇಶ್, ಮೈಸೂರು ಜಿಲ್ಲಾ ಹಾಲು ಒಕ್ಕೂಟದಲ್ಲಿ ವಿಸ್ತಾರಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸ್ಪಷ್ಟ ಗುರಿಯೊಂದಿಗೆ ಕಠಿಣ ವಿದ್ಯಾಭ್ಯಾಸ ಮಾಡಿದರೆ ಮಾತ್ರ ಸಾಧನೆ ಸಾಧ್ಯ

ಹಾಸನ ಬಳಗದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅಭಿಮತ



ಹಾಸನ ಬಳಗದ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಮೈಸೂರು, ಡಿ.22(ಎಂಟಿವೈ)– ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ಕಠಿಣ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಹಾಸನ ಜಿಲ್ಲಾ ಬಳಗ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸರ್ವ ಸದಸ್ಯರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲರೂ ಈ ಭೂಮಿ ಮೇಲೆ ಆಕಸ್ಮಿಕವಾಗಿ ಹುಟ್ಟಿದ್ದೇವೆ. ಹುಟ್ಟಿದ ಮೇಲೆ ಏನಾದರೂ ಸಾಧನೆ ಮಾಡಬೇಕು. ನಾಡಿಗೆ ಮತ್ತು ದೇಶಕ್ಕೆ ಒಳ್ಳೆಯದನ್ನು ಮಾಡುವ ಕೆಲಸ ಮಾಡಬೇಕು. ಯಾವುದೇ ಒಬ್ಬ ವ್ಯಕ್ತಿ ಸಾಧಕನಾಗದೆ, ಬಾಧಕನಾದರೆ ಆತ ತನ್ನ ಕುಟುಂಬಕ್ಕೆ ಮಾತ್ರವಲ್ಲ, ಸಮಾಜಕ್ಕೂ ಹೊರೆಯಾಗುತ್ತಾನೆ. ಆದ್ದರಿಂದ ಪ್ರತಿಯೊಬ್ಬರೂ ವಿದ್ಯಾರ್ಥಿ ಬದುಕಿನಿಂದಲೇ ಸಂಕುಚಿತ ಆಲೋಚನೆಗಳನ್ನು ಮನಸಿನಿಂದ ತೆಗೆದು ಹಾಕಿ ವಿಶಾಲ ವಾದ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಮಾತನಾಡಿ, ಹಾಸನ ಜಿಲ್ಲೆ ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ತನ್ನದೇ ಆದ ಕೊಡುಗೆ ನೀಡಿದೆ. ಸರಕಾರಿ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆ ಮಾತ್ರವಲ್ಲ, ಶಿಕ್ಷಕರ ಕೊರತೆ ಕೂಡ ಇದೆ. ರಾಜ್ಯದಲ್ಲಿ 65 ಸಾವಿರ ಶಿಕ್ಷಕರ ಕೊರತೆ ಇದ್ದು, ಶಿಕ್ಷಕರ ಭರ್ತಿಗೆ ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದು ಹೇಳಿದರು.

ಹಾಸನ ಜಿಲ್ಲಾ ಬಳಗದ ಅಧ್ಯಕ್ಷ ಪಿ.ಶಾರದಮ್ಮ ಮಾತನಾಡಿ, ಹಾಸನ ಜಿಲ್ಲೆ ಒಂದು ಅದ್ಭುತ ಜಗತ್ತು. ಇಲ್ಲಿರುವ ಸಂಸ್ಕೃತಿ, ರಾಜಕೀಯ ಬೇರೆ ಜಿಲ್ಲೆಯಲ್ಲಿ ಇಲ್ಲ. ನಮ್ಮ ಜಿಲ್ಲೆಯ ಮಹತ್ವ ಸಾರುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇನ್ನೂ ಹೆಚ್ಚು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುವ ಮೂಲಕ ಸಂಘವನ್ನು ಮತ್ತಷ್ಟು ಸಂಘಟನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಾಸನ ಬಳಗದ ವತಿಯಿಂದ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಅಲ್ಲದೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಉದ್ಯಮಿ ಬಾಲಾಜಿ ಶೇಖರ್, ಹಾಸನ ಜಿಲ್ಲೆ ಬಳಗದ ಗೌರವಾಧ್ಯಕ್ಷ ಬಿ.ಬಿ.ರಾಮಕೃಷ್ಣ, ಉಪಾಧ್ಯಕ್ಷೆ ಮೋದಾಮಣಿ, ಪ್ರಧಾನ ಕಾರ್ಯದರ್ಶಿ ಬಿ.ಜಿ.ರಂಗೇಗೌಡ, ಸಂಘಟನಾ ಕಾರ್ಯದರ್ಶಿ ಡಾ.ಕೆ.ಎನ್.ಶಶಿಕುಮಾರ್, ಯೋಗ ಶಿಕ್ಷಕ ಕೆ.ಜಿ.ದೇವರಾಜು ಮತ್ತಿತರರಿದ್ದರು.

ಮುಖವರ್ಣ ಚಿತ್ರ, ಮಣ್ಣಿನ ಕಲಾಕೃತಿ ಸ್ಪರ್ಧೆ

ಮೈಸೂರು,ಡಿ.22– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ದಸರಾ ವಸ್ತುಪ್ರದರ್ಶನದ ಅಂಗವಾಗಿ ಲಲಿತ ಕಲೆ ಮತ್ತು ಕರಕುಶಲಕಲೆ ಉಪಸಮಿತಿ ವತಿಯಿಂದ ಡಿ.29ರಂದು ಮಧ್ಯಾಹ್ನ 2ರಿಂದ ಸಂಜೆ 4.30ರವರೆಗೆ 'ಮುಖವರ್ಣ ಚಿತ್ರ' ಹಾಗೂ 'ಮಣ್ಣಿನ ಕಲಾಕೃತಿ' ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ 18 ವರ್ಷ ಮೇಲ್ಪಟ್ಟ ಕಲಾವಿದರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಬಹುದು. ಮಣ್ಣಿನ ಕಲಾಕೃತಿ ಸ್ಪರ್ಧೆಗೆ 10 ವರ್ಷ ಮೇಲ್ಪಟ್ಟವರು ಭಾಗವಹಿಸಬಹುದು. ಆಸಕ್ತರು ಅಗತ್ಯವಿರುವ ಕಲಾ ಸಾಮಗ್ರಿಗಳೊಂದಿಗೆ ಭಾಗವಹಿಸಬೇಕು. ವಿಜೇತರಿಗೆ ಪ್ರಥಮ ದ್ವಿತೀಯ, ತೃತೀಯ ಹಾಗೂ ಎರಡು ಸಮಾಧಾನಕರ ಬಹುಮಾನಗಳನ್ನು ನೀಡಲಾಗುತ್ತದೆ. ಆಸಕ್ತರು ಡಿ.27ರೊಳಗೆ ಮೊ.ಸಂ: 9964410760 ಹಾಗೂ 9741669845 ಅನ್ನು ಸಂಪರ್ಕಿಸಿ ಸ್ಪರ್ಧೆಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ತಪಾಸಣಾ ಶಿಬಿರ

ಮೈಸೂರು: ಬಡಗನಾಡು ಬಳಗ ವತಿಯಿಂದ ಜನವರಿ 4ರಂದು ಬೆಳಗ್ಗೆ 10ರಿಂದ ಸಂಕ್ರಾಂತಿ ಹಬ್ಬದ ಅಂಗವಾಗಿ ರಾಮಕೃಷ್ಣನಗರದ ಬಡಗನಾಡು ಭವನದಲ್ಲಿ ಸಂಕ್ರಾಂತಿ ಮೇಳ, ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9845698495 ಸಂಪರ್ಕಿಸಬಹುದು.

ಮೈಸೂರಲ್ಲಿ ಡಿ.31ರಂದು ರೈತ ದಿನಾಚರಣೆ



ಮೈಸೂರಿನ ಗನ್ ಹೌಸ್ ಬಳಿಯ ಕುವೆಂಪು ಉದ್ಯಾನವನದಲ್ಲಿ ಶನಿವಾರ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಭೆ ನಡೆಯಿತು.

ಮೈಸೂರು, ಡಿ.22(ಬಿಎಲ್‌ಯು)– ಮೈಸೂರಿನ ಕಲಾಮಂದಿರದಲ್ಲಿ ಡಿಸೆಂಬರ್ 31ರಂದು ರೈತ ದಿನಾಚರಣೆ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ನಗರದ ಕುವೆಂಪು ಉದ್ಯಾನವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ ಸಾನಿಧ್ಯದಲ್ಲಿ ಅಂದು ನಡೆಯುವ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಬೈರೇಗೌಡ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು.


ರೈತರ ಸಾಲ ಸಂಪೂರ್ಣ ಮನ್ನಾ, ಸ್ವಾಮಿನಾಥನ್ ವರದಿ ಜಾರಿ, ಪ್ರತಿ ಟನ್ ಕಬ್ಬಿಗೆ 5,500 ರೂ. ನಿಗದಿ, ಕಳೆದ ಸಾಲಿನ ಕಬ್ಬಿನ 950 ಬಾಕಿ ಪಾವತಿ, ರೈತರ ಕೃಷಿ ಪಂಪ್ ಸೆಟ್ ಸಕ್ರಮ, ಭತ್ತಕ್ಕೆ 500 ರೂ. ಹೆಚ್ಚುವರಿ ಪ್ರೋತ್ಸಾಹ ಧನ ಪಾವತಿ, ರೈತರ ಆಸ್ತಿ ದಾಖಲೆ ಯಲ್ಲಿರುವ ವಕ್ಫ್ ಉಲ್ಲೇಖ ತೆರವು ಮಾಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಅಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಭಾಗ್ಯರಾಜ್ ತಿಳಿಸಿದರು.

ಸಂಘದ ರಾಜ್ಯ ಖಜಾಂಚಿ ಕೆರೆಹುಂಡಿ ರಾಜಣ್ಣ, ಜಿಲ್ಲಾಧ್ಯಕ್ಷ ಹಾಡ್ಯ ರವಿ, ಮುಖಂಡರಾದ ನಾಗರಾಜ್, ಮಂಜೇಶ್, ಚಿಕ್ಕಸ್ವಾಮಿ, ಅಂಬಳೆ ಮಹದೇವಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಲೆಮಾರಿಗಳ ಸಮಾವೇಶಕ್ಕೆ ಮೈಸೂರಲ್ಲಿ ಇಂದು ಚಾಲನೆ

ಮೈಸೂರು, ಡಿ.22–ದಕ್ಷಿಣ ಭಾರತದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಡಿ.23ರಂದು ಬೆಳಗ್ಗೆ 10.30ಕ್ಕೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಓವರ್ ಲ್ಯಾಂಡ್ ಅಸೋಸಿಯೇಷನ್ ವತಿಯಿಂದ ಅಲೆಮಾರಿಗಳ ಸಮಾವೇಶಕ್ಕೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಸಮಾವೇಶವು ಮೈಸೂರಿನಲ್ಲಿ ಪ್ರಥಮ ಅಲೆಮಾರಿಗಳ ಒಗ್ಗೂಡುವಿಕೆಗೆ ಸಾಕ್ಷಿಯಾಗಲಿದೆ. ಇಂದಿನಿಂದ ಡಿ.30ರವರೆಗೆ ದೇಶಾದ್ಯಂತ ಇರುವ ಅಲೆಮಾರಿಗಳು, ಪರಿಸರ ಪ್ರೇಮಿಗಳು ಕೊಡಗಿಗೆ ಮೈಸೂರಿನ ಮೂಲಕ ತಮ್ಮದೇ ಆದ ವಾಹನದಲ್ಲಿ ಪ್ರಯಾಣಿಸಿ ಯಾವುದೇ ರೀತಿಯ ಪರಿಸರಕ್ಕೆ ಧಕ್ಕೆಯಾಗದಂತೆ ತಮ್ಮ ತಮ್ಮ ವಾಹನದಲ್ಲಿಯೇ ವಾಸ್ತವ್ಯ ಹೂಡಿ, ಸಾಮಾಜಿಕ ಸೇವಾ ಕಾರ್ಯಗಳ ಚಟುವಟಿಕೆಗಳಲ್ಲಿ ಭಾಗವಹಿಸಿ, ಯುವ ಜನಾಂಗಕ್ಕೆ ಜಾಗೃತಿ ಮೂಡಿಸುವ ವಿಶಿಷ್ಟವಾದ ವಿನೂತನ ಕಾರ್ಯಕ್ರಮವಾಗಿದೆ. ಕಾರ್ಯಕ್ರಮದ ಮುಖ್ಯಾಂಶಗಳೆಂದರೆ ಆರೋಗ್ಯ ಶಿಬಿರ, ಬಡವರಿಗೆ ಕಂಬಳಿ ವಿತರಿಸುವುದು, ಮಕ್ಕಳಿಗೆ ಪುಸ್ತಕ ವಿತರಣೆ, ಪರಿಸರ ಉಳಿಸಿ ಜಾಗೃತಿ ಮೂಡಿಸಿ ವಿಚಾರ ಸಂಕಿರಣ ಮತ್ತು ಪರಿಸರದಲ್ಲಿ ಉತ್ತಮ ವಾತಾವರಣ ಸೃಷ್ಟಿಸಿ ಮುಂದಿನ ತಲೆಮಾರಿಗೆ ಕಾಪಾಡುವಂತಹ ಪರಿಸರ ಉಳಿಸಿ, ಬೆಳೆಸುವಂತಹ ಕಾರ್ಯಕ್ರಮ ಇದಾಗಿದೆ. ಮಾಹಿತಿಗೆ ಮೊ. 6267089955 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.12.2024 ಸೋಮವಾರ, ಮಳೆ ನಕ್ಷತ್ರ: ಮೂಲ, 16.12.2024ರಿಂದ 28.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ) :** 64ನೇ ವಾರ್ಷಿಕ ಪೂಜಾ ಮಹೋತ್ಸವ, 25ನೇ ವಾರ್ಷಿಕ ಧ್ವಜಾರೋಹಣ ಮಹೋತ್ಸವ, ಬೆಳಗ್ಗೆ 5.30ರಿಂದ ಮಹಾಗಣಪತಿ ಹೋಮ, ಉಷ ಪೂಜೆ, ಚತುಶುದ್ಧಿ, ದಾರ, ಮಧ್ಯಾಹ್ನ 12ಕ್ಕೆ ಪಂಚಗವ್ಯಂ, ಪಂಚಕಮ್, ಕಳಶ ಪೂಜಾ, ಶೀವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ ಕಳಶಾಭಿಷೇಕಂ, ಉಚ್ಚ ಪೂಜಾ, ಮಧ್ಯಾಹ್ನ 12.30ಕ್ಕೆ ಮಹಾ ಅನ್ನದಾನ, ಸಂಜೆ 5.30ಕ್ಕೆ ದೀಪಾರಾಧನೆ, ಅತ್ತಾಳ ಪೂಜಾ, ಶ್ರೀ ಭೂತ ಬಲಿ, ವಿಳಕ್ಕು, ರಾತ್ರಿ 9 ಗಂಟೆಗೆ ಪ್ರಸಾದ ವಿನಿಯೋಗ, ವಿಶೇಷ ತಾಯಂಬಕೆ–ವಾದ್ಯ ಕಲಾರತ್ನ ಶ್ರೀ ಪಯ್ಯವೂರು, ಗೋಪಾಲ್ ಕುಟ್ಟಿ ಮಾರಾರ್ ಮತ್ತು ವೃಂದದವರಿಂದ, ಸ್ಥಳ: ದೇವಸ್ಥಾನ ಪ್ರಾಂಗಣ, ಚಾಮುಂಡಿಬೆಟ್ಟ ಪಾದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಭಾಗೀಯ ಪತ್ರಾಗಾರ ಕಚೇರಿ (ಮೈಸೂರು) :** ಸಾರ್ವಜನಿಕ ದಾಖಲೆಗಳ ಅಧಿನಿಯಮ ಮತ್ತು ದಾಖಲೆಗಳ ನಿರ್ವಹಣೆ ಕುರಿತು ತರಬೇತಿ ಕಾರ್ಯಾಗಾರ, ಉದ್ಘಾಟನೆ: ವಿಭಾಗೀಯ ಪತ್ರಾಗಾರ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಡಾ. ಜೆ.ವಿ. ಗಾಯತ್ರಿ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕ ಡಾ. ಗವಿಸಿದ್ದಯ್ಯ, ಸ್ಥಳ: ಕಚೇರಿ ಸಭಾಂಗಣ, ವಿಭಾಗೀಯ ಪತ್ರಾಗಾರ ಕಚೇರಿ, ಬೆಳಗ್ಗೆ 10 ಗಂಟೆಯಿಂದ.

■ **ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ರಾಜ್ಯ ಕಬ್ಬು ಬೆಳೆಗಾರರ ಸಂಘ:** ವಿಶ್ವ ರೈತ ದಿನ–ರೈತರ ಹಬ್ಬ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಮುಖ್ಯ ಅತಿಥಿಗಳು: ಅಂತಾರಾಷ್ಟ್ರೀಯ ಹಸಿರು ಪರಿಸರ ವಿಜ್ಞಾನಿ ಡಾ. ಚಂದ್ರಶೇಖರ್ ಬಿರಾದಾರ್, ತಮಿಳುನಾಡು ರೈತ ಮುಖಂಡ ಪಿ.ಆರ್. ಪಾಂಡ್ಯನ್, ತೆಲಂಗಾಣ ರೈತ ಮುಖಂಡ ವೆಂಕಟೇಶ್ವರ, ಜಾನಪದ ಸಂಗೀತ ವೈಭವ–ಇನಿದನಿ ಮಣ್ಣ ಮಕ್ಕಳ ಹೊನ್ನ ಪದಗಳ ಬಳಗ, ಡಾ. ಕಾ. ರಾಮೇಶ್ವರಪ್ಪ ಅವರಿಂದ, ದಂಡಿನ್ ಪ್ರತಿಷ್ಠಾನ ಕೊಡುಗೆ–ಪ್ರಗತಿಪರ ರೈತರಿಗೆ ಹಾಗೂ ಪರಿಸರ ಪ್ರೇಮಿಗಳಿಗೆ ಗೌರವ ಪುರಸ್ಕಾರ, ಸಂಜೆ ಸಮಾರೋಪ ಸಮಾರಂಭ: ಕೇಂದ್ರ ರಾಜ್ಯ ರೈಲ್ವೆ ಖಾತೆ ಸಚಿವ ವಿ. ಸೋಮಣ್ಣ, ಮುಖ್ಯ ಅತಿಥಿಗಳು: ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸಮಗ್ರ ಕೃಷಿ ರೈತರಿಗೆ ಐಎಎಸ್ ಪದವಿ ಪುರಸ್ಕಾರ: ಬೆಳಗಾವಿ ಜಿಲ್ಲೆ ಸಮಗ್ರ ಕೃಷಿ ಉಪನ್ಯಾಸಕರು, ಪ್ರಗತಿಪರ ರೈತರಾದ ಕಲ್ಮೇಶ ಮಲದಗಿ, ಕೇರಳ ರೈತ ಮುಖಂಡ ಕೆ.ವಿ. ಬಿಜು, ತಮಿಳುನಾಡು ರೈತ ಮುಖಂಡ ರಾಮನ್ ಗೌಂಡರ್, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಭವನ, ಹುಣಸೂರು ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ (ರೈತ ಬಣ), ರಾಜ್ಯ ಪ್ರಧಾನ ಕಚೇರಿ :** ಮೈಸೂರು ನಗರದಲ್ಲಿ ಬೃಹತ್ ರೈತ ಜಾಥಾ ಹಾಗೂ ಹಿರಿಯ ರೈತ ಹೋರಾಟಗಾರರಿಗೆ ಸನ್ಮಾನ, ದಿವ್ಯ ಸಾನ್ನಿಧ್ಯ: ಸುತ್ತೂರು ಮಹಾ ಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ, ಧಾರವಾಡದ ವನಸೂರಿನ ಜಗದ್ಗುರು ಶ್ರೀ ರೇವಣ ಸಿದ್ದೇಶ್ವರ ಮಹಾಮಠದ ಶ್ರೀ ಡಾ. ಬಸವರಾಜ ದೇವರು ಸ್ವಾಮೀಜಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಘನ ಉಪಸ್ಥಿತಿ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ ರಾಜ್ಯಾಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ, ಸ್ಥಳ: ಟೌನ್‌ಹಾಲ್, ದೊಡ್ಡ ಗಡಿಯಾರದ ಎದುರು, ಬೆಳಗ್ಗೆ 11 ಗಂಟೆಯಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ರಾಷ್ಟ್ರಮಟ್ಟದ ಕಾರ್ಯಾಗಾರ, ಸ್ಥಳ: ನಳ ಆಡಿಟೋರಿಯಂ, ಮುಕ್ತ ವಿವಿ ಆವರಣ, ಮಧ್ಯಾಹ್ನ 3.30ಕ್ಕೆ.


■ **ಹಿರಿಯ ಗೆಳೆಯರ ಬಳಗ :** ದೇಶದ ಪ್ರಕೃತಿ ಪರೀಕ್ಷಣಾ ಅಭಿಮಾನ (ಆಯುಷ್ ಇಲಾಖೆ), ಉಪನ್ಯಾಸ: ಸರ್ಕಾರಿ ಆಯುರ್ವೇದ ಕಾಲೇಜಿನ ಆರ್‌ಎಂಓ ಡಾ. ಶ್ರೀಮತಿ ಶಶಿರೇಖಾ ಅವರಿಂದ, ಸ್ಥಳ: ರಂಗ ಮಂಟಪ, ಸುಬ್ಬರಾವ್ ಪಾರ್ಕ್, ನಿವೇದಿತನಗರ, ಸಂಜೆ 5 ಗಂಟೆಗೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

■ **ಮೈಸೂರು ಅರಮನೆ ಮಂಡಳಿ :** ಅರಮನೆ ಫಲಪುಷ್ಪ ಪ್ರದರ್ಶನ–2024, ಸಂಜೆ 6ರಿಂದ ಆಯುಷ್ ಎಂ.ಡಿ. ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 7 ಗಂಟೆಗೆ ಖ್ಯಾತ ಮೃದಂಗ ವಿದ್ವಾನ್ ಶ್ರೀ ಅನೂರು ಅನಂತಕೃಷ್ಣಮೂರ್ತಿ ಮತ್ತು ತಂಡದವರಿಂದ 'ಲಯ–ಲಾವಣ್ಯ', ಸ್ಥಳ: ಮೈಸೂರು ಅರಮನೆ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ನಿರ್ಮಲಾ ಜಕಣಾಚಾರಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ.ಪುರುಷೋತ್ತಮ್, ಎಸ್. ಸಂಗೀತಾ ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–"ಕ್ಯಾನ್ಸರ್ ಕುರಿತ ಮಿಥ್ಯೆಗಳು"–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಭಾರತೀಯ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.10–ಮಂಡ್ಯದಲ್ಲಿ ನಡೆಯುತ್ತಿರುವ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೂರನೆಯ ದಿನದ ಗೋಷ್ಠಿಗಳ ಬಾನುಲಿ ಅವತರಣಿಕೆ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಲಲಿತಾ ಹರಿಪ್ರಿಯಾ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ., **ಮಧ್ಯಾಹ್ನ:** 12.05–ವನಿತಾ ವಿಹಾರ, ಹಿರಿಯ ಲೇಖಕಿ, ಬ್ಯಾಡಗಿಯ ಸಂಕಮ್ಮ ಸಂಕಣ್ಣನವರ್ ಅವರೊಂದಿಗೆ ಮಾತು, 12.35–ದೇವರ ನಾಮ, ರಕ್ಷಣಾ. ಆರ್, 12.45–ನಮ್ಮ ಆರೋಗ್ಯ: 'ಲೇಪನ ಚಿಕಿತ್ಸೆ' ಕುರಿತು ಮಂಡ್ಯದ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ತಜ್ಞ ವೈದ್ಯರಾದ ಡಾ.ಸದ್ಗುಣ. ಡಿ.ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, "House for all" ಯೋಜನೆ ಕುರಿತು ಎನ್‌ಐಇ ಕಾಲೇಜಿನ ಪ್ರೊ.ಪ್ರದೀಪ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಜಾಂಪಣ್ಣ ಆಶೀಹಾಳ್, 1.20–ಭಾವಗೀತೆಗಳು– 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯತ್ರಿ ಗಿರೀಶ್–ಹಾಡುಗಾರಿಕೆ, 4.00–ಮಹಿಳಾರಂಗ, 4.45–ಹಿಂದಿ ಪಾಠ–ಡಾ.ಸ್ಮಿತಾ ಚಿಪ್ಳೂಣ್‌ಕರ್, 5.00–ಅಪೋಲೋ ಬಿಜಿಎಸ್ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ವಿಷಯ–ಚಳಿಗಾಲದಲ್ಲಿ ಮಕ್ಕಳ ಆರೋಗ್ಯ ರಕ್ಷಣೆ ಭಾಗವಹಿಸುವ ತಜ್ಞರು–ಡಾ.ಜ್ಯೋತ್ಸ್ನಾ ಎ.ಎಸ್, ಕನ್ಸಲ್ಟಂಟ್ ಪೀಡಿಯಾಟ್ರಿಕ್ ನ್ಯೂರಾಲಜಿಸ್ಟ್ ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, ಪ್ರಾಯೋಜಕರು– ಅಪೋಲೊ ಬಿಜಿಎಸ್ ಆಸ್ಪತ್ರೆ, ಮೈಸೂರು, 6.50–ಕೃಷಿರಂಗ: ರಾಷ್ಟ್ರೀಯ ರೈತರ ದಿನಾಚರಣೆ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾವಯವ ಕೃಷಿಯ ಪ್ರಾಮುಖ್ಯತೆ. ಈ ಕುರಿತು ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಕೋಟೆಕೆರೆ ಗ್ರಾಮದ ಕೃಷಿಕ ಆರ್.ಶೇಷಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಮಂಡ್ಯದಲ್ಲಿ ನಡೆಯುತ್ತಿರುವ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ: ಡಿ.ದಿಗ್ವಿಜಯ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ಚೊಕ್ಕಮ್ಮ, ವೀಣಾವಾದನ ಮತ್ತು ಹಾಡುಗಾರಿಕೆ, 10.00–ರೂಪಕ/ಚರ್ಚೆ/ನುಡಿಚಿತ್ರ, 10.30–ಸವಿನೆನಪು

ಮೈಸೂರು ಮಿತ್ರ

ಸೋಮವಾರ 23 ಡಿಸೆಂಬರ್ 2024

ನಿರ್ಮಾಣ ಹಂತದ ವಿವೇಕ ಸ್ಮಾರಕದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಮಾಗಮ

ಸ್ವಾಮಿ ವಿವೇಕಾನಂದರ ಪಾದಸ್ಪರ್ಶ ಸ್ಥಳದ ಐತಿಹಾಸಿಕ ಸ್ಥಳದ ಬಗ್ಗೆ ಸಮಗ್ರ ಮಾಹಿತಿ



ಮೈಸೂರಿನ ಯಾದವಗಿರಿಯ ರಾಮಕೃಷ್ಣ ಆಶ್ರಮದಲ್ಲಿ ಭಾನುವಾರ ನಡೆದ ಶ್ರೀಮಾತೆ ಶಾರದಾದೇವಿ ಜಯಂತಿ ಹಿನ್ನೆಲೆ ವಿಶೇಷ ಪೂಜೆ ನೆರವೇರಿಸಲಾಯಿತು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ರಾಮಕೃಷ್ಣ ಆಶ್ರಮ ನಿರ್ಮಾಣ ಮಾಡುತ್ತಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳು ಭಾನುವಾರ ಸಮಾಗಮಗೊಂಡಿದ್ದರು.

ಮೈಸೂರು, ಡಿ.22(ಬಿಎಲ್‌ಯು)– ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಹಳೆ ಎನ್‌ಟಿಎಂಎಸ್ ಶಾಲೆ ಸ್ಥಳದಲ್ಲಿ 35 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ ನೂರಾರು ಹಳೆ ವಿದ್ಯಾರ್ಥಿಗಳು ಇಂದು ಸಮಾಗಮಗೊಂಡಿದ್ದರು.

ಸ್ವಾಮಿ ವಿವೇಕಾನಂದರು 1892ರ ನವೆಂಬರ್‌ನಲ್ಲಿ ಮೈಸೂರಿಗೆ ಆಗಮಿಸಿದ್ದ ವೇಳೆ ಇದೇ ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದರು. ಸ್ವಾಮಿ ವಿವೇಕಾನಂದರ ಪಾದ ಸ್ಪರ್ಶವಾಗಿರುವ ಈ ಸ್ಥಳ ಐತಿಹಾಸಿಕ ಹಾಗೂ ಪವಿತ್ರ ಸ್ಥಳವೆಂಬ ಹಿನ್ನೆಲೆ ರಾಮಕೃಷ್ಣ ಆಶ್ರಮ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕ ನಿರ್ಮಾಣ ಮಾಡುತ್ತಿದೆ.

ರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಹಳೆಯ ವಿದ್ಯಾರ್ಥಿಗಳು ತಮ್ಮ ಕುಟುಂಬ ಸದಸ್ಯರೊಡನೆ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕದಲ್ಲಿ ಸಮಾಗಮಗೊಂಡಿದ್ದರು.

35 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡ ಮುಂದಿನ ವರ್ಷದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂಬ ಮಾಹಿತಿಯನ್ನು ಈ ವೇಳೆ ನೀಡಲಾಯಿತು. ದೇಶ ವಿದೇಶದಿಂದ ಆಗಮಿಸಿದ್ದ ಹಳೆಯ ವಿದ್ಯಾರ್ಥಿಗಳು ನಿರ್ಮಾಣ ಹಂತದ ಸ್ಮಾರಕದ ಕಟ್ಟಡವನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ಈ ವೇಳೆ ಹಳೆಯ ವಿದ್ಯಾರ್ಥಿಗಳಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಇದೇ ಸಂದರ್ಭದಲ್ಲಿ ಸ್ಮಾರಕ ಕಟ್ಟಡದಲ್ಲಿ ಶ್ರೀ ಶಾರದಾದೇವಿ ಜಯಂತಿ ಕಾರ್ಯಕ್ರಮ ಕೂಡ ಆಯೋಜಿಸಲಾಗಿತ್ತು. ಹಳೆಯ ವಿದ್ಯಾರ್ಥಿಗಳು ಶ್ರೀ ಶಾರದಾದೇವಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ರಾಮಕೃಷ್ಣ ಆಶ್ರಮದಲ್ಲಿ ಶಾರದಾದೇವಿ ಜಯಂತಿ

ಮೈಸೂರಿನ ಯಾದವಗಿರಿಯ ರಾಮಕೃಷ್ಣ ಆಶ್ರಮದಲ್ಲಿ ಇಂದು ಶ್ರೀಮಾತೆ ಶಾರದಾದೇವಿ ಜಯಂತಿ ಆಯೋಜಿಸಲಾಗಿತ್ತು. ಜಯಂತಿ ಹಿನ್ನೆಲೆ ದೇವಾಲಯದಲ್ಲಿ ಇಂದು ಮುಂಜಾನೆಯಿಂದಲೇ ಹಲವು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಿತು. ಇಂದು ಬೆಳಿಗ್ಗೆ ವೇದಮಂತ್ರ ಪಠನ, ಮಂಗಳಾರತಿ ಮತ್ತು ಭಜನೆ, ವಿಶೇಷ ಪೂಜೆ, ಲಲಿತಾಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ ನೆರವೇರಿಸಲಾಯಿತು. ರಾಮಕೃಷ್ಣ ಆಶ್ರಮದ ಹಳೆಯ ವಿದ್ಯಾರ್ಥಿಗಳು ಹಾಗೂ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ತರುವಾಯ ಪ್ರಸಾದ ವಿತರಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅವರು, ಸ್ವಾಮಿ ವಿವೇಕಾನಂದರು ಈ ಸ್ಥಳದಲ್ಲಿ ವಾಸ್ತವ್ಯ ಹೂಡಿದ್ದರು. ಪಕ್ಕದಲ್ಲೇ ಇರುವ ಶಿವ ದೇವಸ್ಥಾನದಲ್ಲಿ ಧ್ಯಾನ ಮಾಡುತ್ತಿದ್ದರು ಎಂದರು.

ಸ್ವಾಮಿ ವಿವೇಕಾನಂದರ ಜೊತೆ ಹಲವು ಸಾಧುಗಳು ಕೂಡ ಸಮಾಗಮಗೊಳ್ಳುತ್ತಿದ್ದರು. ಸ್ವಾಮಿ ವಿವೇಕಾನಂದರು ಪ್ರತಿ ದಿನ ನಡಿಗೆಯಲ್ಲಿ ಕೃಷ್ಣವಿಲಾಸ ರಸ್ತೆ ಮೂಲಕ ಅರಮನೆಗೆ ಬಳಿ ಹೋಗಿ ಬರುತ್ತಿದ್ದರು. ಸ್ವಾಮಿ ವಿವೇಕಾನಂದರು ಇಲ್ಲಿ ವಾಸ್ತವ್ಯ ಹೂಡಿದ್ದ ಬಗ್ಗೆ ರಾಷ್ಟ್ರಕವಿ ಕುವೆಂಪು ಅವರು ತಮ್ಮ ಪುಸ್ತಕದಲ್ಲಿ ದಾಖಲು ಮಾಡಿದ್ದಾರೆ ಎಂದು ಹೇಳಿದರು.

ಹಲವು ರೀತಿಯ ಏಳು, ಬೀಳು, ಅಡೆತಡೆ ನಡುವೆ ಶಾಂತಿಯುತ ಕಾನೂನು ಹೋರಾಟದ ಮೂಲಕ ಈ ಸ್ಥಳವನ್ನು ಪಡೆದು ಇಲ್ಲಿ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ– ವಿವೇಕ ಸ್ಮಾರಕ ನಿರ್ಮಿಸಲಾಗುತ್ತಿದೆ. ಇದರ ನಿರ್ಮಾಣಕ್ಕೆ 35 ಕೋಟಿ ವೆಚ್ಚವಾಗಿದ್ದು, ಈಗಾಗಲೇ 10 ಕೋಟಿ ರೂಪಾಯಿ ವೆಚ್ಚವಾಗಿದೆ. ಇನ್ನು 25 ಕೋಟಿ ಹಣ ಅವಶ್ಯವಿದೆ ಎಂದು ವಿವರಿಸಿದರು.

ಈ ಸ್ಮಾರಕದಲ್ಲಿ ವ್ಯಕ್ತಿತ್ವ ನಿರ್ಮಾಣ, ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ, ಗ್ರಂಥಾಲಯ, ಸಂಗ್ರಹಾಲಯ, ಇಂಗ್ಲಿಷ್ ಸಂಭಾಷಣೆ ಸೇರಿದಂತೆ ಹಲವು ಚಟುವಟಿಕೆಗಳು ನಡೆಯಲಿದ್ದು, ಧ್ಯಾನ ಮಂದಿರ ನಿರ್ಮಾಣ ಕೂಡ ಮಾಡಲಾಗುತ್ತಿದೆ ಎಂದು ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅವರು ತಿಳಿಸಿದರು. ಈ ವೇಳೆ ರಾಮಕೃಷ್ಣ ಆಶ್ರಮ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ರಾಮಕೃಷ್ಣ ಆಶ್ರಮದ ಆತ್ಮನಿಷ್ಠಾನಂದಜಿ ಮಹಾರಾಜ್, ಪೂರ್ಣೇಶ್ವರಾನಂದಾಜಿ ಮಹಾರಾಜ್, ಮಹಾಬಲನಂದಾಜಿ ಮಹಾರಾಜ್, ಯುಕ್ತೇಶಾನಂದಾಜಿ ಮಹಾರಾಜ್, ದತ್ತ್ಯಾನಂದಾಜಿ ಮಹಾರಾಜ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದಯಪುರದ ಐಷಾರಾಮಿ ರೆಸಾರ್ಟ್‌ನಲ್ಲಿ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ವಿವಾಹ

ನಾಳೆ ಹೈದರಾಬಾದ್‌ನಲ್ಲಿ ಆರತಕ್ಷತೆ



ಉದಯಪುರ, ಡಿ.22– ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧು ಭಾನುವಾರ ರಾಜಸ್ಥಾನದ ಉದಯಪುರದಲ್ಲಿರುವ ಐಷಾರಾಮಿ ರೆಸಾರ್ಟ್ ರಾಫೆಲ್ಸ್‌ನಲ್ಲಿ ತನ್ನ ನಿಶ್ಚಿತ ವರ ವೆಂಕಟದತ್ತ ಸಾಯಿ ಅವರೊಂದಿಗೆ ವಿವಾಹವಾದರು.

ವೆಂಕಟದತ್ತ ಸಾಯಿ ಅವರು ಹೈದರಾಬಾದ್ ಮೂಲದ, ಪೊಸಿಡೆಕ್ಸ್ ಟೆಕ್ನಾಲಜೀಸ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ವಿವಾಹದ ನಂತರ, ಡಿ.24 ರಂದು ಸಿಂಧು ಅವರ ತವರಾದ ಹೈದರಾಬಾದ್‌ನಲ್ಲಿ ಆರತಕ್ಷತೆ ಕಾರ್ಯಕ್ರಮ ನಡೆಯಲಿದೆ.

ಡಿ.20 ರಂದು ಸಂಗೀತ ಕಾರ್ಯಕ್ರಮ ಮತ್ತು ಮರುದಿನ ಹಳದಿ, ಪೆಲ್ಲಿಕೂತುರು ಮತ್ತು ಮೆಹೆಂದಿ ಶಾಸ್ತ್ರಗಳು ಅದ್ಧೂರಿಯಾಗಿ ನಡೆದಿವೆ. ಇತ್ತೀಚೆಗೆ, ಲಖನೌದಲ್ಲಿ ನಡೆದ ಸೈಯದ್ ಮೋದಿ ಇಂಡಿಯಾ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಫೈನಲ್‌ನಲ್ಲಿ ಚೀನಾದ ವು ಲುವೊ ಯು ಅವರನ್ನು ಸೋಲಿಸುವ ಮೂಲಕ 29 ವರ್ಷದ ಸಿಂಧು ಎರಡು ವರ್ಷಗಳಿಂದ ತನ್ನ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಶನ್ ವರ್ಲ್ಡ್ ಟೂರ್ ಬರವನ್ನು ಕೊನೆಗೊಳಿಸಿದರು.

ಬಂಡೀಪುರ ಅರಣ್ಯದಲ್ಲಿ ಕಾಡಾನೆ ಕಳೇಬರ ಪತ್ತೆ



ಸಿದ್ದರಾಮನಕಟ್ಟೆ ಹಳ್ಳ ಅರಣ್ಯ ಪ್ರದೇಶದಲ್ಲಿ ಪತ್ತೆಯಾದ ಆನೆಯ ಕಳೇಬರ.

ಮೈಸೂರು, ಡಿ22(ಎಸ್‌ಬಿಡಿ)– ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಗಂಡಾನೆ ಕಳೇಬರ ಭಾನುವಾರ ಪತ್ತೆಯಾಗಿದೆ.

ಕುಂದಕೆರೆ ವಲಯದ ಸಿದ್ದರಾಮನ ಕಟ್ಟೆ ಹಳ್ಳದ ಬಳಿ ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ಮಾಡುವಾಗ ಇಂದು ಬೆಳಗ್ಗೆ ಸುಮಾರು 35 ವರ್ಷದ ಆನೆಯ ಕಳೇಬರ ಪತ್ತೆಯಾಗಿದ್ದು, ಅದರ ಎರಡು ದಂತಗಳನ್ನು ಇಲಾಖೆ ವಶಕ್ಕೆ ಪಡೆಯಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಎಸ್.ಪ್ರಭಾಕರನ್, ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಸುರೇಶ್, ಕುಂದಕೆರೆ ವಲಯ ಅರಣ್ಯಾಧಿಕಾರಿ ಬಿ.ಎಂ.ಮಲ್ಲೇಶ್, ಪಶು ವೈದ್ಯಾಧಿಕಾರಿ ಮಿರ್ಜಾ ವಾಸೀಂ, ಯಲಚೆಟ್ಟಿ ಶಾಖೆ ಉಪ ವಲಯ ಅರಣ್ಯಾಧಿಕಾರಿ ಬಿ.ಮನೋಹರ್ ಪರಿಶೀಲನೆ ನಡೆಸಿದರು.

ವೈದ್ಯಕೀಯ ಪರೀಕ್ಷೆ ನಡೆಸಿದ ಪಶು ವೈದ್ಯಾಧಿಕಾರಿಗಳು ಕಳೇಬರದಿಂದ ದಂತಗಳನ್ನು ಬೇರ್ಪಡಿಸಿ, ಇಲಾಖೆಗೆ ಒಪ್ಪಿಸಿದ್ದಾರೆ. ಮುಂದಿನ ಬಲಗಾಲಿನಲ್ಲಿ ಗಾಯದ ಗುರುತು ಕಂಡು ಬಂದಿದ್ದು, ಆನೆಗಳ ಕಾದಾಟದಿಂದ ಗಾಯಗೊಂಡು ಸ್ವಾಭಾವಿಕವಾಗಿ ಸಾವನ್ನಪ್ಪಿದೆ. ವೈದ್ಯಕೀಯ ಪರೀಕ್ಷೆ ಬಳಿಕ ಆನೆಯ ಕಳೇಬರವನ್ನು ಪ್ರಕೃತಿಗೆ ಬಿಡಲಾಯಿತು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕತ್ತು ಕೊಯ್ದು ಜೆಡಿಎಸ್ ಮುಖಂಡನ ಭೀಕರ ಹತ್ಯೆ



ಮೈಸೂರು, ಡಿ.22(ಎಸ್‌ಬಿಡಿ)– ರಸ್ತೆಯಲ್ಲೇ ಕತ್ತು ಕೊಯ್ದು ವ್ಯಕ್ತಿಯೊಬ್ಬರನ್ನು ಭೀಕರವಾಗಿ ಹತ್ಯೆ ಮಾಡಿರುವ ಘಟನೆ ಮೈಸೂರಿನಲ್ಲಿ ಭಾನುವಾರ ಸಂಜೆ ನಡೆದಿದೆ. ಮೈಸೂರಿನ ಬೆಲವತ್ತ ಗ್ರಾಮದ ನಿವಾಸಿ, ಜೆಡಿಎಸ್ ಮುಖಂಡ ಹನುಮಂತು(57) ಕೊಲೆಯಾದವರು. ಈ ಘಟನೆಯಿಂದ ಗ್ರಾಮದ ಜನ ಬೆಚ್ಚಿಬಿದ್ದಿದ್ದಾರೆ.

ಹನುಮಂತು ಅವರು ಭಾನುವಾರ ಸಂಜೆ ಸುಮಾರು 6.30ರಲ್ಲಿ ರಿಂಗ್‌ರೋಡ್‌ನಿಂದ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುವಾಗ ಮತ್ತೊಂದು ಬೈಕ್‌ನಲ್ಲಿ ಹಿಂಬಾಲಿಸಿದ ಹಂತಕರು ಡಿಕ್ಕಿ ಹೊಡೆಸಿದ್ದಾರೆ. ಇದರಿಂದ ನಿಯಂತ್ರಣ ತಪ್ಪಿ ಬೀಳುತ್ತಿದ್ದಂತೆ ಹನುಮಂತು ಮೇಲೆರಗಿದ ಹಂತಕರು, ಅವರ ಕತ್ತುಕೊಯ್ದು ಪರಾರಿಯಾಗಿದ್ದಾರೆ. ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದ ಹಳೇ ವೈಷಮ್ಯದಿಂದ ಕೊಲೆ ಮಾಡಿರಬಹುದು ಎಂದು ಹೇಳಲಾಗುತ್ತಿದೆ. ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಮೇಟಗಳ್ಳಿ ಠಾಣೆ ಪೊಲೀಸರು, ಪರಿಶೀಲನೆ ನಡೆಸಿದ ನಂತರ ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿದರು. ಈ ಸಂಬಂಧ ಹನುಮಂತು ಕುಟುಂಬದವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಪೊಲೀಸರ ತನಿಖೆಯಿಂದ ಹನುಮಂತು ಹತ್ಯೆಗೆ ನಿಖರ ಕಾರಣ ತಿಳಿಯಬೇಕಿದೆ.

ಜಿಟಿಡಿ ಸಾಂತ್ವನ: ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ವಿಷಯ ತಿಳಿಯುತ್ತಿದ್ದಂತೆ ಬೆಲವತ್ತ ಗ್ರಾಮಕ್ಕೆ ತೆರಳಿ, ಹನುಮಂತು ಕುಟುಂಬದವರಿಗೆ ಸಾಂತ್ವನ ಹೇಳಿದರು.

'ಲಾ ಗೈಡ್', ವೆಂಕಟೇಶ್ ಅವರಿಗೆ ನ್ಯಾಯಾಂಗ ಇಲಾಖೆ ನೌಕರರಿಂದ ಆತ್ಮೀಯ ಸನ್ಮಾನ



ಜಿಲ್ಲಾ ರಾಜ್ಯೋತ್ಸವ ಪುರಸ್ಕೃತರಾದ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಡಿ.22– ಜಿಲ್ಲಾ ರಾಜ್ಯೋತ್ಸವ ಪುರಸ್ಕೃತರಾದ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಅವರನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು ನ್ಯಾಯಾಲಯದ ಆವರಣದಲ್ಲಿರುವ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಹೆಚ್.ಎನ್.ವೆಂಕಟೇಶ್ ಅವರಿಗೆ ನೆನಪಿನ ಕಾಣಿಕೆ ನೀಡಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ಶೇಷಾದ್ರಿ, ಮಾಜಿ ಅಧ್ಯಕ್ಷ ದೇವರಾಜೇಗೌಡ ಅವರು, ಹೆಚ್. ಎನ್.ವೆಂಕಟೇಶ್ ಅವರ ಸಹಾಯವನ್ನು ಹಾಡಿ ಹೊಗಳಿದರು. ಇದೇ ವೇಳೆ ಮಾತನಾಡಿದ ಸಂಘದ ಮಾಜಿ ಅಧ್ಯಕ್ಷೆ ಶ್ರೀತುಳಸಿ ಅವರು ಹೆಚ್.ಎನ್. ವೆಂಕಟೇಶ್ ಅವರ ಸಹಾಯ ನೆನೆದು ಭಾವುಕರಾದರು. ತಾಯಿ ಚಾಮುಂಡೇಶ್ವರಿ ವೆಂಕಟೇಶ್ ಅವರಿಗೆ ಆರೋಗ್ಯ ಕೊಟ್ಟು ಕಾಪಾಡಲಿ ಅವರು ಶಾಸಕರಾಗಿ ಸಮಾಜದ ಎಲ್ಲಾ ಜನರಿಗೆ ಸಹಾಯ ಮಾಡಲಿ ಅಂತಾ ಮನದುಂಬಿ ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹೆಚ್. ಎನ್.ವೆಂಕಟೇಶ್, ಸಂಘದ ಹಿತಕ್ಕಾಗಿ ತನ್ನ ಕೈಲಾದ ಸಹಾಯ ಮಾಡುತ್ತಾ ಬಂದಿದ್ದೇನೆ. ಮುಂದೆಯೂ ಅದನ್ನು ಮುಂದುವರಿಸುತ್ತೇನೆ ಎಂದು ಭರವಸೆ ನೀಡಿದರು. ಜೊತೆಗೆ ಸಂಘದವರು ಸಿಎ ನಿವೇಶನಕ್ಕೆ ಅರ್ಜಿ ಸಲ್ಲಿಸಿ, ತಮ್ಮದೇ ಸ್ವಂತ ಭವನ ನಿರ್ಮಾಣ ಮಾಡಿ. ನಿಮ್ಮ ಕುಟುಂಬದ ಕಾರ್ಯಕ್ರಮ, ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ ಮಾಡಲು ಅನುಕೂಲವಾಗುತ್ತದೆ. ಅದಕ್ಕೆ ನನ್ನ ಕೈಲಾದ ಸಹಾಯ ಮಾಡುತ್ತೇನೆ ಎಂದು ಬರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಶೇಷಾದ್ರಿ ಮಾಜಿ ಅಧ್ಯಕ್ಷ ದೇವರಾಜೇಗೌಡ, ಸದಸ್ಯರಾದ ಕಿರಣ್, ಬಾಲ ಸುಬ್ರಮಣ್ಯ, ಪರಶಿವಮೂರ್ತಿ, ಉಮಾದೇವಿ, ಪುಟ್ಟರಾಜು, ನಾಗೇಂದ್ರ ಪುರುಷೋತ್ತಮ್, ಮೂರ್ತಿ, ಉದಯಕುಮಾರ್ ಸೇರಿ ಹಲವರು ಭಾಗಿಯಾಗಿದ್ದರು.

ಸಾವರ್ಕರ್ ಜೀವನಾಧಾರಿತ ರಾಜ್ಯಮಟ್ಟದ ಆಶು ಭಾಷಣ ಸ್ಪರ್ಧೆ



ಸಾವರ್ಕರ್ ಕುರಿತ ಆಶು ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಡಿ.22(ಎಸ್‌ಬಿಡಿ)– ವೀರ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ನಗರದ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಸಾವರ್ಕರ್ ಜೀವನಾಧಾರಿತ ರಾಜ್ಯಮಟ್ಟದ ಆಶು ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು


ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಈ ಸ್ಪರ್ಧೆಯಲ್ಲಿ ಪೂರ್ಣಚೇತನ ಶಾಲೆಯ ಮಹೇಶ್ ಪ್ರಥಮ, ದೇವಲಾಪುರ ಶಾಲೆಯ ಎಂ.ಮಹೇಶ್ ದ್ವಿತೀಯ, ಪುಷ್ಕರಣಿ ಶಾಲೆಯ ಇಶಾನ್ ಸುಹಾಸ್ ತೃತೀಯ ಹಾಗೂ ಪ್ರಶ್ನಾ ಸಮಾಧಾನಕರ ಬಹುಮಾನ ಪಡೆದುಕೊಂಡರು. ಇವರಿಗೆ ಕ್ರಮವಾಗಿ ಐದು ಸಾವಿರ, ಮೂರು ಸಾವಿರ, ಎರಡು ಸಾವಿರ ಹಾಗೂ ಐದುನೂರು ರೂ. ನಗದು ಬಹುಮಾನದೊಂದಿಗೆ ಸ್ಮರಣಿಕೆ ಹಾಗೂ ಪ್ರಮಾಣಪತ್ರ ನೀಡಿ, ಅಭಿನಂದಿಸಲಾಯಿತು.

ಈ ವೇಳೆ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್. ಯಶಸ್ವಿನಿ ಮಾತನಾಡಿ, ಮಕ್ಕಳಿಗೆ ವೀರ ಸಾವರ್ಕರ್ ಜೀವನ, ಅವರ ಚಿಂತನೆಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಪ್ರತಿಷ್ಠಾನ ಪ್ರಯತ್ನ ಮುಂದುವರೆಸಿದೆ. ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಇಂದಿನ ಆಶುಭಾಷಣ ಸ್ಪರ್ಧೆಯಲ್ಲಿ ಮೈಸೂರು ಹಾಗೂ ನೆರೆಹೊರೆ ಜಿಲ್ಲೆಗಳ 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ಖುಷಿಯ ವಿಚಾರ ಎಂದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ.ಗೌತಮ್ ಕೋಣಿಕಾರ್, ಪ್ರತಿಷ್ಠಾನದ ಧನುಷ್, ರಾಕೇಶ್ ಭಟ್, ಸಂಜಯ್ ಪ್ರಸನ್ನ, ಶಿವಕುಮಾರ್ ಚಿಕ್ಕಕಾನ್ಯ ಮತ್ತಿತರರು ಉಪಸ್ಥಿತರಿದ್ದರು.

ಸ್ವ–ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

ಮೈಸೂರು, ಡಿ.22– ಕೇಂದ್ರ ಪುರಸ್ಕೃತ ಅಮೃತ್ 2 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದಡಿ ಹಾಗೂ ತಾಂತ್ರಿಕೇತರ ಚಟುವಟಿಕೆಯಡಿ ಹೂಟಗಳ್ಳಿ ನಗರಸಭಾ ವ್ಯಾಪ್ತಿಯಲ್ಲಿನ ಉದ್ಯಾನವನದ ನಿರ್ವಹಣೆಗಾಗಿ ಆಸ್ತಿ ತೆರಿಗೆ ವಸೂಲಾತಿ ಹಾಗೂ ನೀರಿನ ತೆರಿಗೆ ವಸೂಲಾತಿ ಮಾಡಲು ಡೇ–ನಲ್ಮ್ ಯೋಜನೆಯಡಿ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮಹಿಳಾ ಸ್ವ–ಸಹಾಯ ಸಂಘಗಳು ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಂಡು ಡಿ.31 ರೊಳಗೆ ಪ್ರಸ್ತಾವನೆ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಡೇ–ನಲ್ಮ್ ಶಾಖೆಗೆ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.

ಯುವ ಸಾಧಕ ರತ್ನ ಪ್ರಶಸ್ತಿ ಪ್ರದಾನ



ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟ ಮೈಸೂರು, ಹಿಮಾಲಯ ಪ್ರತಿಷ್ಠಾಪನ ಮೈಸೂರು ಮತ್ತು ಜಿಲ್ಲಾ ಕಸಾಪ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಗಪಟು ಹೆಚ್.ಸಿ. ಕುಮಾರಸ್ವಾಮಿ ಅವರಿಗೆ 'ಯುವ ಸಾಧಕ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ರೈತರು– ಗ್ರಾಹಕರ ಗುಂಪು ರಚಿಸಿ

• ಹೊನ್ನೂರು ಪ್ರಕಾಶ್ ಕರೆ • ರೈತರ ದಿನಾಚರಣೆ ಅಂಗವಾಗಿ ನಾಲ್ವರು ಸಾಧಕರಿಗೆ ಸನ್ಮಾನ

ಮೈಸೂರು, ಡಿ.22– ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ರೈತರು– ಗ್ರಾಹಕರ ಗುಂಪು ರಚಿಸಿಕೊಳ್ಳಿ ಎಂದು ಚಾಮರಾಜನಗರ ಜಿಲ್ಲೆ ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಮುಖಂಡ ಹೊನ್ನೂರು ಪ್ರಕಾಶ್ ಕರೆ ನೀಡಿದರು.

ಮಹಿಳಾ ವಿಶೇಷ ಕನ್ನಡ ಮಾಸಿಕ, ನಾಡಪ್ರಭು ಕೆಂಪೇಗೌಡ ಯುವ ಬ್ರಿಗೇಡ್, ಅಲೆಯನ್ಸ್ ಕ್ಲಬ್ ಆಫ್ ಸರಸ್ವತಿಪುರಂ ವತಿಯಿಂದ ಕೆಆರ್‌ಎಸ್ ರಸ್ತೆಯ ಶಿರ್ವಿ ಚಾರಿಟಬಲ್ ಟ್ರಸ್ಟ್ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ರೈತ ದಿನಾಚರಣೆ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಎಲ್ಲಿಯವರೆಗೆ ಈ ಕೆಲಸ ಆಗುವುದಿಲ್ಲವೋ ಅಲ್ಲಿಯವರೆಗೆ ರೈತರ ಉದ್ಧಾರ ಸಾಧ್ಯವಿಲ್ಲ ಎಂದರು.

ಪ್ರಸ್ತುತ ಬಿತ್ತನೆ ಬೀಜ, ರಸಗೊಬ್ಬರ ಮಾರಾಟಗಾರರು, ದಲ್ಲಾಳಿಗಳು ಉದ್ಧಾರವಾಗುತ್ತಿದ್ದಾರೆ. ಆದರೆ ರೈತರಿಗೆ ಲಾಭ ಆಗುತ್ತಿಲ್ಲ. ಆದ್ದರಿಂದ ಗ್ರಾಹಕರು ಮತ್ತು ರೈತರ ನಡುವೆ ನೇರ ಸಂಪರ್ಕ ಏರ್ಪಟ್ಟಲ್ಲಿ ಇಬ್ಬರಿಗೂ ಲಾಭವಾಗುತ್ತದೆ. ಈ ಬಗ್ಗೆ ಗಮನ ನೀಡಬೇಕು ಎಂದು ಅವರು ಹೇಳಿದರು.

ರೈತರು ಸಾವಯವ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು. ಗ್ರಾಹಕರು ಕೂಡ ಸಿರಿಧಾನ್ಯ ಬಳಸಬೇಕು. ಮಾರುಕಟ್ಟೆಗಳಲ್ಲಿ ಕೇಳಿದಷ್ಟು ಹಣ ನೀಡಿ ಖರೀದಿಸುವ ಗ್ರಾಹಕರು ರೈತರ ಬಳಿ ಚೌಕಾಸಿ ಮಾಡುವುದನ್ನು ಬಿಡಬೇಕು ಎಂದರು.



ರೈತ ದಿನಾಚರಣೆ ಅಂಗವಾಗಿ ಸಾಧಕ ರೈತರಾದ ನಾಗೇಂದ್ರ, ನವೀನ್ ಕುಮಾರ್, ರಾಜೇಂದ್ರ ಹಾಗೂ ಜಿ.ಟಿ. ರಾಮೇಗೌಡ ಅವರನ್ನು ಸನ್ಮಾನಿಸಲಾಯಿತು. ಗುರುಮಲ್ಲಪ್ಪ, ಹೊನ್ನೂರು ಪ್ರಕಾಶ್, ಅಂಶಿ ಪ್ರಸನ್ನಕುಮಾರ್, ಕ್ಯಾತನಹಳ್ಳಿ ಪ್ರಕಾಶ್, ಸುಬ್ಬರಾವ್, ಗಾಯಿತ್ರಿ ಪಾಂಡುಜಿ ಇತರರಿದ್ದಾರೆ.

ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನಂಜನಗೂಡು ನಗರ ಘಟಕದ ಅಧ್ಯಕ್ಷ ಗುರುಮಲ್ಲಪ್ಪ ಮಾತನಾಡಿ, ಸಾವಯವ ಕೃಷಿಯ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಒಂದು ಸಾವಿರ ಜನರನ್ನು ಸೇರಿಸಿ, ಜಾಗೃತಿ ಕಾರ್ಯಕ್ರಮ ಮಾಡಿ. ಇದಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ರೈತರು ಏಕ ಬೆಳೆ ಪದ್ಧತಿ ಬದಲು ಬಹುಬೆಳೆ ಪದ್ಧತಿ ಅನುಸರಿಸಬೇಕು ಎಂದು ಸಲಹೆ ಮಾಡಿದರು.

ರೈತ ದೇಶದ ಬೆನ್ನೆಲಬು ಎಂದು ಹೇಳಿ, ಸರ್ಕಾರಗಳು ಅವನಿಗೆ ಸಿಗಬೇಕಾದ ಸೌಲಭ್ಯ ನೀಡುತ್ತಿಲ್ಲ. ಸಮಾಜದ ಪ್ರತಿಯೊಂದು ವರ್ಗವೂ ರೈತರು ಹಾಗೂ ಸೈನಿಕರಿಗೆ ಋಣಿಯಾಗಿರಬೇಕು ಎಂದರು.

ಕಾಡಾ ಇಲಾಖೆಯ ಭೂ ಅಭಿವೃದ್ಧಿ ಜಂಟಿ ನಿರ್ದೇಶಕಿ ಡಾ.ಎಚ್.ಟಿ. ಚಂದ್ರಕಲಾ ಮಾತನಾಡಿ, ರೈತರ ಅನುಕೂಲಕ್ಕಾಗಿ ಕೃಷಿ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ರೈತರು ಇವುಗಳ ಪ್ರಯೋಜನ ಪಡೆಯಬೇಕು ಎಂದು ಮನವಿ ಮಾಡಿದರು.

ರೈತರ ಜೌಗು ಭೂಮಿಯ ಅಭಿವೃದ್ಧಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು 'ಕಾಡಾ' ಮೂಲಕವೂ ಅನುಷ್ಠಾನ ಮಾಡಲಾಗುತ್ತಿದೆ ಎಂದರು.

ಉದ್ಯಮಿ ಋಷಿ ಮಾತನಾಡಿ, ರೈತರು ಎರಡನೇ ತಾಯಿ ಇದ್ದಂತೆ. ರೈತರಿಲ್ಲದಿದ್ದಲ್ಲಿ ಯಾರಿಗೂ ಊಟ ಸಿಗುವುದಿಲ್ಲ ಎಂದರು.

ರೈತ ದಿನಾಚರಣೆ ಅಂಗವಾಗಿ ಸಾಧಕ ರೈತರಾದ ಎಂ. ರಾಜೇಂದ್ರ ಚಿದವರವಳ್ಳಿ ನಾಗೇಂದ್ರ, ಜಿ.ಟಿ. ರಾಮೇಗೌಡ ಹಾಗೂ ನವೀನ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೆಂಕಟರಮಣ ಪ್ರಾರ್ಥಿಸಿದರು. ಸುಬ್ಬರಾವ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಸ್ವರೂಪ, ಸಮಾಜ ಸೇವಕಿ ಗಾಯತ್ರಿ ಪಾಂಡುಜಿ, ಪಾರಿಜಾತಾ ಉಷಾ, ಎಂ.ಎಂ. ರೇಖಾ, ಜಯಶ್ರೀ ಶಿವರಾಂ, ಶಿಲ್ಪಾ ರಾಣಿ, ಮೇನಕಾ ನಾಗರಾಜ್ ಮೊದಲಾದವರು ಪಾಲ್ಗೊಂಡಿದ್ದರು.

ಸಿ.ಟಿ. ರವಿ ಸ್ವಾಗತಕ್ಕೆ ಬಂದಿದ್ದ 7 ಆಂಬುಲೆನ್ಸ್‌ಗಳ ವಿರುದ್ಧ ಎಫ್‌ಐಆರ್

ಚಿಕ್ಕಮಗಳೂರು, ಡಿ.22– ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಚಿಕ್ಕಮಗಳೂರಿಗೆ ಬಂದಾಗ ಸ್ವಾಗತಿಸಲು ಬಂದಿದ್ದ 7 ಆಂಬುಲೆನ್ಸ್‌ಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ. ಮಾಗಡಿ ಕೈಮರದಿಂದ ಸೈರನ್ ಹಾಕಿಕೊಂಡು ಆಂಬುಲೆನ್ಸ್‌ಗಳು ಬಂದಿದ್ದವು. ರೋಗಿಗಳು ಇಲ್ಲದೇ ಸೈರನ್ ಹಾಗೂ ಟಾಪ್ ಲೈಟ್ ಹಾಕಲಾಗಿತ್ತು. ಸೈರನ್ ಹಾಕಿಕೊಂಡು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಲಾಗಿದೆ. ನಗರದ ಠಾಣೆಯಲ್ಲಿ 7 ಆಂಬುಲೆನ್ಸ್‌ಗಳ ಮೇಲೆ ಎಫ್‌ಐಆರ್ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಗೆಳತಿ : ನೀನು ನನ್ನ ತಾಯಿಗೆ ಇಷ್ಟವಾದೆ.

ಗುಂಡ : ಹುಚ್ಚಿ ಅದೆಲ್ಲ ಆಗಲ್ಲ, ನಾನು ನಿನ್ನನ್ನೇ ಮದುವೆಯಾಗೋದು. ನಿಮ್ಮಮ್ಮಂಗೆ ಕ್ಷಮಿಸಲು ಹೇಳು!

ಮೈಸೂರು ಮಿತ್ರ

ಸೋಮವಾರ, 23 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಯಾವಾಗಲೂ ನಿಮ್ಮ ಸ್ವಂತ ಜನರ ಬಗ್ಗೆ ಸದಾ ಎಚ್ಚರದಿಂದ ಇರಿ. ರಾವಣ ಸೋತಿದ್ದು, ರಾಮನಿಂದಲ್ಲ, ವಿಭೀಷಣನಿಂದ. –ಕೃಷ್ಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ನೀರು ಇದ್ದರೆ ಊರು, ನಾರಿ ಇದ್ದರೆ ಮನೆ'

ನಿಮ್ಮ ಪತ್ರಗಳು

■ ಜನಪ್ರತಿನಿಧಿಗಳು ಸಂಯಮದಿಂದ ವರ್ತಿಸಲಿ

ಮಾನ್ಯರೆ,

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ನಡುವೆ ಬೆಳಗಾವಿಯ ವಿಧಾನಮಂಡಲದ ಅಧಿವೇಶನದಲ್ಲಿ ನಡೆದ ಮಾತಿನ ಚಕಮಕಿ ರಾಜ್ಯಾದ್ಯಂತ ಗಮನ ಸೆಳೆದಿದೆ. ಸಿ.ಟಿ.ರವಿ ತಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದು ಆರೋಪಿಸಿ, ಅವರ ವಿರುದ್ಧ ಲಕ್ಷ್ಮಿ ಹೆಬ್ಬಾಳ್ಕರ್ ನೀಡಿದ ದೂರಿನ ಮೇಲೆ ಸಿ.ಟಿ.ರವಿ ಬಂಧನವಾಗಿ ಹಲವಾರು ನಾಟಕೀಯ ತಿರುವುಗಳನ್ನು ಪಡೆಯಿತು. ನಂತರ, ರಾಜ್ಯ ಉಚ್ಚ ನ್ಯಾಯಾಲಯ ಜಾಮೀನು ನೀಡಿತು. ವಿಧಾನಮಂಡಲದ ಅಧಿವೇಶನದ ಸಮಯದಲ್ಲಿ ಸಭಾಪತಿಯವರ ಅನುಮತಿ ಇಲ್ಲದೇ ಸದಸ್ಯರನ್ನು ಬಂಧಿಸುವಂತಿಲ್ಲ ಎಂಬ ಸಂಸದೀಯ ನಿಯಮ ಇರುವುದಾದರೂ, ಸಿ.ಟಿ.ರವಿ ಅವರನ್ನು ಬಂಧಿಸುವ ಸಮಯದಲ್ಲಿ ವಿಧಾನಪರಿಷತ್ತಿನ ಸಭಾಪತಿಗಳು ಸಭೆಯನ್ನು ಮುಂದೂಡಿದ್ದರು. ಆ ಸಂದರ್ಭದಲ್ಲಿ ಸದನದ ಕಲಾಪ ನಡೆಯುತ್ತಿರಲಿಲ್ಲ ಎಂಬ ವಾದವನ್ನು ಕೆಲವು ಕಾಂಗ್ರೆಸ್ ಮುಖಂಡರು ಮಾಡಿ, ಸಿ.ಟಿ.ರವಿ ಅವರ ಬಂಧನವನ್ನು ಸಮರ್ಥಿಸಿಕೊಂಡಿದ್ದಾರೆ. ಜನಪ್ರತಿನಿಧಿಗಳೆನಿಸಿಕೊಂಡವರು ಅಧಿವೇಶನದಲ್ಲಿ ಸಂಯಮದಿಂದ ವರ್ತಿಸಬೇಕು. ಅವರ ನಡವಳಿಕೆಗಳನ್ನು ಇಡೀ ರಾಜ್ಯದ ಜನತೆ ಗಮನಿಸುತ್ತಿರುತ್ತದೆ. ವಿಧಾನಮಂಡಲದ ಅಧಿವೇಶನಗಳಲ್ಲಿ ಅಶ್ಲೀಲ ಪದ ಬಳಕೆ, ಕೈ ಕೈ ಮಿಲಾಯಿಸುವುದು, ಅಸಂಸದೀಯ ಪದ ಬಳಸುವುದು ಮುಂತಾದ ಹೀನ ಕೃತ್ಯಗಳು ಜನಪ್ರತಿನಿಧಿಗಳಿಗೆ ಶೋಭೆ ತರುವಂತಹುದಲ್ಲ. ಇಂತಹ ನಡವಳಿಕೆ ಸರ್ವಥಾ ಖಂಡನೀಯ. ಇದರಲ್ಲಿ ಆ ಪಕ್ಷ, ಈ ಪಕ್ಷ ಎಂದು ಬೆರಳು ತೋರಿಸುವುದೂ ಕೂಡ ಸರಿಯಲ್ಲ. ಸದನದಲ್ಲಿ ಅಶ್ಲೀಲ ಚಿತ್ರ ವೀಕ್ಷಿಸುವುದೂ ಸೇರಿದಂತೆ, ರಾಜ್ಯದ ಸಂಸದೀಯ ಇತಿಹಾಸದಲ್ಲಿ ಇಂತಹ ಸಾಕಷ್ಟು ಕಹಿ ಘಟನೆಗಳು ನಡೆದಿದ್ದು, ವಿಧಾನಮಂಡಲದ ಘನತೆಯನ್ನು ಕುಗ್ಗಿಸಿದೆ ಎಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಇನ್ನು ಮುಂದಾದರೂ ನಮ್ಮ ಜನಪ್ರತಿನಿಧಿಗಳು ವಿಧಾನಮಂಡಲದ ಅಧಿವೇಶನದಲ್ಲಿ ಜವಾಬ್ದಾರಿಯಿಂದ ಹಾಗೂ ಸಂಯಮದಿಂದ ನಡೆದುಕೊಳ್ಳುವುದು ಒಳ್ಳೆಯದು.

ಕೆ.ವಿ.ವಾಸು, ವಕೀಲರು, ನೋಟರಿ, ಮೈಸೂರು.

■ ವಿಶ್ವ ಜ್ಞಾನಿಗೆ ಮಾಡಿದ ಅಪಮಾನ

ಮಾನ್ಯರೆ,

ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ತಮ್ಮ ಸ್ಥಾನದ ಅರಿವನ್ನು ಮರೆತ ಕೇಂದ್ರ ಗೃಹ ಮಂತ್ರಿಗಳು ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಸ್ಮರಿಸುವುದು ಒಂದು ವ್ಯಸನ ಎಂತಲೂ ದೇವರನ್ನು ಸ್ಮರಿಸಿದರೆ ಸ್ವರ್ಗ ಪ್ರಾಪ್ತಿಯಾಗುತಿತ್ತು... ಎಂತಲೂ ತಮ್ಮ ಸ್ಥಾನದ ಘನತೆಯನ್ನು ಮರೆತು ಮಾತನಾಡಿದ್ದರೆ. ದೇವರನ್ನು ಸ್ಮರಿಸಿದರೆ ಸ್ವರ್ಗ ಪ್ರಾಪ್ತಿಯಾಗುವುದಾದರೆ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಲ್ಲಿ ನೀವೇಕೆ ಸಂಸತ್ತಿಗೆ ಆಯ್ಕೆಯಾಗಿದ್ದು, ದೇವರನ್ನೇ ಸ್ಮರಿಸಿ ಆಯ್ಕೆಯಾಗಬಹುದಿತ್ತಲ್ಲವೇ? ಈ ದೇಶದ ತಳ ಸಮುದಾಯದ ಹೆಣ್ಣು ಮಕ್ಕಳಿಗೆ ಏಕೆ ನಿಮ್ಮ ದೇವರು ಶಿಕ್ಷಣ ನೀಡಲಿಲ್ಲ. ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ಶೋಷಣೆಯನ್ನು ನಿಮ್ಮ ದೇವರು ಏಕೆ ತಡೆಯುತ್ತಿಲ್ಲ. ಇವೆಲ್ಲದಕ್ಕೂ ಬೇಕಾಗಿರುವುದು ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ, ನೀವು ಮಂತ್ರಿಯಾಗಿರುವುದು ನಿಮ್ಮ ದೇವರ ಸ್ಮರಣೆಯಿಂದಲ್ಲ; ಅಂಬೇಡ್ಕರ್ ಅವರು ಕೊಟ್ಟ ಸರ್ವ ಧರ್ಮ ಸಮಾನತೆಯ ಸಂವಿಧಾನದಿಂದ. ತನ್ನ ಅಗಾಧ ಜ್ಞಾನದಿನದ ಇಡೀ ಜಗತ್ತಿಗೆ ಜ್ಞಾನದ ಬೆಳಕು ನೀಡಿ, ಜಗತ್ತಿನ 195 ರಾಷ್ಟ್ರಗಳಿಂದ ತಮ್ಮ ಹುಟ್ಟಿದ ದಿನವನ್ನು ಜ್ಞಾನದ ದಿನವನ್ನಾಗಿ ಆಚರಿಸಿಕೊಳ್ಳುವ ಪ್ರಪಂಚದ ಮೇದಾವಿಯ ಬಗ್ಗೆ ಮಾತನಾಡುವ ಮುನ್ನ ಎಚ್ಚರ ಇರಲಿ. **–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕ, ಸರಗೂರು.**

■ ಒನ್ ನೇಷನ್... ಮನಿ.. ಮಿನಿ.. ಟಾಕ್ಸ್...!

ಮಾನ್ಯರೆ,

ಒಂದು ದೇಶ ಒಂದು ಚುನಾವಣೆ, ಒಂದು ದೇಶ ಒಂದೇ ರೀತಿಯ ತೆರಿಗೆ. ಇವು ಮೊಳಗುವ ಕೇಂದ್ರ ಸರ್ಕಾರದ ಘೋಷಣೆಗಳು. ಪೆಟ್ರೋಲ್, ಡೀಸೆಲ್, ಗ್ಯಾಸ್‌ಗಳ ಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ತೆರಿಗೆ ಬೇರೆ ಬೇರೆ ಇದೆ. ಅದೇ ರೀತಿ ಬೈಕು, ಕಾರು ಮುಂತಾದವುಗಳ ಮೇಲೆ ಒಂದೊಂದು ರಾಜ್ಯ ಒಂದೊಂದು ರೀತಿಯ ತೆರಿಗೆ ವಿಧಿಸುತ್ತಿವೆ. ಕರ್ನಾಟಕದಲ್ಲಿ ಒಂದು ಲಕ್ಷ ರೂ. ದಾಟಿದ ಹಾಗೂ ಬುಲೆಟ್‌ನಂತಹ ವಾಹನಗಳ ಮೇಲೆ ಸರ್ಕಾರ ಹೆಚ್ಚುವರಿ ತೆರಿಗೆ ವಿಧಿಸಿದ್ದು, ಇದು ಗ್ರಾಹಕರಿಗೆ ಅನಾವಶ್ಯಕ ಹೊರೆಯಾಗಿದೆ. ಹಾಗೆಯೇ ನಮ್ಮಲ್ಲಿ 20 ಲಕ್ಷ ರೂ. ದಾಟಿದ ಕಾರುಗಳ ಮೇಲೆ ಶೇ.20ರಷ್ಟು ತೆರಿಗೆ ವಿಧಿಸುತ್ತಿದ್ದು, ಇದನ್ನು ತಪ್ಪಿಸುವ ಸಲುವಾಗಿ ಕೇವಲ ಶೇ.5ರಷ್ಟು ತೆರಿಗೆ ಇರುವ ಪಾಂಡಿಚೇರಿಯಲ್ಲಿ ಇಂತಹ ಐಷಾರಾಮಿ ಕಾರುಗಳನ್ನು ನೋಂದಣಿ ಮಾಡಿಸಲಾಗುತ್ತಿದ್ದು, ಇದರಿಂದ ರಾಜ್ಯಕ್ಕೆ ತೆರಿಗೆ ನಷ್ಟವಾಗುತ್ತಿದೆ. ಇಂತಹವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಆರ್‌ಟಿಓ ಅಧಿಕಾರಿಗಳು ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ನಿಜಕ್ಕೂ ಇದು ಸರ್ಕಾರಗಳು ಯೋಚಿಸಬೇಕಾದ ಸಂಗತಿ. ಒಂದೇ ದೇಶದಲ್ಲಿ ವಿವಿಧ ದರದ ತೆರಿಗೆಗಳು ಏಕೆ? ಪಾಂಡಿಚೇರಿಯಲ್ಲಿ ಕೇವಲ 5% ಇರುವುದು ಕರ್ನಾಟಕದಲ್ಲಿ ದುಬಾರಿ 20% ಏಕೆ? ಜನರು ತಾಳಿಕೊಳ್ಳುತ್ತಾರೆ ಎಂದು ಈ ರೀತಿ ಮನಸೋ ಇಚ್ಛೆ ತೆರಿಗೆ ವಿಧಿಸುವ ನಿರ್ಧಾರಕ್ಕೆ ಕಡಿವಾಣ ಅಗತ್ಯ.ಕೇಂದ್ರ ಸರ್ಕಾರವು ಎಲ್ಲಾ ವಸ್ತುಗಳ ಮೇಲೆ ದೇಶಾದ್ಯಂತ ಒಂದೇ ರೀತಿಯ ತೆರಿಗೆ ಇರುವಂತೆ ನಿಯಮಗಳನ್ನು ರೂಪಿಸಿ ಜಾರಿಗೆ ತರಲಿ ಆಗ ಒನ್ ನೇಷನ್.. ಒನ್... ಟಾಕ್ಸ್ ಎನ್ನುವುದಕ್ಕೆ ಅರ್ಥ ಬರುತ್ತದೆ. ರಾಜ್ಯ ಸರ್ಕಾರಗಳು ಕೂಡ ಮನಸೋ ಇಚ್ಛೆ ಉಚಿತ ಯೋಜನೆಗಳನ್ನು ಜಾರಿ ಮಾಡಿ ಈ ರೀತಿ ತೆರಿಗೆ ವಿಧಿಸುವ ಕ್ರಮ ಕೈ ಬಿಡಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಚಾ.ನಗರಕ್ಕೆ 88ನೇ ಕನ್ನಡ ಹಬ್ಬದ ಆತಿಥ್ಯ ಸಿಗಲಿ

ಮಾನ್ಯರೆ,

ಜಾನಪದ ಲೋಕದ ತವರು ಎಂದೇ ಖ್ಯಾತಿ ಪಡೆದಿರುವ ಗಡಿ ಜಿಲ್ಲೆಯಾದ ಚಾಮರಾಜನಗರಕ್ಕೆ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯ ಅವಕಾಶ ನೀಡಬೇಕಾಗಿದೆ. ಕನ್ನಡ ನಾಡಿಗೆ ಉತ್ತಮ ಕವಿಗಳು, ಸಾಹಿತಿಗಳು, ನಟರು ಹಾಗೂ ಜನಪ್ರತಿನಿಧಿಗಳನ್ನು ನೀಡುವ ಮೂಲಕ ಕನ್ನಡದ ಶ್ರೀಮಂತಿಕೆ ಹೆಚ್ಚಿಸಿರುವ ಈ ಜಿಲ್ಲೆಗೆ ಕನ್ನಡದ ಹಬ್ಬವನ್ನು ಮುಂದಿನ ವರ್ಷ ಆಚರಿಸುವ ಸೌಭಾಗ್ಯ ಲಭಿಸುವಂತಾಗಬೇಕಾಗಿದೆ. ಜಿಲ್ಲೆಯಾಗಿ ಘೋಷಣೆಗೊಂಡು ಸುಮಾರು 25 ವರ್ಷಗಳು ಕಳೆದಿದ್ದರೂ ಯಾವುದೇ ರಾಜ್ಯ ಮಟ್ಟದ ಕಾರ್ಯಕ್ರಮಗಳು ನಡೆಯದೆ ಇರುವುದರಿಂದ ಈ ಜಿಲ್ಲೆ ನಾಡಿನಾದ್ಯಂತ ಗುರುತಿಸಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿದ ವಿಫಲತೆ ಮತ್ತು ಅಭಿವೃದ್ಧಿಯಲ್ಲಿ ಕುಂಠಿತ ಕಂಡಿದ್ದು, ಇದರ ಕಾರಣ ನಮ್ಮ ಸರ್ಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಒಕ್ಕೂಟವು ಮುಂದಿನ ವರ್ಷ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಚಾಮರಾಜನಗರ ಜಿಲ್ಲೆಯಲ್ಲಿ ನಡೆಸುವುದರ ಮೂಲಕ ಮತ್ತಷ್ಟು ಕನ್ನಡದ ಮಹತ್ವವನ್ನು ಮತ್ತು ಜಿಲ್ಲೆಗೆ ಹೊಂದಿಕೊಂಡಿರುವ ಎರಡು ರಾಜ್ಯಗಳಿಗೂ ಕನ್ನಡದ ಶ್ರೀಮಂತಿಕೆಯು ತಿಳಿಯುವ ಹಾಗೆ ಅವಕಾಶವನ್ನು ನೀಡಿ ಆಚರಿಸಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ.

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



49. ಕನ್ನಡ ರಂಗದ ಆಚಾರ್ಯ ಮಂಡ್ಯ ರಂಗಾಚಾರ್ಯ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಅರಮನೆಯಲ್ಲಿಯೇ ನಾಟಕ ಕಂಪನಿಯೊಂದನ್ನು ಸ್ಥಾಪಿಸಿ ರಂಗಭೂಮಿಯ ಏಳಿಗೆಗೆ ಕಾರಣಕರ್ತರಾದ ಮಹಾರಾಜ ಚಾಮರಾಜ ಒಡೆಯರ ಕೊಡುಗೆ ಅವಿಸ್ಮರಣೀಯ. ಅವರು ನೀಡಿದ ರಾಜಾಶ್ರಯದಿಂದಾಗಿ ಕನ್ನಡ ರಂಗಭೂಮಿ ಮೈಸೂರಿನಲ್ಲಿ ಭದ್ರವಾಗಿ ತಳ ಊರಿತು. ನಾಟಕ ಕಲೆ ವ್ಯಾಪಕವಾಗಿ ಹರಡಿತು. ಹಲವಾರು ನಾಟಕಗಳು ರಚನೆಯಾದವು. ಅವುಗಳನ್ನು ಕಲಾವಿದರು ಸತತ ಅಭ್ಯಾಸ ಮಾಡಿ ತಮ್ಮ ಏಳಿಗೆಗೆ ಕಾರಣಕರ್ತನಾದ ಮಹಾರಾಜರ ಮುಂದೆಯೇ ಆಡಿ ತೋರಿಸಿ 'ಭೇಷ್' ಎನಿಸಿಕೊಂಡರು. ರಂಗಭೂಮಿಯ ಇತಿಹಾಸ ಬರೆಯುವಾಗ ಮಹಾರಾಜ ಚಾಮರಾಜ ಒಡೆಯರು ರಂಗಭೂಮಿಗಿತ್ತ ಪ್ರೋತ್ಸಾಹ–ಬೆಂಬಲ ಗುರುತಿಸದೆ ಇರುವುದು ಅಸಾಧ್ಯ.

ರಾಜಾಶ್ರಯದಲ್ಲಿ 'ದಶಾವತಾರ ನಾಟಕ' ಕಂಪನಿ ಪ್ರಾರಂಭಿಸಿ ಚಾಮರಾಜ ಒಡೆಯರು ಕೀರ್ತಿ ಗಳಿಸಿದರೆ, ಕನ್ನಡ ವೃತ್ತಿ ರಂಗಭೂಮಿಯ ಆಚಾರ್ಯ ಪಟ್ಟ ಪಡೆದ ಕೀರ್ತಿ ಮಂಡ್ಯದ ರಂಗಾಚಾರ್ಯರಿಗೆ ಸಲ್ಲುತ್ತದೆ. ಆದರೆ ಅವರ ಕೊಡುಗೆ ಹಿಂದೆ ಸರಿದು ಹೋಗಿದೆ. ರಂಗಭೂಮಿಯ ಇತಿಹಾಸ ಬರೆಯುವವರೂ ಅವರ ಸೇವೆ ನೆನಸಿಕೊಳ್ಳುವುದು ಕಡಿಮೆಯೇ. ರಂಗಾಚಾರ್ಯರು ತಮ್ಮ ಕಂಪನಿಯ ಕನ್ನಡ ನಾಟಕಗಳಿಗೆ ನಟರನ್ನು ಆಯ್ದುಕೊಂಡು ಅವರಿಗಿತ್ತ ಪ್ರೋತ್ಸಾಹ ವಿಶೇಷವಾದದ್ದು, ಅವರ ಪ್ರೋತ್ಸಾಹದಿಂದಾಗಿ ನಾಟಕರಂಗದ ಹಲವಾರು ಕಲಾವಿದರು ಪ್ರಸಿದ್ಧಿಗೆ ಬಂದರು. ಅವರು ರಂಗಾಚಾರ್ಯರ ಜಾಡನ್ನು ಹಿಡಿದು ಅವರ ಕಾರ್ಯವನ್ನು ಮುಂದುವರಿಸಿಕೊಂಡು ಹೋದರು.

ಮಹಾರಾಜ ಚಾಮರಾಜ ಒಡೆಯರಿಗೆ ನಾಟಕ ಕಂಪನಿಯನ್ನು ಪ್ರಾರಂಭಿಸುವ ಪ್ರೇರಣೆ ನೀಡಿದ್ದು, ಪಾರ್ಸಿ ಹಾಗೂ ಮರಾಠಿ ನಾಟಕ ತಂಡಗಳು. ಮುಂಬಯಿಯ ಪೆಸ್ತೋಂಜಿ ಫ್ರಂಜಿ ಬಾಲಿವಾಲ ನೇತೃತ್ವದ ಪಾರ್ಸಿ ಕಂಪನಿ 1870ರಿಂದ ಮೈಸೂರು, ಬೆಂಗಳೂರಿಗೆ ಬಂದು ನಾಟಕಗಳನ್ನು ಪ್ರದರ್ಶಿಸುತ್ತಿತ್ತು. 1878ರಲ್ಲಿ ಸಾಂಗ್ಲಿಯಿಂದ ಮರಾಠ ನಾಟಕ ತಂಡಗಳು ಬೆಂಗಳೂರು, ಮೈಸೂರು ನಗರಗಳಲ್ಲಿ ಕೆಲವು ಪ್ರಯೋಗಗಳನ್ನು ನಡೆಸಿದವು. ಪಾರ್ಸಿ ಕಂಪನಿಯ ನಾಟಕಗಳನ್ನು ನೋಡಲು ಜನ ಧಾವಿಸುತ್ತಿದ್ದುದನ್ನು ಗಮನಿಸಿದ ಚಾಮರಾಜ ಒಡೆಯರು ತಮ್ಮಲ್ಲಿಯೇ ಇಂತಹ ಪ್ರಯೋಗಗಳನ್ನು ನಡೆಸುವ ಬಗ್ಗೆ ಆಲೋಚಿಸಿ ಅರಮನೆಯ ಆಶ್ರಯದಲ್ಲಿ ಪ್ರಾರಂಭವಾಗಿದ್ದ 'ರಾಯಲ್ ಶಾಲೆ'ಯ ವಿದ್ಯಾರ್ಥಿಗಳಿಗೆ ನಾಟಕವೊಂದನ್ನು ಆಡಿತೋರಲು ಪ್ರಯತ್ನಿಸುವಂತೆ 1880ರಲ್ಲಿ ಆದೇಶಿಸಿದರು. ಮಹಾರಾಜರ ಆದೇಶಕ್ಕೆ ಸ್ಪಂದಿಸಿ ಶಾಲೆಯ ವಿದ್ಯಾರ್ಥಿಗಳು 'ಪ್ರಹ್ಲಾದ' ಹೆಸರಿನ ನಾಟಕವನ್ನು ಅಭ್ಯಾಸ ಮಾಡಿ ಮಹಾರಾಜರ ಮುಂದೆ ಅಭಿನಯಿಸಿದರು. ಎಂದಿನ 'ದಶಾವತಾರ' ಆಟಗಳಿಗೆ ಬದಲಾಗಿ ಅಭಿನಯಿಸಲಾದ ನಾಟಕ ಮೆಚ್ಚುಗೆ ಗಳಿಸಿತು. ಆದರೆ ಈ ನಾಟಕ 'ಮರಾಠಿ' ಭಾಷೆಯದ್ದಾಗಿತ್ತು. ವಿದ್ಯಾರ್ಥಿಗಳು ಅಭಿನಯಿಸಿದ ನಾಟಕ ಯಶಸ್ಸು ಸಾಧಿಸಿದನ್ನು ಕಂಡ ಮಹಾರಾಜರು ಇಂಗ್ಲಿಷ್ ನಾಟಕವೊಂದನ್ನು ರಂಗಕ್ಕೆ ತರುವಂತೆ ಸಲಹೆ ಮಾಡಿದರು. ಅದರಂತೆ ವಿದ್ಯಾರ್ಥಿಗಳು 'ಫಿನಿಷ್ಡ್ ಅಪಾರ್ಟ್‌ಮೆಂಟ್' ಹೆಸರಿನ ನಾಟಕವನ್ನು ಪ್ರದರ್ಶಿಸಿದರು.

ರಾಯಲ್ ಶಾಲೆಯ ವಿದ್ಯಾರ್ಥಿಗಳು ನಾಟಕಗಳನ್ನು ಯಶಸ್ವಿಯಾಗಿ ಆಡಿದ್ದು ಮಹಾರಾಜರನ್ನು ಉತ್ತೇಜಿಸಿತು. ಆಸ್ಥಾನ ವಿದ್ವಾಂಸರಾದ ಬಸವಪ್ಪ ಶಾಸ್ತ್ರಿ, ಸೋಸಲೆ ಅಯ್ಯ ಶಾಸ್ತ್ರಿ, ಜಯಾಚಾರ್ಯ ಹಾಗೂ ಇತರ ವಿದ್ವಾಂಸರಿಗೆ ಕನ್ನಡದಲ್ಲಿ ನಾಟಕಗಳನ್ನು ರಚಿಸುವಂತೆ ಸಲಹೆ ನೀಡಿದರು. ಅರಮನೆಯಲ್ಲಿಯೇ ನಾಟಕ ಕಂಪನಿಯೊಂದನ್ನು 1882ರಲ್ಲಿ ಪ್ರಾರಂಭಿಸಿ ಅದಕ್ಕೆ 'ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕಸಭಾ' ಎಂದು ಹೆಸರಿಟ್ಟರು. ಶಾಲೆಯ ಕಲಾವಿದರೇ ಅಲ್ಲದೆ ಅರಮನೆಯ ಬೇರೆ ಬೇರೆ ಶಾಖೆಗಳಲ್ಲಿದ್ದ ಸಿಬ್ಬಂದಿಯಲ್ಲಿ ಒಳ್ಳೆಯ ರೂಪು, ಶಾರೀರ ಇದ್ದ ಜನರನ್ನು ಆರಿಸಿದ್ದ ನಾಟಕ ಕಂಪನಿ ಪ್ರಾರಂಭವಾಯಿತು. ಬಸವಪ್ಪಶಾಸ್ತ್ರಿಗಳು ಬರೆದ 'ಶಾಕುಂತಲ' ಕನ್ನಡ ನಾಟಕ ಅಭಿನಯಕ್ಕೆ ತೆಗೆದುಕೊಳ್ಳಲಾದ ಮೊದಲ ನಾಟಕವಾಯಿತು. ಬಿ.ಮಲ್ಲಪ್ಪ, ಚಿಟಗಿ ಸಿದ್ಧಲಿಂಗಪ್ಪ, ಮಲ್ಲಾರಾಧ್ಯ, ಆಸ್ಥಾನ ವಿದ್ವಾನ್ ಸದಾಶಿವರಾಯರು, ಎಂ.ಡಿ. ಸುಬ್ಬಣ್ಣ ಮತ್ತು ಆರ್.ರಾಘವೇಂದ್ರರಾಯರಿಗೆ ನಾಟಕದ ನಿರ್ವಹಣೆ ವಹಿಸಲಾಯಿತು. ನಾಟಕ ತಂಡವನ್ನು 'ಶಾಕುಂತಲ ಕರ್ನಾಟಕ ನಾಟಕ ಸಭಾ' ಎಂಬುದಾಗಿ ಹೆಸರಿಸಲಾಯಿತು. ನಾಟಕಗಳ ಸಮಗ್ರ ನಿರ್ವಹಣೆಯ ಕಾರ್ಯ ನೋಡಿಕೊಳ್ಳಲು ಅರಮನೆಯಲ್ಲಿ ಒಂದು ನಾಟಕ ಇಲಾಖೆಯನ್ನೇ ರಚಿಸಲಾಯಿತು.

ಈ ಕಂಪನಿ ಕ್ರಮೇಣ ಅರಮನೆಯಲ್ಲಿ ಮಾತ್ರವಲ್ಲದೆ ವರ್ಷಕ್ಕೆ ಮೂರು ನಾಲ್ಕು ನಾಟಕಗಳನ್ನು ಸಾರ್ವಜನಿಕವಾಗಿಯೂ ಆಡುತ್ತಿತ್ತು. ಆ ನಾಟಕಗಳಿಂದ ಉತ್ಪತ್ತಿಯಾದ ಹಣದಲ್ಲಿ ನಟರಿಗೆ ನಿಯಮಿತ ಪಾಲನ್ನು ಕೊಡಲಾಗುತ್ತಿತ್ತು. ಅಂದಿಗೆ ಅರಮನೆ ಕಂಪನಿಯಲ್ಲಿ ಇದ್ದ ನಟರೆಂದರೆ ಗಿರಿಭಟ್ಟರ ತಮ್ಮಯ್ಯ, ಲಕ್ಷ್ಮೀಪತಿ ಶಾಸ್ತ್ರಿಗಳು, ದೇವರಾಜ್, ಸೂತ್ರಧಾರ ಸುಬ್ಬರಾಯರು, ಶಿವರಾಯರು, ಶಾಮಣ್ಣ, ವೀರರಾಘವಯ್ಯಂಗಾರ್ಯ, 'ಸರ್ಟನ್' ರಾಮರಾವ್, ವ್ಯಾಸರಾವ್, ಚಿಕ್ಕ ಶೇಷಗಿರಿರಾಯರು, ಬಿಡಾರಂ ಕೃಷ್ಣಪ್ಪ, ದೊಡ್ಡರಾಮು, ಚಿಕ್ಕರಾಮು, ಸೂರಿಪಂಡಿತರು, ಪುಟ್ಟೂಪಂಡಿತರು, ಜುಂಜೋಟಿ ಶೇಷ, ಶಿವಪ್ಪಾಜಿ, ಕೃಷ್ಣಪ್ಪಾಜಿ, ಬಿ. ಮಲ್ಲಪ್ಪ, ಮಹಾಲಿಂಗಪ್ಪ, ಡೀರೆ ಸುಬ್ಬರಾವ್, ಮರಾಠ ಬ್ಯಾಂಕ್ ಏಜೆಂಟ್ ಸುಬ್ಬರಾವು, ಪ್ಯಾರಿ ಕಿಟ್ಟಿ (ಜಿ. ವಿ. ಕೃಷ್ಣಮೂರ್ತಿ), ವೆಂಕಟರಾಮಯ್ಯ, ಪುಟ್ಟಾಶಾಸ್ತ್ರಿಗಳು ಮತ್ತು ಕೆಲವು ಹುಡುಗರು. ಕಾಲಕ್ರಮದಲ್ಲಿ ರಾಚಪ್ಪ, ನರಸೀಪುರದ ಸುಬ್ಬಣ್ಣ, ಮುಡುಕುತೊರೆ ಸುಬ್ಬಣ್ಣ ಅವರುಗಳು ಅರಮನೆ ಕಂಪನಿಯನ್ನು ಸೇರಿದರು.

ಮಹಾರಾಜರು ಅರಮನೆಯ ನಾಟಕ ಕಂಪನಿಯನ್ನು ಕಟ್ಟುವುದಕ್ಕೆ ಮುಂಚೆ ಭಾರತದ ಬೇರೆ ಯಾವ ರಾಜರೂ ರಂಗ ಕಲಾವಿದರಿಗೆ ಆಶ್ರಯ ಕೊಟ್ಟು ನಾಟಕ ಕಂಪನಿಯೊಂದನ್ನು ತಮ್ಮ ಅರಮನೆಯಲ್ಲಿ ಹುಟ್ಟಿ ಹಾಕಿರಲಿಲ್ಲ. ಚಾಮರಾಜ ಒಡೆಯರು ಹುಟ್ಟು ಹಾಕಿದ 'ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕಸಭಾ' ಅರಮನೆಯ ಪೋಷಣೆಯಲ್ಲಿ ಬೆಳೆದದ್ದಾದರೆ ಹೊರಗಡೆ ಯಾವುದೇ ವೃತ್ತಿ ರಂಗಭೂಮಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಖಾಸಗಿಯಾಗಿ ಯಾರೂ ವೃತ್ತಿ ನಾಟಕ ಕಂಪನಿಯನ್ನು ಪ್ರಾರಂಭಿಸಿರಲಿಲ್ಲ. ಈ ಕೊರತೆಯನ್ನು ತುಂಬಿದವರು ಮಂಡ್ಯದ ರಂಗಾಚಾರ್ಯರು.

ಮಂಡ್ಯದ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಗ್ರಾಮದ ಕೊಪ್ಪಲಿನಲ್ಲಿ 1856ರಲ್ಲಿ ಜನಿಸಿದ ರಂಗಾಚಾರ್ಯರು 1878ರಲ್ಲಿ ಮೈಸೂರಿಗೆ ಬಂದು ನೆಲೆಸಿದರು. ಅವರಿಗೆ ಚಿಕ್ಕಂದಿನಿಂದಲೂ ಹೆಚ್ಚಿನ ಓದಿಗಿಂತ ನಾಟಕಗಳ ಬಗ್ಗೆ ಆಸಕ್ತಿ ಜಾಸ್ತಿ. ಮೈಸೂರಿಗೆ ಬಂದ ರಂಗಾಚಾರ್ಯರು ರಂಗಭೂಮಿಯ ಬಗ್ಗೆ ಮಹಾರಾಜರಿಗಿದ್ದ ಉತ್ಸಾಹವನ್ನು ಕಂಡು ತಮ್ಮದೇ ಆದ 'ರಾಜಧಾನಿ ನಾಟಕ ಮಂಡಲಿ'ಯನ್ನು 1880ರಲ್ಲಿ ಸ್ಥಾಪಿಸಿದರು. ಆಗಿನ್ನೂ ಅರಮನೆಯ ನಾಟಕ ಸಭಾ ಅಸ್ತಿತ್ವಕ್ಕೆ ಬಂದಿರಲಿಲ್ಲ ಎಂಬುದನ್ನು ಗಮನಿಸಬೇಕು. ಅದು ಅಸ್ತಿತ್ವಕ್ಕೆ ಬಂದಿದ್ದು ಏನಿದ್ದರೂ 1882ರಲ್ಲಿ. ರಂಗಾಚಾರ್ಯರು ಅಭಿನಯದಲ್ಲಿ ಆಸಕ್ತಿ ಹೊಂದಿದ್ದ ಕೆಲವು ಕಲಾವಿದರನ್ನು ಸೇರಿಸಿ ಕನ್ನಡ ನಾಟಕಗಳನ್ನು ಆಡಲು ಪ್ರಾರಂಭಿಸಿದರು. ಪ್ರಾರಂಭದ ನಾಟಕಗಳಲ್ಲಿ 'ಸತ್ಯವಾನನ ಚರಿತ್ರೆ', 'ರತ್ನಾವಳಿ' ಕನ್ನಡ ನಾಟಕಗಳು ಸೇರಿದ್ದವು. ರಂಗಾಚಾರ್ಯರ ನಾಟಕ ಕಂಪನಿ ಮೈಸೂರಿನಲ್ಲಿ ಪ್ರಾರಂಭವಾದ ಮೊದಲ ವೃತ್ತಿ ನಾಟಕ ಕಂಪನಿಯಾಗಿತ್ತು. ಅದರಲ್ಲಿಯೂ ಅವರ ವೃತ್ತಿ ಕಂಪನಿ ಕನ್ನಡ ನಾಟಕಗಳಿಗೆ ಸೀಮಿತವಾಗಿ ಕನ್ನಡ ನಾಟಕಗಳ ಸಾರ್ವಜನಿಕ ಪ್ರದರ್ಶನವನ್ನು ಹುಟ್ಟುಹಾಕಿತು. ರಂಗಾಚಾರ್ಯರು ಕನ್ನಡ ರಂಗದ ಆಚಾರ್ಯರಾದರು. ಆದ್ಯ ಪ್ರವರ್ತಕರಾದರು.

ಅವರ ಕಂಪನಿಯು ಶ್ರೀನಿವಾಸ ಅಯ್ಯಂಗಾರ್ ಅವರ 'ರತ್ನಾವಳಿ', 'ಸತ್ಯವರ್ಮ', ಮತ್ತು 'ಹರಿಶ್ಚಂದ್ರ', ಎಸ್.ಜಿ.ನರಸಿಂಹಾಚಾರ್ಯರ 'ಶಾಕುಂತಲ', 'ಚಂದ್ರಹಾಸ', ಮತು 'ಕಂಪಾಲ ಚರಿತ್ರೆ', ಎ.ಆನಂದರಾವ್ ಮತ್ತು ಎಂ.ಎ.ಶ್ರೀನಿವಾಸಾಚಾರ್ ಅವರ 'ರಾಮವರ್ಮ–ಲೀಲಾವತಿ', ಮಹದೇವ ಶಾಸ್ತ್ರಿಗಳ 'ಮಕರಂದಿಕಾ ಪರಿಣಯ' ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಪಾತ್ರವಹಿಸುತ್ತಿದ್ದ ಕೆಲವು ಉತ್ತಮ ನಟರಲ್ಲಿ ಚಕ್ರವರ್ತಿ ತಿರುನಾರಾಯಣ ಅಯ್ಯಂಗಾರ್, ನಾಟಂಪಲ್ಲಿ ಶಿಂಗಳಾಚಾರ್ಯ, ಗೌರಿ ನರಸಿಂಹಯ್ಯ, ರಾಮಸ್ವಾಮಿ ಕೃಷ್ಣ ಅಯ್ಯಂಗಾರ್, ಚಕ್ರವರ್ತಿ ಶ್ರೀನಿವಾಸ ಅಯ್ಯಂಗಾರ್, ಚಕ್ರವರ್ತಿ ರಂಗಾಚಾರ್ಯ, ರಾಮಚಂದ್ರ ಪಂಡಿತ, ನರಸಿಂಹಯ್ಯ, ಧರ್ಮಾದೇವಿ ನರಸಿಂಹಮೂರ್ತಿ, ಅಡ್ವೋಕೇಟ್ ವಿ. ನರಸಿಂಹಾಚಾರ್ಯ, ಆನಂದಾಳ್ವಾರ್ ತಿರುನಾರಾಯಣ ಅಯ್ಯಂಗಾರ್, ಬಾಲನಟ ಶ್ರೀನಿವಾಸಮೂರ್ತಿ ಇತರರಿದ್ದರು. ರಂಗಾಚಾರ್ಯರು ಪ್ರಧಾನ ಪಾತ್ರ ವಹಿಸಿದರೆ ಗೌರೀ ನರಸಿಂಹಯ್ಯ ಸ್ತ್ರೀ ವೇಷಧಾರಿಯಾಗಿದ್ದರು.

1883ರಲ್ಲಿ ತಮ್ಮ ಕಂಪನಿಯ ಹೆಸರನ್ನು ಅವರು 'ಮೆಟ್ರೋಪಾಲಿಟನ್ ಓಪೇರಾ ಥೀಯೆಟರ್' ಎಂದು ಬದಲಾಯಿಸಿದರು. ರಂಗಾಚಾರ್ಯರ ಅಭಿನಯಕಲೆ ಹಾಗೂ ನರಸಿಂಹಯ್ಯನವರ ಸ್ತ್ರೀ ಪಾತ್ರ ನಿರ್ವಹಣೆ, ಹಾಡುಗಾರಿಕೆ ಜನಮನವನ್ನು ಸೂರೆಗೊಂಡಿತು. ತಂಡ ಬೆಂಗಳೂರು, ಬಳ್ಳಾರಿಗೂ ಹೋಗಿ ನಾಟಕಗಳನ್ನು ಪ್ರದರ್ಶಿಸಿ ಯಶಸ್ಸು ಸಾಧಿಸಿತು. ರಂಗಾಚಾರ್ಯರನ್ನು ಅನುಸರಿಸಿ ಮುಂದೆ ಅನೇಕ ವೃತ್ತಿ ನಾಟಕ ಕಂಪನಿಗಳು ಸ್ಥಾಪಿತವಾಗಿ ನಾಟಕ ರಂಗಕ್ಕೆ ತಮ್ಮದೇ ಕೊಡುಗೆ ನೀಡಿದವು.

ರಂಗಾಚಾರ್ಯರು 1889ರಲ್ಲಿ ತಮ್ಮ ನಾಟಕ ಕಂಪನಿಯನ್ನು ಮುಚ್ಚಿ ನಂತರ ಅರಮನೆಯ ನಾಟಕ ಕಂಪನಿಗೆ ಸೇರಿದರು. ಒಂದೆರಡು ವರ್ಷಗಳ ನಂತರ ಮಂಡ್ಯದ ರಂಗಾಚಾರ್ಯರು ತಮ್ಮ ನಟನೆಗೆ ತೆರೆ ಇಳಿಸಿ ಮೈಸೂರನ್ನು ಬಿಟ್ಟು ಸ್ವಗ್ರಾಮಕ್ಕೆ ಹೊರಟು ಹೋದರು. 1896ರಲ್ಲಿ ಅಲ್ಲಿಯೇ ಅವರ ಅಂತ್ಯವಾಗಿ ರಂಗಭೂಮಿಯ ಆದ್ಯ ಪುರುಷನ ಮರೆಯಾಯಿತು.

ಹುಟ್ಟುಹಬ್ಬದ ಶುಭಾಶಯ...



ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೇ ಅರಸ್ ಅವರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಹುಟ್ಟುಹಬ್ಬದ ಶುಭಾಶಯ ಕೋರಿದರು. ಮುಖಂಡರಾದ ಮಾ.ವಿ.ರಾಮ್‌ಪ್ರಸಾದ್, ಪುರುಷೋತ್ತಮ್, ಶಿವಪ್ಪ, ಚಂದ್ರಕಲಾ, ಜಯರಾಮ್, ಹರೀಶ್, ಕಿಶೋರ್, ಕೀರ್ತಿ, ಸಂತೋಷ್‌ಕುಮಾರ್ ಇನ್ನಿತರರಿದ್ದಾರೆ.

ಸಂದರ್ಶನಕ್ಕೆ ಆಹ್ವಾನ

ಮೈಸೂರು: ಮೈಸೂರು ವಿಶ್ವವಿದ್ಯಾಲಯ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನಲ್ಲಿನ ಹೆಚ್ಚಿನ ಕಾರ್ಯ ಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕ ಹುದ್ದೆಗೆ ಆಯ್ಕೆ ಮಾಡಲು ಡಿ.26ರಂದು Walk-in interview ಏರ್ಪಡಿಸಲಾಗಿದೆ. ಆಸಕ್ತರು www.uni-mysore.ac.in ಮೂಲಕ ಅರ್ಜಿ ಪಡೆಯಬಹುದು. ನಿಗದಿಪಡಿಸಲಾದ ದಿನಾಂಕಗಳಲ್ಲಿ ವ್ಯತ್ಯಾಸವಾದಲ್ಲಿ ಬದಲಾವಣೆಯ ದಿನಾಂಕವನ್ನು www.uni-mysore.ac.in ನಲ್ಲಿ ಹೊರಡಿಸಲಾಗುವುದು.

ವಿವಿಧ ವಸತಿ ಯೋಜನೆಯ ಫಲಾನುಭವಿಗಳಿಗೆ ಸೂಚನೆ

ಮೈಸೂರು,ಡಿ.22–ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2010–11ರಿಂದ 2014–15ರವರೆಗೆ ರಾಜ್ಯ ಸರ್ಕಾರ ಹಾಗೂ 2015–16ರಿಂದ 2021–22ರವರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ನಗರ ವಸತಿ ಯೋಜನೆಗಳಲ್ಲಿ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾಗಿರುವ ಫಲಾನುಭವಿಗಳು ಮನೆಯ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ನಗರಪಾಲಿಕೆ ಸೂಚಿಸಿದ್ದು, ಈಗಾಗಲೇ ಪಾಲಿಕೆ ಸಿಬ್ಬಂದಿ ಹಲವಾರು ಬಾರಿ ಖುದ್ದು ಮನೆಗಳಿಗೆ ಭೇಟಿ ನೀಡಿ ಕಾಮಗಾರಿ ಪೂರ್ಣ ಮಾಡಿಕೊಳ್ಳುವಂತೆ ಸೂಚಿಸಿ ಆಶ್ರಯ ಶಾಖೆಯ ಕಚೇರಿ ಸೂಚನಾ ಫಲಕದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಹಾಕಿ ಪ್ರಗತಿ ಸಾಧಿಸದ ಮನೆಗಳನ್ನು ರದ್ದು ಪಡಿಸಲಾಗುವುದು ಎಂದು ತಿಳಿಸಲಾಗಿದೆ. ಸಂಬಂಧಪಟ್ಟ ಫಲಾನುಭವಿಗಳು ಡಿ.26ರೊಳಗೆ ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಮಾಡಿಕೊಳ್ಳಬೇಕು. ತಪ್ಪಿದ್ದಲ್ಲಿ ಇದಕ್ಕೆ ಮೈಸೂರು ಮಹಾನಗರ ಪಾಲಿಕೆ ಹೊಣೆಯಾಗಿರುವುದಿಲ್ಲ ಎಂದು ಪಾಲಿಕೆ ಆಯುಕ್ತರು ಪ್ರಕಣೆಯಲ್ಲಿ ತಿಳಿಸಿದ್ದಾರೆ.

ಕೆಸರೆ, ರಾಯನಕೆರೆ ಘಟಕಗಳಲ್ಲಿ ನಿತ್ಯ 130 ಟನ್ ಕಸ ಸಂಸ್ಕರಣೆ

ಹಸಿ ಕಸದಿಂದ ತಯಾರಿಸಿದ ಕಾಂಪೋಸ್ಟ್ ಗೊಬ್ಬರ ಟನ್‌ಗೆ 2050 ರೂ.ಗೆ ಮಾರಾಟ





ಮೈಸೂರಿನ ಕೆಸರೆ ಮತ್ತು ರಾಯನಕೆರೆ ಬಳಿಯ ಘಟಕಗಳಲ್ಲಿ ಸಂಗ್ರಹವಾಗುವ ಕಸವನ್ನು ಸಂಸ್ಕರಣೆ ಮಾಡಿ, ಕಾಂಪೋಸ್ಟ್ ಗೊಬ್ಬರ ತಯಾರಿಸಲಾಗುತ್ತಿದೆ.

ಮೈಸೂರು, ಡಿ.22(ಆರ್‌ಕೆ)– ಪಾಲಿಕೆಯಿಂದ ಹೊಸದಾಗಿ ಆರಂಭವಾಗಿರುವ ಮೈಸೂರಿನ ಕೆಸರೆ ಮತ್ತು ರಾಯನಕೆರೆ ಬಳಿಯ ಘಟಕಗಳಲ್ಲಿ ಪ್ರತಿ ನಿತ್ಯ ಸರಾಸರಿ 130 ಟನ್ ಕಸವನ್ನು ಸಂಸ್ಕರಣೆ ಮಾಡಲಾಗುತ್ತಿದೆ.

ಮೈಸೂರು ನಗರದಾದ್ಯಂತ ಎಲ್ಲಾ ವಸತಿ ಬಡಾವಣೆಗಳಲ್ಲಿ ಉತ್ಪತ್ತಿಯಾಗುತ್ತಿರುವ ಸುಮಾರು 300 ಟನ್ ಹಸಿ ಮತ್ತು ಒಣ ಕಸವನ್ನು ವಿದ್ಯಾರಣ್ಯಪುರಂ ಸೀವೇಜ್ ಫಾರಂ ಯಾರ್ಡ್‌ಗೆ ಮಾತ್ರ ಸುರಿಯುತ್ತಿದ್ದರಿಂದ ಸ್ಥಳದಲ್ಲಿ ಬೆಟ್ಟದಂತೆ ಕಸದ ರಾಶಿ ಸಂಗ್ರಹವಾಗಿ ಸುತ್ತಲಿನ ವಾಸಿಗಳಿಗೆ ಕೆಟ್ಟ ವಾಸನೆ ಬರುತ್ತಿದ್ದ ಕಾರಣ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅದರ ಒತ್ತಡ ನಿವಾರಿಸಲು ಮೈಸೂರು ಮಹಾನಗರಪಾಲಿಕೆಯು ಕೆಸರೆ ಮತ್ತು ರಾಯನಕೆರೆಯಲ್ಲಿ ಎರಡು ಕಸ ಸಂಸ್ಕರಣಾ ಘಟಕಗಳನ್ನು ಹೆಚ್ಚುವರಿಯಾಗಿ ಸ್ಥಾಪಿಸಲಾಗಿದೆ.

2023ರ ನವೆಂಬರ್ ಮಾಹೆಯಲ್ಲಿ ಕೆಸರೆ ಬಳಿ ಆರು ಎಕರೆ ಪ್ರದೇಶದಲ್ಲಿ ಕಸ ಸಂಸ್ಕರಣಾ ಘಟಕ ಆರಂಭಿಸಲಾಗಿದ್ದು, ಅಲ್ಲಿಗೆ ನಗರದ ಪೂರ್ವ ಭಾಗದ ಬಡಾವಣೆಗಳಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ಕಸವನ್ನು ತಂದು ಸುರಿಯಲಾಗುತ್ತಿದೆ.

ಈ ಘಟಕಕ್ಕೆ ಬರುವ 30ರಿಂದ 50 ಟನ್ ಕಸವನ್ನು ಸಂಸ್ಕರಣೆ ಮಾಡಿ ಕಾಂಪೋಸ್ಟ್ ಗೊಬ್ಬರ ತಯಾರಿಸಿ ಪಾಲಿಕೆ ಪಾರ್ಕ್‌ಗಳಿಗೆ ಬಳಸಿಕೊಂಡು ಉಳಿದ ಗೊಬ್ಬರವನ್ನು ಟನ್‌ಗೆ 2050 ರೂ.ನಂತೆ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ ಎಂದು ಪರಿಸರ ಇಂಜಿನಿಯರ್ ಶ್ರೀದೇವಿ ತಿಳಿಸಿದ್ದಾರೆ.

2024ರ ಜುಲೈ ಮಾಹೆಯಲ್ಲಿ ಆರಂಭವಾದ ರಾಯನಕೆರೆ ಬಳಿಯ ಒಣ ಮತ್ತು ಹಸಿ ಕಸ ಸಂಸ್ಕರಣಾ ಘಟಕವು 4 ಎಕರೆ ಪ್ರದೇಶವಿದ್ದು, ನಿತ್ಯ ಸರಾಸರಿ 60ರಿಂದ 80 ಟನ್ ಕಸ ಸುರಿಯಲಾಗುತ್ತಿದೆ. ಅಲ್ಲಿ 15 ಟಿಪಿಡಿ (15 ಟನ್ ಪರ್ ಡೇ) ಸಾಮರ್ಥ್ಯದ ಹಸಿ ಕಸ ಸಂಸ್ಕರಣೆ ಘಟಕ ಹಾಗೂ 10 ಟಿಪಿಡಿ ಸಾಮರ್ಥ್ಯದ ಒಂದು ಒಣ ಕಸ ಬೇರ್ಪಡಿಸಿ ಸಿಮೆಂಟ್ ಕಾರ್ಖಾನೆಗೆ ಬೇಕಾಗುವ ಪದಾರ್ಥವನ್ನಾಗಿ ಪರಿವರ್ತಿಸುವ ಘಟಕ ಕಾರ್ಯ ನಿರ್ವಹಿಸುತ್ತಿದೆ.

ಈ ಎರಡೂ ಸಂಸ್ಕರಣಾ ಘಟಕಗಳಲ್ಲಿ ಕಸ ಸಂಸ್ಕರಿಸಿ ವಿಲೇವಾರಿ ಮಾಡಲು ಟೆಂಡರ್ ಮೂಲಕ ಖಾಸಗಿ ಸಂಸ್ಥೆಗಳಿಗೆ ವಹಿಸಲಾಗಿದೆ. ನಗರಪಾಲಿಕೆ ಪೌರ ಕಾರ್ಮಿಕರು ಮನೆ ಮನೆಗಳಿಂದ ಸಂಗ್ರಹಿಸಿದ ಕಸವನ್ನು ಘಟಕಗಳಿಗೆ ತಂದು ಸುರಿದರೆ ಅಲ್ಲಿ ಸಂಸ್ಕರಣೆ ಮಾಡಿ, ಮರುಬಳಕೆ ನಂತರ ಉಳಿದ ಅನುಪಯುಕ್ತ ವಸ್ತುವನ್ನು ಲ್ಯಾಂಡ್ ಫಿಲ್ಲಿಂಗ್ ಮಾಡಲಾಗುವುದು ಎಂದು ರಾಯನಕೆರೆ ಘಟಕದ ಪರಿಸರ ಇಂಜಿನಿಯರ್ ನವೀನ ತಿಳಿಸಿದ್ದಾರೆ. ಒಟ್ಟಾರೆ ಎರಡೂ ಘಟಕಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಸೀವೇಜ್ ಫಾರಂನಲ್ಲಿ ಒತ್ತಡ ಕಡಿಮೆಯಾದಂತಾಗಿದೆ. ಈಗ ವಿದ್ಯಾರಣ್ಯಪುರಂ ಘಟಕದಲ್ಲಿ ಸಂಗ್ರಹವಾಗುತ್ತಿರುವ ಕಸ ಕರಗಿಸುವ ಕೆಲಸವೂ ಆರಂಭವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಸಮಯ, ಶಿಸ್ತಿಗೆ ಆದ್ಯತೆ ನೀಡಿದರೆ ಸಾಧನೆ ಸಾಧ್ಯ

ವಿದ್ಯಾರ್ಥಿಗಳಿಗೆ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಕಿವಿಮಾತು



ರಾಮಕೃಷ್ಣ ವಿದ್ಯಾಶಾಲೆಯ ಕಾಲೇಜು ವಾರ್ಷಿಕೋತ್ಸವದಲ್ಲಿ ಏರ್ ಡೆಕ್ಕನ್ ಸಂಸ್ಥಾಪಕ ಕ್ಯಾ.ಜಿ.ಆರ್.ಗೋಪಿನಾಥ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಡಿ.22(ಎಸ್‌ಪಿಎನ್)– ವಿದ್ಯಾರ್ಥಿಗಳು ತಾವು ಅಂದುಕೊಂಡ ಗುರಿ ತಲುಪಲು ಸ್ವಾಮಿ ವಿವೇಕಾನಂದರ ತತ್ತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದು ಏರ್ ಡೆಕ್ಕನ್ ಸಂಸ್ಥಾಪಕ ಕ್ಯಾ.ಜಿ.ಆರ್.ಗೋಪಿನಾಥ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರು ಯಾದವಗಿರಿ ರಾಮಕೃಷ್ಣ ವಿದ್ಯಾಶಾಲೆಯ ಆವರಣದಲ್ಲಿ 72ನೇ ಕಾಲೇಜು ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಂದ ಧ್ವಜ ವಂದನೆ ಸ್ವೀಕರಿಸಿದ ನಂತರ ಮಾತನಾಡಿದರು. ಸ್ವಾಮಿ ವಿವೇಕಾನಂದರು ಭಾರತದ ಪರಂಪರೆ, ಮೌಲ್ಯಗಳ ಕುರಿತು ವಿಶ್ವದ ವಿವಿಧ ವೇದಿಕೆಗಳಲ್ಲಿ ಬಹಳ ಗಟ್ಟಿ ದನಿಯಲ್ಲಿ ಪ್ರತಿಪಾದಿಸಿದ್ದಾರೆ. ಅವರು ವಿಶೇಷವಾಗಿ ಯುವ ಶಕ್ತಿ ಕುರಿತು ಹೇಳಿರುವ ಪ್ರತಿಯೊಂದು ಸಂದೇಶಗಳು ಸಾಧನೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿದೆ ಎಂದು ಅಭಿಪ್ರಾಯಪಟ್ಟರು.

ನಾನು ಮಿಲಿಟರಿಯಲ್ಲಿ ಕೆಲಸ ಮಾಡುವಾಗ ಸಮಯ, ಶಿಸ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಆ ಶಿಸ್ತನ್ನು ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳಲ್ಲಿ ಕಂಡಿದ್ದೇನೆ. ಹಾಗಾಗಿ ಶಾಲಾ ದಿನಗಳಲ್ಲಿ ಸಿಗುವ ಎಲ್ಲಾ ಅವಕಾಶಗಳನ್ನು ವಿದ್ಯಾರ್ಥಿಗಳು ಬಳಸಿಕೊಂಡು ಜೀವನದಲ್ಲಿ ತಮ್ಮ ಗುರಿ ಮುಟ್ಟಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು. ಈ ವೇಳೆ ಪರೇಡ್ ಕಮಾಂಡರ್ ಲಿಖಿತ್ ರಾಜ್ ಅರಸ್ ನೇತೃತ್ವದಲ್ಲಿ ನಡೆಸಿಕೊಟ್ಟ ವಿದ್ಯಾರ್ಥಿಗಳ ಪಥಸಂಚಲನ ಎಲ್ಲರ ಗಮನ ಸೆಳೆಯಿತು. ನಂತರ ವಿವಿಧ ಕ್ರೀಡೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಹೊಸ ಹೊಸ ತಂತ್ರಜ್ಞಾನದ ಆವಿಷ್ಕಾರದೊಂದಿಗೆ ಸಮಾಜದಲ್ಲಿ ವಂಚನೆ ವಿಧಾನಗಳು ಬದಲಾಗುತ್ತಿವೆ!

ರಾಮಕೃಷ್ಣ ವಿದ್ಯಾಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಆತಂಕದ ನುಡಿ

ಮೈಸೂರು, ಡಿ.22(ಎಸ್‌ಪಿಎನ್)– ಹೊಸಹೊಸ ತಂತ್ರಜ್ಞಾನಗಳ ಆವಿಷ್ಕಾರದ ಜೊತೆಗೆ ಸಮಾಜದಲ್ಲಿ ಮೋಸ ಮಾಡುವ ವಿಧಾನಗಳು ಬದಲಾಗುತ್ತಿವೆ. ಇಂತಹ ಘಟನೆಗಳು ಸಮುದಾಯದಲ್ಲಿ ಹೆಚ್ಚಾಗಲು ಆಧ್ಯಾತ್ಮಕತೆ, ಧಾರ್ಮಿಕತೆಯ ಮೌಲ್ಯಗಳು ಕಡಿಮೆಯಾಗುತ್ತಿರುವುದೇ ಕಾರಣ ಎಂದು ಪದ್ಮವಿಭೂಷಣ ಪುರಸ್ಕೃತರು, ರಾಜ್ಯಸಭಾ ಸದಸ್ಯರಾದ ಡಾ.ವೀರೇಂದ್ರ ಹೆಗ್ಗಡೆ ಆತಂಕ ವ್ಯಕ್ತಪಡಿಸಿದರು.

ಮೈಸೂರು ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವದ 2ನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿಜಿಟಲ್ ತಂತ್ರಜ್ಞಾನ ದೇಶದ ಅಭಿವೃದ್ಧಿಗೆ ಪೂರಕವಾಗಿವೆ. ಆದರೆ, ಈ ಮೂಲಕ ಸಮುದಾಯವನ್ನು ಮೋಸಗೊಳಿಸುವ ವಿಧಾನವೂ ಬದಲಾಗುತ್ತಿರುವುದು ಆತಂಕಕಾರಿ ವಿಚಾರ. ಹಾಗಾಗಿ, ಇಂತಹ ಘಟನೆಗಳನ್ನು ತಡೆಗಟ್ಟಲು ಶಿಕ್ಷಣದ ಜೊತೆಗೆ ಆಧ್ಯಾತ್ಮ ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಬೇಕು ಎಂದು ಒತ್ತಾಯಿಸಿದರು.



ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳೊಂದಿಗೆ ರಾಜ್ಯಸಭಾ ಸದಸ್ಯರಾದ ಡಾ.ವೀರೇಂದ್ರ ಹೆಗ್ಗಡೆ, ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್, ಸ್ವಾಮಿ ಯುಕ್ತೇಶಾನಂದ ಜೀ ಮಹಾರಾಜ್, ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್ ಇದ್ದರು.

ವಸತಿ ಶಿಕ್ಷಣ ವ್ಯವಸ್ಥೆಯಡಿ ಎರಡು ರೀತಿಯ ವಿದ್ಯಾರ್ಥಿಗಳಿರುತ್ತಾರೆ. ಅವರಲ್ಲಿ ಒಂದು ವರ್ಗದಲ್ಲಿ ಉತ್ತಮ ಸಂಸ್ಕಾರವುಳ್ಳ ವಿದ್ಯಾರ್ಥಿಗಳಿದ್ದರೆ, ಮತ್ತೊಂದು ವರ್ಗದಲ್ಲಿ ತುಂಬ ತುಂಟತನ ಮಾಡುವ ಹುಡುಗರು ಇರುತ್ತಾರೆ. ಮನೆಯಲ್ಲಿ ಅವನ ತುಂಟತನ ತಾಳಲಾರದೇ ಆಶ್ರಮದ ಶಾಲೆಗೆ ಸೇರಿಸಿರುವುದಾಗಿ ಅನೇಕ ಪೋಷಕರು ಹೇಳುತ್ತಾರೆ. ಆದರೆ, ಆಶ್ರಮದ ಶಾಲೆಗಳಲ್ಲಿ ಸ್ವಾಮೀಜಿಗಳು ಅವರಲ್ಲಿ ಭೇದ–ಭಾವ ಎಣಿಸದೇ ಸಮಾನವಾಗಿ ಕಂಡು ಆತನನ್ನು ಸರಿದಾರಿಗೆ ತರುವುದು ಸವಾಲಿನ ಕೆಲಸ ಎಂದರು.

ಶತ್ರುಗಳನ್ನು ಪ್ರೀತಿಯಿಂದ ಗೆಲ್ಲಬಹುದೇ ಹೊರತು, ದ್ವೇಷದಿಂದ ಸಾಧ್ಯವಿಲ್ಲ. ಎಲ್ಲಿ ಆಧ್ಯಾತ್ಮ ಇರುತ್ತದೋ ಅಲ್ಲಿ ಸಂಸ್ಕಾರ ಇರುತ್ತದೆ. ನಾನು ಮೈಸೂರು, ಮಂಗಳೂರು ರಾಮಕೃಷ್ಣಾಶ್ರಮದೊಂದಿಗೆ ಸುಮಾರು 55 ವರ್ಷಗಳಿಂದ ಬಾಂಧವ್ಯ ಹೊಂದಿದ್ದೇನೆ. ಮೈಸೂರು ರಾಮಕೃಷ್ಣ ವಿದ್ಯಾಶಾಲೆಗೆ ಪ್ರವೇಶಾತಿ ಪಡೆಯಲು ವಿದ್ಯಾರ್ಥಿಗಳಿಂದ ಬೇಡಿಕೆಯಿದೆ ಎಂದರು.

> ❝ ಭಾರತದಲ್ಲಿ ಆಧ್ಯಾತ್ಮ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆಯಿದೆ. ನಾವು ಯಾವುದೇ ಕೆಲಸ ಆರಂಭಿಸಬೇಕಾದರೂ ದೇವರ ಮೊರೆ ಹೋಗುತ್ತೇವೆ. ರಕ್ತ ಆಹಾರ ಸೇವಿಸಿ ಇಂದಿಗೂ ಯಾರು ದೇವರ ಸೇವೆ ಮಾಡುವುದಿಲ್ಲ. ಸಾತ್ವಿಕ ಆಹಾರ ಸೇವನೆ ಮಾಡಿ, ದೇವರ ಸೇವೆ ಮಾಡುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಾಡಿಕೆ. ಸಾತ್ವಿಕ ಆಹಾರ ಸೇವನೆಯ ರೂಢಿಯಿಂದ ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಮನೋಭಾವ ಬೆಳೆಸಲು ಸಾಧ್ಯವಿದೆ.
>
> –ಡಾ.ವೀರೇಂದ್ರ ಹೆಗಡೆ

ರಾಮಕೃಷ್ಣ ವಿದ್ಯಾಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಲು ಪೋಷಕರು ಬಯಸುತ್ತಾರೆ. ಏಕೆಂದರೆ, ಒಮ್ಮೆ ಆಶ್ರಮ ಶಾಲೆಯಲ್ಲಿ ನನ್ನ ಮಗ ಪ್ರವೇಶಾತಿ ಪಡೆದರೆ, ಮುಂದಿನ ಬದುಕು ಕಟ್ಟಿಕೊಳ್ಳಲು ಇಲ್ಲಿನ ಶಿಕ್ಷಣ ಸಹಕಾರಿಯಾಗುತ್ತದೆ ಎಂಬ ವಿಶ್ವಾಸ ಪೋಷಕರಲ್ಲಿದೆ. ಇಲ್ಲಿ ದೊರೆಯುವ ಮೌಲ್ಯಯುತ, ಸಂಸ್ಕಾರಯುತ ಶಿಕ್ಷಣಕ್ಕೆ ಪೋಷಕರು ಹೆಚ್ಚಿನ ಒಲವು ಹೊಂದಿರುವುದು ಸಂತೋಷದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್ ಅಧ್ಯಕ್ಷೀಯ ಭಾಷಣ ಮಾಡಿದರು. ಈ ವೇಳೆ ಸ್ವಾಮಿ ಯುಕ್ತೇಶಾನಂದ ಜೀ ಮಹಾರಾಜ್, ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್ ಇದ್ದರು. ನಂತರ ರಾಮಕೃಷ್ಣ ವಿದ್ಯಾ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿ, ಪ್ರೇಕ್ಷಕರಿಂದ ಮೆಚ್ಚುಗೆಗಳಿಸಿದರು. ಪ್ರತಿಭಾವಂತ ವಿದ್ಯಾರ್ಥಿಗಳಾದ ಅರ್ಜಿತ್, ಈಶಾನ್ ಭರತ್ ಅವರನ್ನು ಸನ್ಮಾನಿಸಲಾಯಿತು.

ಚದುರಂಗ ಸ್ಪರ್ಧೆಯಲ್ಲಿ ನೂರಾರು ಸ್ಪರ್ಧಿಗಳು

ವಿಜೇತರಿಗೆ ನಗದು ಬಹುಮಾನ ನೀಡಿ ಪುರಸ್ಕಾರ



ಮೈಸೂರು ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಭಾನುವಾರ ಮಕ್ಕಳಿಗೆ ಚದುರಂಗ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಮೈಸೂರು, ಡಿ.22(ಜಿಎ)–ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ಮಕ್ಕಳಿಗೆ ಚದುರಂಗ ಸ್ಪರ್ಧೆಯನ್ನು ಭಾನುವಾರ ಮೈಸೂರು ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ್ದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಚದುರಂಗದಲ್ಲಿ ತಮ್ಮ ಚಾಕಚಕ್ಯತೆ ಪ್ರದರ್ಶಿಸಿದರು. ಈ ವೇಳೆ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ 6 ಸಾವಿರ, 4 ಸಾವಿರ ಹಾಗೂ 2 ಸಾವಿರ ರೂ. ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು. ಈ ವೇಳೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಉಪಸಮಿತಿ ಅಧ್ಯಕ್ಷೆ ಶಾರದ ಸಂಪತ್, ಪಾಲಿಕೆ ಮಾಜಿ ಸದಸ್ಯೆ ನಿರ್ಮಲ ಹರೀಶ್, ಎನ್.ಲತಾ, ಹೆಚ್.ಎಸ್.ಗಿರಿಜಾಂಬ, ನಾಗೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚಾಗಿರುವ ದರೋಡೆ: ವಿಧಾನಪರಿಷತ್‌ನಲ್ಲಿ ಗೃಹ ಇಲಾಖೆ ಮಾಹಿತಿ

26 ಪ್ರಕರಣ ದಾಖಲು, 20 ಪ್ರಕರಣ ಬೇಧಿಸಿರುವ ಪೊಲೀಸರು


ಪೊಲೀಸ್ ಗಸ್ತು ಚುರುಕು, ಸಿಸಿಟಿವಿ ಕ್ಯಾಮರಾ ಅಳವಡಿಕೆ



ಮಧು ಮಾದೇಗೌಡ

ಮೈಸೂರು, ಡಿ.22(ಬಿಎಲ್‌ಯು)– ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸವಾರರನ್ನು ತಡೆದು ಸುಲಿಗೆ, ದರೋಡೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಆತಂಕಕಾರಿ ವಿಚಾರವನ್ನು ಸರ್ಕಾರವೇ ಬಹಿರಂಗ ಮಾಡಿದೆ. ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಗೃಹ ಇಲಾಖೆ ಈ ಉತ್ತರ ನೀಡಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಲಿಗೆ, ದರೋಡೆ ಮಾಡಿರುವ 26 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 20 ಪ್ರಕರಣವನ್ನು ಪೊಲೀಸರು ಬೇಧಿಸಿದ್ದಾರೆ ಎಂದು ಗೃಹ ಇಲಾಖೆ ಮಾಹಿತಿ ನೀಡಿದೆ. ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ದಾಖಲಾದ ದರೋಡೆ, ಸುಲಿಗೆಯ 14 ಪ್ರಕರಣದಲ್ಲಿ 9 ಪ್ರಕರಣ ಬೇಧಿಸಲಾಗಿದೆ. ಹಾಗೆಯೇ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ದಾಖಲಾದ 12 ಪ್ರಕರಣದಲ್ಲಿ 11 ಪ್ರಕರಣ ಬೇಧಿಸಲಾಗಿದೆ ಎಂದು ವಿವರಣೆ ನೀಡಲಾಗಿದೆ. ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಲಿಗೆ, ದರೋಡೆ ಕೃತ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹಲವು ಕಟ್ಟುನಿಟ್ಟಿನ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ. ಸಿಸಿ ಕ್ಯಾಮರಾ ಅಳವಡಿಸಿದ್ದು, ಪೊಲೀಸ್ ಗಸ್ತು ಕೂಡ ಮಾಡಲಾಗುತ್ತಿದೆ ಎಂದು ಗೃಹ ಇಲಾಖೆ ತಿಳಿಸಿದೆ.



ಟೋಲ್ ಹಣ ಉಳಿಸಲು ಸರ್ವೀಸ್ ರಸ್ತೆಯಲ್ಲಿ ಸಾಗುವರೇ ಇವರ ಟಾರ್ಗೆಟ್

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಹಣ ಉಳಿಸಲು ಸರ್ವೀಸ್ ರಸ್ತೆಯಲ್ಲಿ ಹೋಗುವವರನ್ನೇ ದರೋಡೆಕೋರರು ಟಾರ್ಗೆಟ್ ಮಾಡುತ್ತಿದ್ದಾರೆ. ಎಕ್ಸ್‌ಪ್ರೆಸ್‌ವೇನಲ್ಲಿ ಸಾಗಿದರೆ ಟೋಲ್ ಪ್ಲಾಜಾದಲ್ಲಿ ಟೋಲ್ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಆದ ಕಾರಣ ಟೋಲ್ ಹಣ ಉಳಿಸಲು ಬಹಳಷ್ಟು ಪ್ರಯಾಣಿಕರು ಸರ್ವೀಸ್ ರಸ್ತೆಯಲ್ಲಿ ಸಾಗುತ್ತಾರೆ. ರಾತ್ರಿ ವೇಳೆ ಸರ್ವೀಸ್ ರಸ್ತೆಯಲ್ಲಿ ಅಷ್ಟಾಗಿ ವಾಹನಗಳು ಸಂಚರಿಸುವುದಿಲ್ಲ. ಜೊತೆಗೆ ಕಗ್ಗತ್ತಲಾಗಿರುವ ನಿರ್ಜನ ಪ್ರದೇಶವಾಗಿರುತ್ತದೆ. ಅಷ್ಟೇ ಅಲ್ಲದೆ ಸರ್ವೀಸ್ ರಸ್ತೆಯಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಕೂಡ ಅಳವಡಿಸಿಲ್ಲ. ತಮ್ಮ ಸುಲಿಗೆಗೆ ಇದೇ ಸ್ಥಳ ಸೂಕ್ತವೆಂದು ಲೆಕ್ಕಾಚಾರ ಹಾಕಿ ದರೋಡೆಕೋರರು ಕಾಯುತ್ತಿರುತ್ತಾರೆ. ನಿರ್ಜನ ಪ್ರದೇಶದಲ್ಲಿ ಯಾವುದಾದರೂ ಕಾರು ಸಾಗಿದರೆ ಅಡ್ಡ ಹಾಕಿ ಸುಲಿಗೆ ಮಾಡುತ್ತಾರೆ. ರಾತ್ರಿ ವೇಳೆ ಸರ್ವೀಸ್ ರಸ್ತೆಯಲ್ಲಿ ಸಾಗುವುದು ಸುರಕ್ಷತೆ ಅಲ್ಲವೆಂದು ಪೊಲೀಸರು ಎಚ್ಚರಿಸಿದರೂ ನಿರ್ಲಕ್ಷ್ಯ ತೋರುವ ಪ್ರಯಾಣಿಕರು ಟೋಲ್ ಹಣ ಉಳಿಸಲು ಸರ್ವೀಸ್ ರಸ್ತೆಯಲ್ಲಿ ಸಾಗಿ ದರೋಡೆಕೋರರ ಕೃತ್ಯಕ್ಕೆ ಒಳಗಾಗುತ್ತಾರೆ. ಈ ಹಿನ್ನೆಲೆ ಎಕ್ಸ್ ಪ್ರೆಸ್ ವೇ ಜೊತೆಗೆ ಸರ್ವೀಸ್ ರಸ್ತೆಯಲ್ಲಿ ಪೊಲೀಸರು ಹೆಚ್ಚಿನ ಗಸ್ತು ವ್ಯವಸ್ಥೆ ಮಾಡುವ ಅಗತ್ಯವಿದೆ.

ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಆಗ್ರಹ

ಮೈಸೂರು,ಡಿ.22(ಜಿಎ)–ದೇಶದ ಬೆಳಕು ಮತ್ತು ಉಸಿರಾದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ಅಮಾನತುಗೊಳಿಸಿ, ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ, ದೇಶದಿಂದ ಗಡಿಪಾರು ಮಾಡುವಂತೆ ರಾಷ್ಟ್ರಪತಿಗಳಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಪತ್ರ ಬರೆದು ಒತ್ತಾಯಿಸಿದ್ದಾರೆ.

ಸ್ವತಂತ್ರ ಪೂರ್ವದಲ್ಲಿ ಭಾರತ ಸಾಮಾಜಿಕ ಸ್ತರ ವ್ಯವಸ್ಥೆಯಿಂದ ಕೂಡಿದ್ದು, ವ್ಯಕ್ತಿಯನ್ನು ಪಶುಪಕ್ಷಿ, ಪ್ರಾಣಿಗಿಂತಲೂ ಕಡೆಯಾಗಿ ಕಾಣುತ್ತಿದ್ದ ಸ್ಥಿತಿಯಲ್ಲಿ ಭಾರತ ಸ್ವತಂತ್ರಗಳಿಸಿತು. ಆಗ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ಭಾರತಕ್ಕೆ ನೀಡುವ ಮೂಲಕ 'ಸರ್ವರಿಗೂ ಸಮಬಾಳು–ಸರ್ವರಿಗೂ ಸಮಪಾಲು' ಎಂಬಂತೆ ಭ್ರಾತೃತ್ವ, ಸಮಾನತೆ, ಸಹಬಾಳ್ವೆಯಿಂದ ಭಾರತದ ಪ್ರತಿಯೊಬ್ಬ ಪ್ರಜೆಯೂ ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸಿಕೊಟ್ಟಿದಾರೆ.

ಸಂವಿಧಾನವನ್ನು ವಿರೋಧಿಸುವವರು ಸಂವಿಧಾನ ಶಿಲ್ಪಿಯನ್ನು ಅವಮಾನಿಸುವವರು ಅವರು ಯಾವನೇ ಆಗಿರಲಿ, ಅವನೊಬ್ಬ ದೇಶದ್ರೋಹಿ, ಭಯೋತ್ಪಾದಕ. ಭಯೋತ್ಪಾದಕರಿಗಿಂತ ಒಂಭತ್ತುಪಟ್ಟು ಶಿಕ್ಷೆ ಜಾಸ್ತಿ ಜೊತೆಗೆ ಭಾರತದ ಪೌರತ್ವ ರದ್ದು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ.


ಡಿ.17ರಂದು ಸಾಂವಿಧಾನಿಕ ಸಂಸ್ಥೆ ಸಂಸತ್ತಿನ ಮೇಲ್ಮನೆ ರಾಜ್ಯಸಭೆಯಲ್ಲಿ ಸಭಾಧ್ಯಕ್ಷರ ಸಮ್ಮುಖದಲ್ಲಿ ಮಾತನಾಡುತ್ತಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅಪಮಾನಿಸಿ ಮಾತನಾಡಿರುವ ಗೃಹಸಚಿವ ಅಮಿತ್ ಶಾ ಅವರ ಅಸಂವಿಧಾನಿಕ ಹೇಳಿಕೆ ಖಂಡನಾರ್ಹ ಹಾಗೂ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದುದರಿಂದ ತತ್‌ಕ್ಷಣದಿಂದಲೇ ಕೇಂದ್ರ ಗೃಹ ಸಚಿವರ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ಅಮಾನತುಗೊಳಿಸಿ, ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ, ದೇಶದಿಂದ ಗಡಿಪಾರು ಮಾಡುವಂತೆ ರಾಷ್ಟ್ರಪತಿಯವರನ್ನು ಒತ್ತಾಯಪೂರ್ವಕವಾಗಿ ಆಗ್ರಹಿಸುತ್ತೇನೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ ನರಸಿಂಹರಾಜ ವಿಪ್ರ ಸಂಘದ 2025 ನೇ ಸಾಲಿನ ದಿನದರ್ಶಿಯನ್ನು ದತ್ತಪೀಠಾಧಿಪತಿ ಶ್ರೀಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಲೋಕಾರ್ಪಣೆ ಮಾಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಸಂಘದ ಅಧ್ಯಕ್ಷ ಎಸ್.ದಿನೇಶ್, ಜಿ.ಆರ್.ಸತ್ಯನಾರಾಯಣ, ಎಂ.ಕೆ.ವೆಂಕಟೇಶ್, ಎಂ.ಕೆ.ಸತ್ಯನಾರಾಯಣ, ಎಸ್.ಚಂದ್ರಶೇಖರ್, ಎಂ.ಎಸ್.ವೆಂಕಟೇಶ್, ಎಸ್.ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ತಿರುಪತಿ ತಿರುಮಲದಲ್ಲಿ ನಾಳೆ ಕೌಸಲ್ಯಾ ಗಾಯನ



ಎ.ಆರ್.ಕೌಸಲ್ಯಾ

ಮೈಸೂರು, ಡಿ.22– ತಿರುಮಲ–ತಿರುಪತಿ ದೇವಸ್ಥಾನ ಟ್ರಸ್ಟ್ (ಟಿಟಿಡಿ) ತಿರುಮಲ ಬೆಟ್ಟದಲ್ಲಿ ಡಿ.24ರ ಸಂಜೆ 5ಕ್ಕೆ ಹಮ್ಮಿಕೊಂಡಿರುವ ಸಹಸ್ರ ದೀಪಾಲಂಕಾರ ಸೇವಾ ಕಾರ್ಯಕ್ರಮದಲ್ಲಿ ಮೈಸೂರಿನ ಎ.ಆರ್.ಕೌಸಲ್ಯಾ ರಘುರಾಮ್ ಗಾಯನ ಸೇವೆ ಮಾಡಲಿದ್ದಾರೆ. ಶ್ರೀ ವೆಂಕಟೇಶ್ವರ ಸ್ವಾಮಿಗೆ ದೀಪಾಲಂಕಾರ ಸೇವೆ ನಡೆಯುವ ಸಂದರ್ಭದಲ್ಲಿ ಹರಿದಾಸರ ದಾಸರ ಕೀರ್ತನೆಗಳನ್ನು ಅವರು ಪ್ರಸ್ತುತಪಡಿಸಲಿದ್ದು, ಈ ಕಾರ್ಯಕ್ರಮ ಟಿಟಿಡಿಯ ಎಲ್ಲಾ ಚಾನೆಲ್‌ಗಳಲ್ಲೂ ನೇರ (ಲೈವ್) ಪ್ರಸಾರವಾಗಲಿದೆ ಎಂದು ಟಿಟಿಡಿ ಪ್ರಕಟಣೆ ತಿಳಿಸಿದೆ. ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ 4ನೇ ಸೆಮಿಸ್ಟರ್ (ಎಐ) ವ್ಯಾಸಂಗ ಮಾಡುತ್ತಿರುವ ಕೌಸಲ್ಯಾ ಅವರು ಮೈಸೂರಿನ ಲೇಖಕ, ಪತ್ರಕರ್ತ ರಘುರಾಮ–ವಾರುಣಿ ದಂಪತಿ ಪುತ್ರಿ.

ಶಾಸಕ ತನ್ವೀರ್ ಸೇಠ್ ವಕ್ಫ್ ಆಸ್ತಿ ಕಬಳಿಕೆ ಆರೋಪ ನಿರಾಧಾರ

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಆರೋಪಕ್ಕೆ ಸ್ಪಷ್ಟನೆ

ಮೈಸೂರು, ಡಿ.22(ಜಿಎ)–ಶಾಸಕ ತನ್ವೀರ್‌ಸೇಠ್ ಅವರು ವಕ್ಫ್ ಆಸ್ತಿ ಕಬಳಿಕೆ ಮಾಡಿದ್ದಾರೆ ಎಂಬ ವಿಧಾನಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್ ಅವರ ಆರೋಪ ಸತ್ಯಕ್ಕೆ ದೂರವಾದುದು. ವಾಸ್ತವವಾಗಿ ಗೋ. ಮಧುಸೂದನ್ ಅವರೇ ಈ ಹಿಂದೆ ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡಿದ್ದ ಆರೋಪ ಎದುರಿಸುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧುಸೂದನ್ ಅವರು ಅರಣ್ಯ ಭೂಮಿ ಒತ್ತುವರಿ ಆರೋಪ ಮರೆತಂತಿದೆ. ಇಷ್ಟು ದಿನ ಮೌನವಾಗಿದ್ದ ಅವರು ಈಚೆಗೆ ನಿದ್ರೆಯಿಂದೆದ್ದು ಈಗ ತನ್ವೀರ್ ಸೇಠ್ ಅವರ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದರು.

ಸಯ್ಯಾಜಿರಾವ್ ರಸ್ತೆಯ ಗೌಸಿಯಾ ಮಂಜಿಲ್ ಬಾಲಕರ ಅನಾಥಾಲಯ ಕೇಂದ್ರ, ರೀಫ ವಾಣಿಜ್ಯ ಸಂಕೀರ್ಣ ಮುಸ್ಲಿಂ ಬಾಲಕರ ಅನಾಥಾಲಯ, ಅಕ್ಬರ್ ರಸ್ತೆಯಲ್ಲಿನ ಮಜೀದ್ ಏ ಭಗ್ಗನ್ ಎದುರುಗಡೆಯ ಕಟ್ಟಡದಲ್ಲಿನ ಬಾಲಕಿಯರ ವಸತಿ ನಿಲಯ ಕಟ್ಟಡ, ಅಪ್ನಾಘರ್ ಸುಸಜ್ಜಿತ ಬಾಲಕರ ಅನಾಥಾಲಯ ಕೇಂದ್ರಗಳು ವ್ಯವಸ್ಥಿತವಾಗಿ ನಡೆಯುತ್ತಿವೆ. ಇವುಗಳಲ್ಲಿ ಯಾವುದರ ಆಸ್ತಿಯನ್ನೂ ತನ್ವೀರ್‌ಸೇಠ್ ಕಬಳಿಸಿಲ್ಲ. ಇವುಗಳನ್ನು ಸಮಿತಿ ನೋಡಿಕೊಳ್ಳುತ್ತಿದೆ. ಹೀಗಾಗಿ ಮಧುಸೂದನ್ ಅವರು ಈ ರೀತಿಯ ವೃಥಾ ಆರೋಪ ಮಾಡುವುದನ್ನು ಬಿಡಬೇಕು. ಇಲ್ಲದಿದ್ದಲ್ಲಿ ಅವರ ವಿರುದ್ಧದ ಆರೋಪ ಕುರಿತು ಮರು ತನಿಖೆ ಮಾಡಬೇಕೆಂದು ಆಗ್ರಹಿಸಿ, ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಎಸ್.ಎ.ರಹೀಂ, ಮೋಹನ್‌ಕುಮಾರ್, ಸಲ್ಮಾನ್ ಪಾರ್ಸಿ, ಶ್ರೀನಿವಾಸ, ಮುಮ್ಮದ್ ರಫಿ ಇದ್ದರು.

ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ...



ಶ್ರೀ ಅನ್ನಪೂರ್ಣೇಶ್ವರಿ ಯುವಕರ ಬಳಗದ ವತಿಯಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಎಸ್‌ಬಿಎಂ ಮಂಜು ಅವರು ಬ್ಯಾಟ್ ಮಾಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಹಾಲಿ ನಿರ್ದೇಶಕರಾದ ರವಿಕುಮಾರ್ ರಾಜಕೀಯ, ನಿರ್ದೇಶಕರ ಸ್ಥಾನದ ಅಭ್ಯರ್ಥಿಗಳಾದ ಕುಮಾರಗೌಡ ಕೆ.ಜಿ.ಕೊಪ್ಪಲ್, ವಿಕಾಸ್ ವೈ, ರೋಹಿತ್ ಎಸ್, ಆಯೋಜಕರಾದ ಶುಶ್ರುಥ್, ದರ್ಶನ್, ಶರತ್ ಉಪಸ್ಥಿತರಿದ್ದರು.

ಸರಸ್ವತಿಪುರಂ ಕ್ಲಸ್ಟರ್ ಮಟ್ಟದ ಶೈಕ್ಷಣಿಕ, ವಿಜ್ಞಾನ ವಸ್ತುಪ್ರದರ್ಶನ



ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸರಸ್ವತಿಪುರಂ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ಮತ್ತು ವಿಜ್ಞಾನ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು,ಡಿ.22–ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸರಸ್ವತಿಪುರಂ ಕ್ಲಸ್ಟರ್ ಮಟ್ಟದ ಶೈಕ್ಷಣಿಕ ಮತ್ತು ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ.ರಾಜಶೇಖರ್ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿದರು. ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಶಿವಮಾದಪ್ಪ, ಸಹಾಯಕ ವಿದ್ಯಾಧಿಕಾರಿ ಎನ್.ರೇಣುಕಾಸ್ವಾಮಿ, ವಿಷಯ ಪರಿವೀಕ್ಷಕ ಚನ್ನಬಸಪ್ಪ ಮತ್ತು ಹೆಚ್.ಎಸ್.ನಾಗರಾಜು ಹಾಜರಿದ್ದರು. ಸರಸ್ವತಿಪುರಂ ಕ್ಲಸ್ಟರ್‌ನ ಮುಖ್ಯಸ್ಥೆ ಕವಿತಾ, ಕ್ಲಸ್ಟರ್‌ನ ವ್ಯಾಪ್ತಿಯ ಶಾಲೆಗಳ ಮುಖ್ಯಶಿಕ್ಷಕರು, ಮೇಟಗಳ್ಳಿ ಶಾಲೆಯ ಮುಖ್ಯೋಪಾಧ್ಯಾಯ ಸತೀಶ್, ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಾಮಾಜಿಕ ನ್ಯಾಯದ ನಾಯಕತ್ವದ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಭೋವಿ ಜನಾಂಗದ ಯುವಕ, ಯುವತಿಯರಿಗೆ ಸಾಮಾಜಿಕ ನ್ಯಾಯದ ನಾಯಕತ್ವದ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅಸ್ಪೃಶ್ಯತೆ ಆಚರಣೆಯ ನಿವಾರಣೆ, ಸಂವಿಧಾನ ಹಾಗೂ ಸಾಮಾಜಿಕ ನ್ಯಾಯದ ಕಾನೂನುಗಳ ಕುರಿತು ಜಾಗೃತಿ ಮೂಡಿಸುವ ನಾಯಕತ್ವದ ತರಬೇತಿ ನೀಡಿ ಸಮುದಾಯಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ರೂಪಿಸಲು ಕರ್ನಾಟಕದಲ್ಲಿ 4 ವಿಭಾಗಗಳಲ್ಲಿ ಕಾರ್ಯಾಗಾರ ಆಯೋಜಿಸಿದ್ದು, ಆಸಕ್ತರಿಗೆ ವಸತಿಸಹಿತವಾಗಿ ತರಬೇತಿ ನೀಡಲಾಗುವುದು. ಅಗತ್ಯ ದಾಖಲಾತಿಗಳನ್ನು ಪಡೆದು, ದೃಢೀಕರಿಸಿ https://forms.gle/Amo dtguivw 1TKD2s9ನಲ್ಲಿ ಡಿ.31ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ನಿಗಮದ ಕಚೇರಿಯಲ್ಲಿ ಅರ್ಜಿ ಪಡೆದು, ಅರ್ಜಿಗಳನ್ನು ಡಿ.31ರೊಳಗೆ ಸಲ್ಲಿಸಬೇಕು. ಮಾಹಿತಿಗೆ ದೂ.ಸಂ.0821–23324802.

ನಮ್ಮಲ್ಲಿ ಬಲಿಷ್ಠ ಕಾಯ್ದೆಗಳಿದ್ದರೂ ಮಕ್ಕಳು ದೌರ್ಜನ್ಯಕ್ಕೊಳಗಾಗುತ್ತಿದ್ದಾರೆ

ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್ ತೀವ್ರ ವಿಷಾದ

ಮೈಸೂರು,ಡಿ.22(ಎಸ್‌ಬಿಡಿ)– ಬಲಿಷ್ಠ ಕಾಯ್ದೆಗಳಿದ್ದರೂ ಮಕ್ಕಳು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ.ದಿನೇಶ್ ವಿಷಾಧಿಸಿದರು.

ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದಲ್ಲಿ ಆಯೋಜಿಸಿದ್ದ ಮಕ್ಕಳ ರಕ್ಷಣೆ ಹಾಗೂ ಪೋಷಣೆ ಕುರಿತು ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಲಿಷ್ಠ ಕಾಯ್ದೆಗಳು ಇದ್ದಾಗಿಯೂ ಮಕ್ಕಳನ್ನು ಭಿಕ್ಷೆಗೆ ದೂಡುವುದು, ಕೂಲಿ ಕೆಲಸ ಮಾಡಿಸುವುದು, ಮಾನವ ಕಳ್ಳಸಾಗಾಣೆ, ಲೈಂಗಿಕ ಶೋಷಣೆ, ಹೀಗೆ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ದೌರ್ಜನಕ್ಕೆ ಒಳಗಾಗುವುದನ್ನು ಕಾಣುತ್ತಿದ್ದೇವೆ ಎಂದರು.



ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದಲ್ಲಿ ಆಯೋಜಿಸಿದ್ದ ಮಕ್ಕಳ ರಕ್ಷಣೆ ಹಾಗೂ ಪೋಷಣೆ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಉದ್ಘಾಟಿಸಿದರು.

ಶಾಲೆ ಬಿಡುತ್ತಿರುವ ಮಕ್ಕಳನ್ನು ಮತ್ತೆ ಕರೆತರುವಲ್ಲಿ ಸಾಮೂಹಿಕ ಪಾಲುದಾರಿಕೆ ಕುರಿತು ಮಾರ್ಗಸೂಚಿಗಳನ್ನು ತರುವ ಪ್ರಯತ್ನ ನಡೆದಿದೆ. ಪ್ರತೀ ಶಾಲೆಯಲ್ಲೂ ಕಡ್ಡಾಯವಾಗಿ ಆಪ್ತ ಸಮಾಲೋಚಕರನ್ನು ನೇಮಿಸಲೇಬೇಕು. ಮಗು ಶಾಲೆಗೆ ಗೈರಾದರೆ ಅಥವಾ ಕಲಿಕೆಯಲ್ಲಿ ಹಿಂದುಳಿದರೆ ಅವರು ಮಗುವಿನೊಂದಿಗೆ ಸಮಾಲೋಚಿಸಬೇಕು. ಮಗುವಿನ ಹಿನ್ನೆಲೆ ಏನು?

> ❝ ಪೋಕ್ಸೋ ಕಾಯ್ದೆ–2012(ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ) ಹೆಣ್ಣು ಹಾಗೂ ಗಂಡು ಮಕ್ಕಳಿಗೂ ಅನ್ವಯಿಸುತ್ತದೆ. ಮಕ್ಕಳು ಎಂದರೆ ಯಾರು? ಲೈಂಗಿಕ ದೌರ್ಜನ್ಯ ಎಂದರೆ ಏನು? ಯಾವ ರೀತಿಯ ಶಿಕ್ಷೆಗೆ ಒಳಪಡುತ್ತದೆ? ಅದನ್ನು ಸಾಬೀತುಪಡಿಸುವುದು ಹೇಗೆ? ಇವೆಲ್ಲವನ್ನೂ ಒಳಗೊಂಡಿದೆ. ಇತ್ತೀಚೆಗೆ ಸುಪ್ರೀಂ ಕೋರ್ಟ್ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ರಕ್ಷಣೆ ದೃಷ್ಟಿಯಿಂದ ಸಾಕಷ್ಟು ಆದೇಶ ನೀಡಿದೆ.
>
> –ಬಿ.ಜಿ.ದಿನೇಶ್

ಮನೆಯಲ್ಲಿ ಏನಾದರೂ ಸಮಸ್ಯೆಗಳಿವೆಯೇ? ಏನಾದರೂ ಶೋಷಣೆಯಾಗುತ್ತಿದೆಯೇ? ಎಂದು ತಿಳಿದುಕೊಳ್ಳುವ ಬಗ್ಗೆ ಶಿಕ್ಷಕರಿಗೂ ತರಬೇತಿ ನೀಡುವಂತೆ ನಿರ್ದೇಶಿಸಲಾಗಿದೆ. ಹೆಣ್ಣು ಮಕ್ಕಳು ಆರ್ಥಿಕವಾಗಿ ಸಬಲರಾಗಬೇಕು. ಅದಕ್ಕೆ ಶಿಕ್ಷಣ ತುಂಬಾ ಮುಖ್ಯ. ವೃತ್ತಿ ಆಧಾರಿತ ಕೌಶಲಗಳನ್ನೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಹಾಗೂ ಪರಶು, ನೊಂದವರ ಪರವಾಗಿ ಹೋರಾಟಕ್ಕಿಳಿದು, ಅವರಿಗೆ ಒಳ್ಳೆಯ ಭವಿಷ್ಯ ರೂಪಿಸುವುದಷ್ಟೇ ನಮ್ಮ ಧ್ಯೇಯ ಎಂದರು. ಮಕ್ಕಳ ಪಾಲನಾ ಸಂಸ್ಥೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಮಕ್ಕಳ ಸಹಾಯವಾಣಿ ಸಿಬ್ಬಂದಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ.ಯೋಗಣ್ಣಗೆ ಡಾ.ಪಿ.ಎಸ್.ಶಂಕರ್ ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿ



ಮೈಸೂರು,ಡಿ.22–ಖ್ಯಾತ ವೈದ್ಯ ಸಾಹಿತಿ ಡಾ.ಪಿ.ಎಸ್.ಶಂಕರ್ ಹೆಸರಿನಲ್ಲಿ ಸ್ಥಾಪಿಸಿರುವ ಡಾ.ಪಿ.ಎಸ್.ಶಂಕರ್ ಪ್ರತಿಷ್ಠಾನ ವತಿಯಿಂದ ನೀಡುವ ಡಾ.ಪಿ.ಎಸ್.ಶಂಕರ್ ಶ್ರೇಷ್ಠ ವೈದ್ಯಸಾಹಿತಿ ಪ್ರಶಸ್ತಿಗೆ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅವರು ಆಯ್ಕೆಯಾಗಿದ್ದಾರೆ. ಜ.1ರಂದು ಕಲಬುರಗಿಯಲ್ಲಿ ನಡೆಯುವ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ ವಿಜಯಪುರದ ಕುಲಪತಿ ಪ್ರೊ.ಜಿ.ಕೆ.ತುಳಸಿಮಾಲಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಮೈಸೂರು ಮಿತ್ರ

ಸೋಮವಾರ 23 ಡಿಸೆಂಬರ್ 2024

ಮಂಡ್ಯದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವರ್ಣರಂಜಿತ ತೆರೆ

ಕನ್ನಡ ಸಾಹಿತ್ಯ ಸಮ್ಮೇಳನ ಸುಗಮವಾಗಿ ಮುಗಿದಿದೆ

ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಸಂತಸ





ಮಂಡ್ಯದಲ್ಲಿ ಮೂರು ದಿನಗಳ ಕಾಲ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು ಮಾತನಾಡಿದರು. ಸಮ್ಮೇಳನದಲ್ಲಿ ಭಾಗವಹಿಸಿರುವ ಅಪಾರ ಸಾಹಿತ್ಯಾಭಿಮಾನಿಗಳನ್ನು ಬಲ ಚಿತ್ರದಲ್ಲಿ ಕಾಣಬಹುದು.

ಮಂಡ್ಯ, ಡಿ.22– ಡಿ.20, 21, 22ರಂದು ಮೂರು ದಿನಗಳ ಕಾಲ ಮಂಡ್ಯದಲ್ಲಿ ಜರುಗಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಹಳ ಯಶಸ್ಸಿನೊಂದಿಗೆ ಸಮಾರೋಪಗೊಂಡಿತು. ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸಮ್ಮೇಳನಾಧ್ಯಕ್ಷ ನಾಡೋಜ ಗೊ.ರು.ಚನ್ನಬಸಪ್ಪ, ಸಾಹಿತ್ಯ, ಸಂಸ್ಕೃತಿ ಸಮಾಜಕ್ಕೆ ದೊರೆತರೆ ವಿಶೇಷ ಪರಿಣಾಮ ಬೀರುತ್ತದೆ. ಇಲ್ಲಿ ಬಹಳ ಸುಗಮವಾಗಿ ಸಮ್ಮೇಳನ ನಡೆದು ಸಂಪನ್ನಗೊಂಡಿದೆ. ಸಾಮಾನ್ಯವಾಗಿ ಊಟ, ವಸತಿ ಬಗ್ಗೆ ದೂರು ಬರುತ್ತವೆ. ಆದರೆ ಇಲ್ಲಿ ಅದ್ಯಾವುದು ಕೇಳಲಿಲ್ಲ. ಸಾಹಿತ್ಯ ಕಾರ್ಯಕ್ರಮಕ್ಕೆ ಇಷ್ಟೊಂದು ಜನ ಸೇರುವುದು ಅಪರೂಪ ಎಂದರು.

ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ. ನೆಲ, ಜಲ, ಭಾಷೆ ಉಳಿವಿಗೆ ಸರ್ಕಾರ ಸದಾ ಬದ್ಧ ಎಂದರು.


ಕಳೆದ ಮೂರು ದಿನಗಳಲ್ಲಿ 6 ಲಕ್ಷಕ್ಕೂ ಅಧಿಕ ಜನರು ಸಮ್ಮೇಳನಕ್ಕೆ ಆಗಮಿಸಿದ್ದಾರೆ. ಇದಲ್ಲದೇ 18 ದೇಶಗಳಿಂದ 200ಕ್ಕೂ ಅಧಿಕ ಕನ್ನಡ ಪ್ರೇಮಿಗಳು ಆಗಮಿಸಿದ್ದು ವಿಶೇಷ. ಸಮ್ಮೇಳನಾಧ್ಯಕ್ಷರ ಆಯ್ಕೆ, ಗೋಷ್ಠಿ, ಕಾರ್ಯಕ್ರಮಗಳು ಜನರ ಮೆಚ್ಚುಗೆ ಗಳಿಸಿವೆ ಎಂದು ಹೇಳಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ವೈಜ್ಞಾನಿಕ ಪ್ರಗತಿ ನಡುವೆ ಭಾಷೆ ಉಳಿಸುವ ಸವಾಲಿದೆ. ಭಾಷೆಯ ಮೇಲಿನ ಅನ್ಯ ಭಾಷೆಗಳ ಏರಿಕೆ, ಪರಿಣಾಮಗಳ ಬಗ್ಗೆ ಆತಂಕವಿದೆ. ಆದರೆ ನಮ್ಮ ಸಂಸ್ಕೃತಿ, ಭಾಷೆ ಉಳಿಸುವ ನಿಟ್ಟಿನಲ್ಲಿ ಸಮ್ಮೇಳನ ಸಹಕಾರಿಯಾಗಲಿದೆ. ಗ್ರಾಮೀಣ ಮಕ್ಕಳು ನಗರ ಪ್ರದೇಶದ ಮಕ್ಕಳೊಂದಿಗಿನ ಪೈಪೋಟಿ ತಪ್ಪಿಸಲು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಯಿತು. ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ ಆರಂಭಿಸಲಾಯಿತು ಎಂದರು.

ಸಭಾಪತಿ ಬಸವರಾಜ್ ಹೊರಟ್ಟಿ ಮಾತನಾಡಿ, ಕೇವಲ ಸಮ್ಮೇಳನ ಮಾಡಿದರೆ ಸಾಲದು. ಸಮ್ಮೇಳನದ ನಿರ್ಣಯಗಳನ್ನು ಅನುಷ್ಠಾನಕ್ಕೆ ಬರುವ ರೀತಿಯಲ್ಲಿ ನೋಡಿಕೊಳ್ಳುವ ಕೆಲಸ ಕನ್ನಡ ಸಾಹಿತ್ಯ ಪರಿಷತ್ತಿನ ಮೇಲಿದೆ ಇಲ್ಲಿನ ನಿರ್ಣಯಗಳ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕು. ಅನುಷ್ಠಾನಕ್ಕೆ ಬಂದ ನಿರ್ಣಯಗಳು ಎಷ್ಟು ಎಂಬುದನ್ನು ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಘೋಷಿಸಬೇಕು ಎಂದರು. ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್ ಅವರು ಸಮಾರೋಪದ ಭಾಷಣ ಮಾಡಿದರು. ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ, ಅವಧೂತ ಶ್ರೀ ವಿನಯ್ ಗುರೂಜಿ ಶುಭನುಡಿಗಳನ್ನಾಡಿದರಲ್ಲದೆ ಕನ್ನಡ ನಾಡು ನುಡಿ ಮತ್ತು ನೆಲ ಜಲದ ಬಗ್ಗೆ ಮಾತನಾಡಿದರು.

ದೇಶದಲ್ಲಿ ಬಹುತ್ವದ ಸಂಸ್ಕೃತಿ ಮುಂದುವರೆಯಲಿ

ಸಂವಾದದಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಮನವಿ



ಸಂವಾದದಲ್ಲಿ ಪಾಲ್ಗೊಂಡಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ.

ಮಂಡ್ಯ(ಪ್ರಧಾನ ವೇದಿಕೆ, ಮೋಹನ್‌ರಾಜ್): ಭಾರತ ಬಹುಭಾಷಾ, ಬಹು ಸಂಸ್ಕೃತಿ, ಬಹುಪದ್ಧತಿಗಳ ದೇಶ. ಇದನ್ನು ಉಳಿಸಿಕೊಂಡು ಹೋಗಬೇಕು. ಒಂದೊಂದು ಜನಾಂಗಕ್ಕೂ ಬಾಷೆಯಿದೆ. ಸೊಗಸಿದೆ, ಸೊಗಡಿದೆ, ಸತ್ವವಿದೆ. ಬಹುತ್ವದ ಸಂಸ್ಕೃತಿ ಮುಂದುವರೆಯಬೇಕು ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಮನವಿ ಮಾಡಿದ್ದಾರೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳು ಇಂಗ್ಲಿಷ್ ಕಲಿತರೆ ಮಾತ್ರ ಉದ್ಯೋಗ ಎಂಬ ಭ್ರಮೆ ಪೋಷಕರಲ್ಲಿದೆ. ಸರ್ಕಾರ ಅದನ್ನು ಹೋಗಲಾಡಿಸಬೇಕು. ದ್ವಿಭಾಷಾ ಸೂತ್ರ ಕ್ಷೇಮ, ತ್ರಿಭಾಷಾ ಹೇರುವ ಅಗತ್ಯ ಇಲ್ಲ ಎಂದು ಹೇಳಿದರು.

ಬೇರೆ ಜಿಲ್ಲೆಗಳಲ್ಲಿ ನಿರ್ದೇಶನಾಲಯ ಕಚೇರಿಗಳು ಆಗಬೇಕು. ಅಕಾಡೆಮಿ, ಪ್ರಾಧಿಕಾರಗಳು ಇತರೆ ಜಿಲ್ಲೆಗಳಲ್ಲಿ ಇದ್ದರೆ ಭಾವನಾತ್ಮಕ ಸಂಬಂಧ ಬೆಳೆಯುತ್ತದೆ. 12ನೇ ಶತಮಾನದಲ್ಲಿ ಸೃಷ್ಟಿಯಾದ ವಚನ ಸಾಹಿತ್ಯ ಅಂದಿನ ವ್ಯವಸ್ಥೆ ವಿರುದ್ಧದ ಪ್ರತಿಭಟನಾ ಸಾಹಿತ್ಯ. ವಚನ ಸಾಹಿತ್ಯವನ್ನು ವಿಶ್ವವಿದ್ಯಾಲಯಗಳು ಪ್ರಧಾನ ಅಧ್ಯಯನ ವಿಷಯವಾಗಿ ಅಳವಡಿಸಿಕೊಳ್ಳಬೇಕು. ವಚನ ಸಾಹಿತ್ಯ 20–30 ಅಂತಾರಾಷ್ಟ್ರೀಯ ಭಾಷೆಗಳಿಗೆ ಅನುವಾದ ಆಗಿದ್ದು ವಚನ ಸಾಹಿತ್ಯದ ಪ್ರಸಾರ ವ್ಯಾಪಕವಾಗಬೇಕು. ಸಮಕಾಲೀನ ಸಮಸ್ಯೆಗಳಿಗೆ ವಚನದಲ್ಲಿ ಉತ್ತರವಿದೆ ಎಂದು ತಿಳಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ಡಾ.ಬಸವರಾಜ್ ನೆಲ್ಲೀಸರ, ಮಾರುತಿ ಶಿಡ್ಲಾಪುರ, ಪ್ರೊ.ಟಿ.ವಿ.ಸುರೇಶ ಗುಪ್ತ, ಡಾ.ಅನಸೂಯಾ ಹೊಂಬಾಳೆ, ಶಂಕರ ಮಲ್ಲಪ್ಪ ಬೈಚಬಾಳ, ಶಾಂತಲಾ ಧರ್ಮರಾಜ್, ಡಾ.ಪಿ.ನಾಗರಾಜು, ಡಾ.ಕುರುವ ಬಸವರಾಜ್, ಪ್ರೊ.ಎಂ.ವೈ ಶಿವರಾಂ, ಡಾ.ಸಂತೋಷ್ ಹಾನಗಲ್ ಭಾಗವಹಿಸಿದ್ದರು.

ಜನಪದ ಸಂಸ್ಕೃತಿಯನ್ನು ಸಂರಕ್ಷಣೆ ಮಾಡಬೇಕು. ಜನಪದ ಕಲೆಗಳ ಪ್ರದರ್ಶನಕ್ಕೆ ಅವಕಾಶ ನೀಡಬೇಕು. ಜನಪದ ಕಲೆಗಳಿಗೆ ಮನ್ನಣೆ ಸಿಗಬೇಕು. ಹಾವೇರಿಯ ಜಾನಪದ ವಿಶ್ವ ವಿದ್ಯಾಲಯ ಜಗತ್ತಿನ ಏಕಮಾತ್ರ ಜಾನಪದ ವಿಶ್ವವಿದ್ಯಾಲಯ. ಇದು ಪ್ರತಿಷ್ಠೆಯ ಸಂಸ್ಥೆ ಆಗಬೇಕು. ನನ್ನ ಆರೋಗ್ಯದ ಗುಟ್ಟಿನ ಬಗ್ಗೆ ಬಹಳಷ್ಟು ಜನರು ಕೇಳುತ್ತಾರೆ. ನನಗೆ ಸಾವಿನ ಬಗ್ಗೆ ಚಿಂತೆಯಿಲ್ಲ. ನಾನು 100 ವರ್ಷ ಬದುಕುತ್ತೇನೆ ಎಂದು ಜ್ಯೋತಿಷಿಯೊಬ್ಬರು ಹೇಳಿದ್ದಾರೆ. 3 ರನ್ ಬಾರಿಸಿದರೆ ಅದು ನಿಜವಾಗುತ್ತದೆ –ಗೊರುಚ

ಕೆಆರ್‌ಎಸ್ ಇಲ್ಲವೇ ಮೈಸೂರು ಭಾಗದಲ್ಲಿ ಐಐಟಿ ತೆರೆಯುವಂತೆ ಶಾಸಕ ದಿನೇಶ್ ಗೂಳಿಗೌಡ ಮನವಿ

ಮಂಡ್ಯ: ಕೆಆರ್‌ಎಸ್ ಅಥವಾ ಮೈಸೂರು ಭಾಗದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತೆರೆಯುವಂತೆ ಶಾಸಕ ದಿನೇಶ್ ಗೂಳಿಗೌಡ ಅವರು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದರು. ಮನವಿಗೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ದಿನೇಶ್ ಗೌಡ ಅವರು ಜಿಲ್ಲೆಯಲ್ಲಿ ಐಐಟಿ ತೆರೆಯುವ ಬಗ್ಗೆ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ದಿನೇಶ್ ಗೂಳಿಗೌಡ ಅವರ ಮನವಿ ಮೇರೆಗೆ ಕೆಆರ್‌ಎಸ್ ಅಥವಾ ಮೈಸೂರು ಭಾಗದಲ್ಲಿ ಐಐಟಿ ತೆರೆಯುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

ಸಮಾರಂಭದ ಬಳಿಕ ಮಾತನಾಡಿದ ದಿನೇಶ್ ಗೂಳಿಗೌಡರು, ಕೆಆರ್‌ಎಸ್ ಅಥವಾ ಮೈಸೂರು ಭಾಗದಲ್ಲಿ ಐಐಟಿ ಸ್ಥಾಪನೆ ಆಗಬೇಕು ಎಂಬುದು ನಮ್ಮ ಇಂಗಿತ. ಹೀಗಾಗಿ ಈ ಕುರಿತು ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಮನವಿ ಮಾಡಲಾಗಿದೆ. ಜಿಲ್ಲೆಯಲ್ಲಿ ಐಐಟಿ ತೆರೆಯುವ ಕುರಿತು ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಹೆಣ್ಣಿಗೆ ಹೋರಾಟದ ಮನೋಭಾವ ಬರಬೇಕು



ಭಾನುವಾರ ಸಮ್ಮೇಳನದ ವೇದಿಕೆಯಲ್ಲಿ ನಡೆದ 'ಸ್ತ್ರೀ ಎಂದರೆ ಅಷ್ಟೇ ಸಾಕೇ?' ವಿಚಾರಗೋಷ್ಠಿಯ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಮತ್ತು ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಮತ್ತಿತರರು ಭಾಗವಹಿಸಿದ್ದರು.

ಮಂಡ್ಯ ಡಿ.22– ಹೆಣ್ಣಿಗೆ ಹೋರಾಟದ ಮನೋಭಾವ ಬರಬೇಕು. ವಜ್ರದಂತೆ ಕಠಿಣವಾಗಬೇಕು. ಕಾನೂನು ಅರಿತಕೊಂಡಾಗಷ್ಟೇ ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯ ಕಡಿಮೆ ಆಗಲು ಸಾಧ್ಯ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಆಯೋಜಿಸಿದ್ದ "ಸ್ತ್ರೀ ಎಂದರೆ ಅಷ್ಟೇ ಸಾಕೇ?" ವಿಷಯದ ಗೋಷ್ಠಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಣ್ಣಿನ ಮೇಲಾಗುವ ದೌರ್ಜನ್ಯ, ಅಪರಾಧ ತಡೆಗೆ ನಮ್ಮಲ್ಲಿ ಕಠಿಣ ಕಾನೂನಿದೆ. ಆದರೆ ದೌರ್ಜನ್ಯ ಆದಾಗ ಕಾನೂನು ಹೋರಾಟಕ್ಕೆ ಹೆಣ್ಣು ಹಿಂದೇಟು ಹಾಕುತ್ತಿದ್ದಾಳೆ. ನಾನಾ ಒತ್ತಡಗಳಿಂದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಹಿಂಜರಿಯುತ್ತಾಳೆ. ಎಲ್ಲಿಯವರೆಗೂ ಕಾನೂನು ಹೋರಾಟಕ್ಕೆ ಮುಂದಾಗುವುದಿಲ್ಲವೋ ಅಲ್ಲಿಯವರೆಗೆ ದೌರ್ಜನ್ಯ ಕಡಿಮೆ ಆಗುವುದಿಲ್ಲ ಎಂದರು.

ಹೆಣ್ಣಿಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಲ ತುಂಬಿದ್ದು ಡಾ. ಬಿ.ಆರ್.ಅಂಬೇಡ್ಕರ್. ಸ್ತ್ರೀ ಚಳವಳಿ ಆರಂಭವಾಗಿದ್ದು ಬಸವಣ್ಣನವರ ಕಾಲದಲ್ಲಿ. ಹೆಣ್ಣಿಗೆ ಶಕ್ತಿ ನೀಡಬೇಕೆಂದರೆ ಅವಳಿಗೆ ವೇದಿಕೆ ಸಿಗಬೇಕು ಎಂದು ಹೇಳಿದರು.

ಹಿರಿಯ ಸಾಹಿತಿ ಡಾ.ಹೇಮಾ ಪಟ್ಟಣಶೆಟ್ಟಿ ಅವರು ಆಶಯ ನುಡಿಯಗಳನ್ನಾಡಿ, ಲೈಂಗಿಕತೆ ಶಿಕ್ಷಣ ಇಂದು ಅವಶ್ಯವಿದೆ. ಸಮಾಜದಲ್ಲಿ ಹೆಣ್ಣನ್ನು ನೋಡುವ ಮನೋಭಾವ ಬದಲಾಗಬೇಕು. ಮಹಿಳೆಯರ ಭಾವನೆ ಅರ್ಥಮಾಡಿಕೊಂಡು ಗೌರವಿಸುವ ಭಾವನೆ ಮೂಡಬೇಕು. ಸ್ತ್ರೀಯರಿಗೆ ರಾಜಕೀಯ ಅಧಿಕಾರ ಸಿಗಬೇಕು ಎಂದರು.

ಗೋಷ್ಠಿಯಲ್ಲಿ ಭ್ರೂಣ ಹತ್ಯೆ ವಿಷಯದ ಬಗ್ಗೆ ಸುಮತಿ ಜಿ., ವರ್ತಮಾನದ ತಲ್ಲಣಗಳು ವಿಷಯದ ಬಗ್ಗೆ ಡಾ. ಶುಭಶ್ರೀ ಪ್ರಸಾದ್, ವಿವಾಹ ಮತ್ತು ಮರ್ಯಾದಾ ಹತ್ಯೆ ವಿಷಯದ ಬಗ್ಗೆ ಡಾ ತಾರಿಣಿ ಶುಭದಾಯಿನಿ ಅವರು ವಿಷಯ ಮಂಡನೆ ಮಾಡಿದರು.

ಸಮ್ಮೇಳನದಲ್ಲಿ ಬಾಡೂಟದ ಹೈಡ್ರಾಮ


ಪೊಲೀಸರ ವಿರೋಧದ ನಡುವೆ ಬಾಡೂಟ ಹಂಚಿಕೆ



ಮಂಡ್ಯ(ವಿನಯ್ ಕಾರೇಕುರ): ಸಮ್ಮೇಳನದ ಮುಖ್ಯ ವೇದಿಕೆ ಮುಂಭಾಗ 'ಬಾಡೂಟ ನಮ್ಮ ಹಕ್ಕು ಹೋರಾಟ' ಸಮಿತಿಯಿಂದ ಬಾಡೂಟ ಹಂಚುವ ವಿಚಾರಕ್ಕೆ ಸಂಬಂಧಿಸಿದಂತೆ ಹೈಡ್ರಾಮವೇ ನಡೆಯಿತು. ಸಮ್ಮೇಳನದಲ್ಲಿ ಬಾಡೂಟ ಬಡಿಸಿಯೇ ತೀರುತ್ತೇವೆಂಬ ನಿರ್ಧಾರದೊಂದಿಗೆ ರಾಗಿಮುದ್ದೆ, ಮೊಟ್ಟೆ ಹಾಗೂ ಕೋಳಿ ಸಾಂಬಾರ್‌ನೊಂದಿಗೆ ಆಗಮಿಸಿದ್ದ ಬಾಡೂಟ ನಮ್ಮ ಹಕ್ಕು ಹೋರಾಟ ಸಮಿತಿಯ ಸದಸ್ಯರು, ಪೊಲೀಸರು ಮತ್ತು ಜಿಲ್ಲಾಡಳಿತದ ವಿರೋಧದ ನಡುವೆಯೇ ಬಾಡೂಟ ಹಂಚಿದರು. ಮೊದಲಿಗೆ ವೇದಿಕೆ ಮುಂಭಾಗವೇ ಬಾಡೂಟ ಬಡಿಸಲು ಮುಂದಾದರು. ಈ ವೇಳೆ ಅವರನ್ನು ತಡೆದ ಪೊಲೀಸರು ಬಾಡೂಟ ಹಂಚಿಕೆ ವಿರೋಧ ವ್ಯಕ್ತಪಡಿಸಿದರು. ಇದರಿಂದ ಕೆಲಕಾಲ ಪೊಲೀಸರು ಹಾಗೂ ಸಮಿತಿ ಸದಸ್ಯರ ನಡುವೆ ಮಾತಿನ ಚಕಮುಕಿ ನಡೆಯಿತು.

ಅಂತಿಮವಾಗಿ ಊಟದ ವಿಭಾಗಕ್ಕೆ ಬಾಡೂಟವನ್ನು ಕೊಂಡೊಯ್ದು ಸಾರ್ವಜನಿಕರಿಗೆ ಬಡಿಸಿದ ಸಮಿತಿ ಸದಸ್ಯರು. ಇನ್ನು ಮುಂದಿನ ಎಲ್ಲಾ ಸಮ್ಮೇಳನಗಳಲ್ಲೂ ಬಾಡೂಟವನ್ನು ಕಡ್ಡಾಯವಾಗಿ ಬಡಿಸಬೇಕೆಂದು ಒತ್ತಾಯಿಸಿದರು. ಅತ್ತ ಸರದಿ ಸಾಲಿನಲ್ಲಿ ನಿಂತು ಬಾಡೂಟ ಚಪ್ಪರಿಸಿದ ಸಾರ್ವಜನಿಕರು, ಬಾಡೂಟ ಸಿಕ್ಕ ಸಂತಸದ ನಗೆ ಬೀರಿದರು. ಒಂದು ಹಂತದದಲ್ಲಿ ಬಾಡೂಟ ಪಡೆಯಲು ನೂಕು–ನುಗ್ಗಲು ಉಂಟಾಯಿತು.

ಸಮಕಾಲೀನ ಸಮಾಜಕ್ಕೆ ವಿವೇಕಾನಂದರ ಚಿಂತನೆಗಳ ಅಗತ್ಯವಿದೆ



ಮಂಡ್ಯ: ಸಮಕಾಲೀನ ಸಮಾಜಕ್ಕೆ ಸ್ವಾಮಿ ವಿವೇಕಾನಂದರ ತುಂಬಾ ಅಮೂಲ್ಯವಾದ ಆಲೋಚನಾ ಕ್ರಮ ಮತ್ತು ಚಿಂತನಾ ಕ್ರಮದ ಅಗತ್ಯವಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕಂದರಾಜ್ ಪ್ರತಿಪಾದಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪುಸ್ತಕ ಪ್ರದರ್ಶನ ಆವರಣದಲ್ಲಿನ 'ಪರಿಚಯ ಪುಸ್ತಕ ಪ್ರಕಾಶನ' ಮಳಿಗೆಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಕೆ.ಎಸ್. ಹರೀಶ್ ಕುಮಾರ್ ಅವರ 'ವಿವೇಕಾವಾಣಿ' ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ನಮ್ಮ ಜನರಿಗೆ ಅಗತ್ಯವಿರುವ ಆಧ್ಯಾತ್ಮಿಕ ಮೌಲ್ಯಗಳು ವಿವೇಕಾನಂದರ ಚಿಂತನೆಗಳಲ್ಲಿ ಅಡಗಿವೆ. ಆದಬಿಂದು, ಬಹುತೇಕರು ವಿವೇಕಾನಂದರನ್ನು ಮಾತ್ರವಲ್ಲ ಬುದ್ಧ, ಬಸವ, ಗಾಂಧಿ, ಬಾಬಾ ಸಾಹೇಬ್, ಕುವೆಂಪು ಅವರ ವಿಚಾರಧಾರೆಗಳನ್ನು ಸರಿಯಾಗಿ ಓದಿಕೊಂಡಿಲ್ಲ, ಅರ್ಥೈಸಿಕೊಂಡಿಲ್ಲದಿರುವುದು ದುರಂತ ಎಂದು ವಿಷಾದಿಸಿದರು.

ಕುವೆಂಪು ಅವರ ವ್ಯಕ್ತಿತ್ವದ ಮೇಲೆ ರಾಮಕೃಷ್ಣ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಮೌಲ್ಯಗಳು, ವಿಚಾರಧಾರೆಗಳು, ಚಿಂತನೆಗಳು ಅಪಾರ ಪ್ರಭಾವ ಬೀರಿವೆ. ಅದಕ್ಕೆ ಕುವೆಂಪು ಶುದ್ಧ ವೈಚಾರಿಕವಾಗಿ ಬೆಳೆಯಲು ಸಾಧ್ಯವಾಯಿತು ಎಂದು ವಿಶ್ಲೇಷಿದರು. ನಮ್ಮ ಜನರಿಗೆ ದೇವರು ಮತ್ತು ಆಧ್ಯಾತ್ಮಿಕತೆ ಎರಡೂ ಬೇಕು. ಆದರೆ, ಈ ಎರಡರ ನಡುವೆ ಇರುವ ಪುರೋಹಿತಶಾಹಿ ವರ್ಗ ಜನರನ್ನು ದಿಕ್ಕು ತಪ್ಪಿಸುತ್ತಿದೆ. ದೇವರ ಏಜೆಂಟಾಗಿ ದಾರಿ ತಪ್ಪಿಸುತ್ತಿರುವ ಪುರೋಹಿತ ಶಾಹಿ ವರ್ಗದಿಂದ ಜನರು ದೂರವಿರಬೇಕು ಎಂದು ಕಿವಿಮಾತು ಹೇಳಿದರು.

ಪ್ರತಿ ವರ್ಷ ಅಂತಾರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿ

ಅಮೇರಿಕ ಕನ್ನಡ ಕೂಟ(ಅಕ್ಕ)ದ ಅಧ್ಯಕ್ಷ ಅಮರನಾಥಗೌಡ ಮನವಿ



ಮಂಡ್ಯ: ವಿದೇಶದಲ್ಲಿ 40 ಲಕ್ಷಕ್ಕೂ ಅಧಿಕ ಕನ್ನಡಿಗರಿದ್ದು ಅವರಲ್ಲಿ 5 ಲಕ್ಷಕ್ಕೂ ಅಧಿಕ ಕನ್ನಡಿಗರು ಅಮೆರಿಕಾದಲ್ಲೇ ಇದ್ದಾರೆ. ಅಕ್ಕ ಸಮೇಳನದ ಮೂಲಕ ವಿದೇಶದಲ್ಲಿ ಕನ್ನಡ ಕಟ್ಟುವ ಕೆಲಸ ಮಾಡಲಾಗುತ್ತಿದೆ ಎಂದು ಅಮೆರಿಕ ಕನ್ನಡ ಕೂಟ (ಅಕ್ಕ)ದ ಅಧ್ಯಕ್ಷ ಅಮರನಾಥಗೌಡ ಮನವಿ ಮಾಡಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಆಯೋಜಿಸಿದ್ದ "ಜಾಗತಿಕ ನೆಲೆಯಲ್ಲಿ ಕನ್ನಡ ಕಟ್ಟುವ ಬಗೆ" ವಿಷಯದ ಬಗ್ಗೆ ನಡೆದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದೇಶದಲ್ಲಿ ಕನ್ನಡ ಕಟ್ಟುವುದು ಸವಾಲಿನ ಕೆಲಸ. ಆದರೂ ಕನ್ನಡತನವನ್ನು ಗಟ್ಟಿಗೊಳಿಸುವ ಕನ್ನಡದ ಲಿಪಿ ಉಳಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.

ಆಶಯ ನುಡಿಗಳನ್ನಾಡಿದ ಬಹರೇನ್‌ನ ಕಿರಣ್ ಉಪಾಧ್ಯಾಯ ಅವರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಂತೆ ವರ್ಷಕ್ಕೊಮ್ಮೆ ಅಂತಾರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಮುಖಾಂತರ ವಿದೇಶದಲ್ಲಿ ಕನ್ನಡದ ಕಂಪು ಹರಡಬೇಕು ಎಂದರು.

ವಿದೇಶದಲ್ಲಿರುವ ಕನ್ನಡಿಗರನ್ನು ಅನ್ಯರಂತೆ ಭಾವಿಸಬೇಡಿ. ಜಗತ್ತಿನ 175 ದೇಶಗಳಲ್ಲಿ ಕನ್ನಡ ಸಂಘಟನೆಗಳು ಬಹಳ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ವಿಶೇಷವೆಂದರೆ ಬಹರೇನ್‌ನಲ್ಲಿ ಸ್ವಂತ ಕನ್ನಡ ಭವನದ ಕಟ್ಟಡವಿದೆ. ಅದರಲ್ಲಿ ಸಭಾಂಗಣ, ವಾಚನಾಲಯ, ಸಭಾಭವನ ಒಳಗೊಂಡಿದ್ದು ಅಲ್ಲಿ ಕನ್ನಡದ ತರಗತಿಗಳು ಕೂಡ ನಡೆಯುತ್ತವೆ ಎಂದು ಹೇಳಿದರು.

ವಿದೇಶದಲ್ಲಿರುವ ಕನ್ನಡಿಗರ ಸಮಸ್ಯೆಗಳು, ಪರಿಹಾರಗಳು ವಿಷಯದ ಬಗ್ಗೆ ಮಾತನಾಡಿದ ಕತಾರ್‌ನ ಎಚ್.ಕೆ.ಮಧು ಅವರು, ಶ್ರಮಿಕ ವರ್ಗ ಹಾಗೂ ಅವರ ಕುಟುಂಬ ವರ್ಗದ ಸ್ಥಿತಿಗತಿಗಳ ಬಗ್ಗೆ ವಿವರಿಸಿದರು. ಶ್ರಮಿಕ ವರ್ಗದವರಿಗೆ ಸಾಮಾಜಿಕ ಭದ್ರತೆ ಕಲ್ಪಿಸಬೇಕು ಎಂದರು.

ಜಗತ್ತಿನ ರಾಷ್ಟ್ರಗಳಲ್ಲಿ ಮಾತೃಭಾಷೆಯನ್ನು ನೋಡುವ ಕ್ರಮ ವಿಷಯದ ಬಗ್ಗೆ ಮಾತನಾಡಿದ ಇಂಗ್ಲೆಂಡ್ ನ ಅಶ್ವಿನ್ ಶೇಷಾದ್ರಿ, ಫ್ರೆಂಚ್, ಜರ್ಮನಿ, ಚೀನಾದವರು ಎಂದಿಗೂ ಮಾತೃಭಾಷೆಯನ್ನು ಬಿಟ್ಟುಕೊಡುವುದಿಲ್ಲ. ಅವರು ಅವರ ಭಾಷೆ ಬಿಟ್ಟು ಅನ್ಯ ಭಾಷೆ ಮಾತನಾಡುವುದಿಲ್ಲ. ಹೀಗಾಗಿ ಅನ್ಯಭಾಷಿಕರು ಅವರ ಭಾಷೆ ಕಲಿಯುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ನಾವು ಕೂಡ ನಮ್ಮ ಭಾಷೆ ಬಗ್ಗೆ ಅಭಿಮಾನ ಹೊಂದಿರಬೇಕು ಎಂದರು. ಹೊರನಾಡಿನಲ್ಲಿ ಕನ್ನಡದ ಅಸ್ತಿತ್ವ ಸವಾಲುಗಳು ವಿಷಯದ ಬಗ್ಗೆ ಮಹಾರಾಷ್ಟ್ರದ ಕಮಲಾಕರ ಕಡವೆ ಮಾತನಾಡಿ, ಬ್ಯಾಂಕಿಂಗ್, ಐಟಿ, ಹೋಟೆಲ್, ಶಿಕ್ಷಣ ಕ್ಷೇತ್ರಗಳಲ್ಲಿ ಬಹುತೇಕ ಕನ್ನಡಿಗರೇ ಕಾಣುತ್ತಾರೆ. ಹೊರರಾಜ್ಯ, ಹೊರದೇಶದ ಸಂಸ್ಕೃತಿ, ಭಾಷೆ ಜೊತೆಗೆ ವಿಲೀನಗೊಂಡು ಹೊಂದಿಕೊಳ್ಳುವ ಶಕ್ತಿ ಕನ್ನಡಿಗರಿಗಿದೆ ಎಂದು ಹೇಳಿದರು.

ವಿದೇಶದಲ್ಲಿರುವ ಕನ್ನಡ ಶಾಲೆಗಳ ಸ್ಥಿತಿಗತಿಗಳು ವಿಷಯದ ಬಗ್ಗೆ ಮಾತನಾಡಿದ ಯುಎಇನ ಶಶಿಧರ ನಾಗರಾಜಪ್ಪ ಅವರು, ಅಮೆರಿಕ, ಅರಬ್, ಆಸ್ಟ್ರೇಲಿಯಾ ಸೇರಿದಂತೆ ಜಗತ್ತಿನ ನಾನಾ ರಾಷ್ಟ್ರಗಳಲ್ಲಿ 5866 ವಿದ್ಯಾರ್ಥಿಗಳಿಗೆ 704 ಶಿಕ್ಷಕರು ಕನ್ನಡ ಕಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದರು. ಜರ್ಮನಿಯ ರಶ್ಮಿ ನಾಗರಾಜ್ ಅವರು ಮಾತನಾಡಿ, ಜರ್ಮನಿಯಲ್ಲೂ ನಲಿ–ಕಲಿ ಮಾದರಿಯಲ್ಲಿ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಅರ್ಜುನ್ ಜನ್ಯ ಸಂಗೀತ ರಸಸಂಜೆಯಲ್ಲಿ ಕುಣಿದು ಸಂಭ್ರಮಿಸಿದ ಚಲುವರಾಯಸ್ವಾಮಿ

ಮ್ಯೂಸಿಕಲ್ ನೈಟ್ ಕಾರ್ಯಕ್ರಮಕ್ಕೆ ಒಂದು ಲಕ್ಷ ಜನ ಸಾಕ್ಷಿ, ಕಿಲೋ ಮೀಟರ್‌ಗಟ್ಟಲೇ ಟ್ರಾಫಿಕ್ ಜಾಮ್

ಮಂಡ್ಯ,ಡಿ.22– ಶನಿವಾರ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ ಕಾರ್ಯಕ್ರಮ ಮುಗಿದ ಬಳಿಕ ನಡೆದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಸಂಗೀತ ರಸಸಂಜೆ ಕಾರ್ಯಕ್ರಮ ಲಕ್ಷಕ್ಕೂ ಹೆಚ್ಚು ಜನರನ್ನು ಮುದಗೊಳಿಸಿತು.

ಕಾರ್ಯಕ್ರಮ ಆರಂಭದಲ್ಲೇ ಸಭಿಕರ ಸಾಲಿನಿಂದ ಸಚಿವ ಎನ್.ಚಲುವರಾಯಸ್ವಾಮಿ ಅವರನ್ನು ಕೈ ಹಿಡಿದು ವೇದಿಕೆಗೆ ಕರೆ ತಂದ ಅರ್ಜುನ್ ಜನ್ಯ, ಅಧ್ಯಕ್ಷ ಸಿನಿಮಾದ ಟೈಟಲ್ ಸಾಂಗ್ ಹಾಡಲು ಶುರು ಮಾಡಿದರು. ಈ ಸಂದರ್ಭದಲ್ಲಿ ಸಚಿವರನ್ನು ಹಿಂಬಾಲಿಸಿ ವೇದಿಕೆಗೆ ಬಂದ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್ ಹಾಗೂ ಎಡಿಸಿ ಬಿ.ಸಿ.ಶಿವಾನಂದ ಮೂರ್ತಿ ಜನ್ಯ ಹಾಡುತ್ತಿದ್ದ ಗೀತೆಯನ್ನು ಕೇಳುತ್ತಾ ನಿಂತರು.

ಬಳಿಕ ಅರ್ಜುನ್ ಜನ್ಯ ಸಚಿವರನ್ನು ನೃತ್ಯಕ್ಕೆ ಕೈ ಜೋಡಿಸಿ ಎಂದು ಕೇಳಿದಾಗ ಅಧ್ಯಕ್ಷ ಚಿತ್ರದ ಹಾಡಿಗೆ ಸಚಿವ ಚಲುವರಾಯಸ್ವಾಮಿ ಹೆಜ್ಜೆ ಹಾಕಿ ಸಂಭ್ರಮಿಸಿದರು. ಆಗ ಶಾಸಕರಾದ ನರೇಂದ್ರಸ್ವಾಮಿ ಮತ್ತು ಗಣಿಗ ರವಿ ಸಹ ನೃತ್ಯಕ್ಕೆ ಕೈ ಜೋಡಿಸಿದರು. ಡಿಸಿ, ಸಿಇಓ, ಎಡಿಸಿ ಜನಪ್ರತಿನಿಧಿಗಳ ನೃತ್ಯವನ್ನು ನೋಡುತ್ತಾ ನಿಂತರು.

ಬಳಿಕ ಅರ್ಜುನ್ ಜನ್ಯ ಮತ್ತು ತಂಡ ಹಲವು ಚಲನಚಿತ್ರ ಹಾಗೂ ಕನ್ನಡದ ಗೀತೆಗಳನ್ನು ಹಾಡಿ ಜನರ ಮನಸೂರೆಗೊಳಿಸಿದರು. ಖ್ಯಾತ ನಿರೂಪಕಿ ಅನುಶ್ರೀ ಸಹ ಜನರನ್ನು ರಂಜಿಸಿದರೆ, ಜನ್ಯ– ಅನುಶ್ರೀ ಜುಗಲ್ ಬಂದಿ ಪ್ರೇಕ್ಷಕರ ಗಮನ ಸೆಳೆಯಿತು.

ಶನಿವಾರ ಸಂಜೆ ಸಂಗೀತ ರಸಮಂಜರಿ ಕಾರ್ಯಕ್ರಮಕ್ಕೆ ಒಂದು ಲಕ್ಷಕ್ಕೂ ಅಧಿಕ ಜನ ಸಾಕ್ಷಿಯಾದರು. ಜನಸಂಖ್ಯೆ ಹೆಚ್ಚಾದ ಪರಿಣಾಮ ವೇದಿಕೆಯಿಂದ ಎರಡು ಕಿಲೋ ಮೀಟರ್ ಹಿಂದೆಯೇ ಪಾರ್ಕಿಂಗ್ ಮಾಡಿ, ಜನ ವೇದಿಕೆಯತ್ತ ನಡೆದುಕೊಂಡು ಹೋಗುತ್ತಿದ್ದ ದೃಶ್ಯ ಕಂಡು ಬಂತು. ಪುಸ್ತಕ ಮಳಿಗೆ, ವಾಣಿಜ್ಯ ಮಳಿಗೆಗಳು ಜನರಿಂದ ತುಂಬಿ ತುಳುಕುತ್ತಿತ್ತು. ಮತ್ತೊಂದೆಡೆ ಅಷ್ಟು ಜನಕ್ಕೂ ಸಹ ಊಟದ ವ್ಯವಸ್ಥೆಯಲ್ಲಿ ಸ್ವಲ್ಪವೂ ಲೋಪವಾಗದಂತೆ ನಾಜೂಕಾಗಿ ಎಲ್ಲರಿಗೂ ಆಹಾರ ಸಿಗುವಂತೆ ಆಯೋಜಕರು ನೋಡಿಕೊಂಡರು.




ಶನಿವಾರ ರಾತ್ರಿ ಸಾಹಿತ್ಯ ಸಮ್ಮೇಳನದ ಪ್ರಮುಖ ವೇದಿಕೆಯಲ್ಲಿ ನಡೆದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ರವಿಕುಮಾರ್ ಗಣಿಗ ಮತ್ತು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಕುಣಿದು ಸಂಭ್ರಮಿಸಿದರು.

ಸಮ್ಮೇಳನದಲ್ಲಿ ಮಳೆಯ ಸಿಂಚನ...

ರಾತ್ರಿ ದಿಢೀರನೇ ಸುಮಾರು 15 ನಿಮಿಷ ಸುರಿದ ಭಾರೀ ಮಳೆಯನ್ನು ಲೆಕ್ಕಿಸದೇ ಜನ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮಧ್ಯರಾತ್ರಿ 12ಗಂಟೆಯಾದರೂ ಸಮ್ಮೇಳನದ ಆವರಣ ಜನಜಂಗುಳಿಯಿಂದ ತುಂಬಿತ್ತು. ಇತ್ತ ಮಂಡ್ಯ ನಗರದಲ್ಲೂ ಲೈಟಿಂಗ್ಸ್ ನೋಡಲು ಸಾವಿರಾರು ಜನ ಮುಗಿಬಿದ್ದರು. ಫ್ಯಾಕ್ಟರಿ ವೃತ್ತ, ಸಂಜಯ ವೃತ್ತದಲ್ಲಿ ಒಡೆಯರ್, ಸರ್‌ಎಂವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಜಂಬು ಸವಾರಿ ಮಾದರಿಯ ಆನೆಗಳೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಜನ ನಾಮುಂದು ತಾಮುಂದು ಅಂತ ಆಗಮಿಸುತ್ತದ್ದದ್ದು ವಿಶೇಷವಾಗಿತ್ತು. ಮಂಡ್ಯ ನಗರದ ಪ್ರಮುಖ ವೃತ್ತಗಳಲ್ಲಿ ಮಧ್ಯರಾತ್ರಿ 12ಗಂಟೆಯವರೆಗೂ ಜನಜಂಗುಳಿ ಇತ್ತು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಡಿ.22–ಸೋಮವಾರ (ಡಿ.23) ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ನಿರ್ವಹಣೆ ಕಾಮಗಾರಿ ನಿಮಿತ್ತ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳ್ತೂರು, ಮನುಗನಹಳ್ಳಿ, ಬಾಚೇಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳು. ಸಿದ್ದರಾಮನಹುಂಡಿ, ಯಡಕೊಳ, ಶ್ರೀನಿವಾಸಪುರ, ರಂಗನಾಥಪುರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಂಜನಗೂಡು ಉಪವಿಭಾಗ–2ರ ಹುಲ್ಲಹಳ್ಳಿ ಶಾಖೆಯ ರಾಂಪುರ, ಗೌಡರಹುಂಡಿ, ಅಹಲ್ಯ, ಕೆಂಬಾಳು, ಬಿದರಗೂಡು, ಹಳ್ಳಿಕೆರೆಹುಂಡಿ, ಗಾಂಧಿ ಗ್ರಾಮ ಮತ್ತು ಬ್ಯಾಳಾರು ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪದಾಧಿಕಾರಿಗಳು

ಮೈಸೂರು,ಡಿ.22–ನೈಋತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘ, ಮೈಸೂರು ದಕ್ಷಿಣದ 2025–2030ನೇ ಅವಧಿಗೆ ನೂತನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಕೆ.ಧ್ರುವಕುಮಾರ್, ಉಪಾಧ್ಯಕ್ಷರಾಗಿ ಎನ್.ಕುಮಾರ್, ನಿರ್ದೇಶಕರಾಗಿ ಡಾ.ಎಂ.ಬಿ.ಮಂಜೇಗೌಡ, ವೈ. ದಿವಾಕರ, ಜಿ.ಪಾರ್ಥಿಬನ್, ಕೆ.ಅನ್ನು, ಡಾ.ಕೆ. ವಿಜಯಕುಮಾರ್, ರಘು ಎಸ್., ಎಸ್.ಭೈರಪ್ಪ, ನರ್ತನ, ಅನ್ನಪೂರ್ಣ, ಗಿರೀಶ್ ಎಸ್., ವಿಲಿಯಂ ಜಾರ್ಜ್, ಎಸ್.ಬಸವರಾಜು ಮತ್ತು ಎಂ.ಆರ್. ಚಂದ್ರಶೇಖರ್ ಆಯ್ಕೆಯಾಗಿದ್ದಾರೆ.

ಸ್ವಾಮಿ ವಿವೇಕಾನಂದರ ಸ್ಮಾರಕಕ್ಕೆ ಸಿಎಸ್‌ಆರ್ ನಿಧಿಯಡಿ ನೆರವು

● ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವದಲ್ಲಿ ಸಂಸದ ತೇಜಸ್ವಿ ಸೂರ್ಯ ಭರವಸೆ ● ವಿದ್ಯಾಶಾಲಾ ಹಳೆ ವಿದ್ಯಾರ್ಥಿಗಳಿಂದ ಸ್ಮಾರಕಕ್ಕೆ 10 ಕೋಟಿ ಕೊಡುಗೆ ● ಭಾರತದ ಕ್ಷಿಪ್ರ ಆರ್ಥಿಕ ಪ್ರಗತಿಗೆ ಹೆಮ್ಮೆ; ಯುವಶಕ್ತಿ ಕೈ ಜೋಡಿಸಲು ಮನವಿ



ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಡಿಆರ್‌ಡಿಒ ಮಾಜಿ ಮುಖ್ಯಸ್ಥ ಡಾ.ವಿ.ಕೆ.ಅತ್ರೆ ಅವರನ್ನು ಸನ್ಮಾನಿಸಲಾಯಿತು. ಸಂಸದ ತೇಜಸ್ವಿ ಸೂರ್ಯ, ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಜಿ ಮಹಾರಾಜ್, ಸ್ವಾಮಿ ಯುಕ್ತೇಶಾನಂದ ಜೀ ಮಹಾರಾಜ್, ಸ್ವಾಮಿ ಸತ್ಯೇಶಾನಂದ ಜೀ ಮಹರಾಜ್ ಚಿತ್ರದಲ್ಲಿದ್ದಾರೆ.

ಭಾರತಕ್ಕೆ ಬೇಕಿರುವ ಪುಸ್ತಕ ಜ್ಞಾನದ ಜೊತೆಗೆ ಚಾರಿತ್ರ್ಯ ಸ್ಥಾಪಿಸುವ ಶಿಕ್ಷಣ

ಮೈಸೂರು: ಪ್ರಸ್ತುತ ಭಾರತಕ್ಕೆ ಬೇಕಿರುವುದು ಪುಸ್ತಕದಲ್ಲಿನ ಜ್ಞಾನದ ಜೊತೆಗೆ ಚಾರಿತ್ರ್ಯ ಸೃಷ್ಟಿಯ ಶಿಕ್ಷಣ ಎಂದು ಡಿಆರ್‌ಡಿಒ ಮಾಜಿ ಮುಖ್ಯಸ್ಥ ಡಾ.ವಿ.ಕೆ.ಅತ್ರೆ ಅಭಿಪ್ರಾಯಪಟ್ಟರು. ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಆದ್ಯತೆ ನೀಡಬೇಕು. ಇದರಿಂದ ಆ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ವಿದ್ಯಾರ್ಥಿಗಳ ಚಾರಿತ್ರ್ಯ ಸೃಷ್ಟಿಸುವ ವಿದ್ಯಾಸಂಸ್ಥೆಗಳ ಸಾಲಿನಲ್ಲಿ ರಾಮಕೃಷ್ಣ ವಿದ್ಯಾಸಂಸ್ಥೆ ಮೊದಲನೆಯದು. ಇಂತಹ ಶಾಲೆಗೆ ಸೇರಿರುವ ನೀವುಗಳೇ ಧನ್ಯ. ಪುಸ್ತಕ ಜ್ಞಾನ ಇಲ್ಲದಿದ್ದರೂ ರಾಮಕೃಷ್ಣ ವಿದ್ಯಾಸಂಸ್ಥೆಯ ವಾತಾವರಣದಿಂದ ನೀವೂ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಿರಿ ಎಂದರು.

ನೀವು ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂದಿದ್ದರೆ ನಿಮ್ಮಲ್ಲಿರುವ ದೌರ್ಬಲ್ಯ, ಪ್ರತಿಭೆಯನ್ನು ನೀವೇ ಗುರುತಿಸಬೇಕು. ಕೌಶಲ್ಯಯುತ ವಿದ್ಯಾರ್ಥಿಗಳಿಂದ ಅಸಾಮಾನ್ಯ ಕೆಲಸ ಮಾಡುವುದು ದೊಡ್ಡ ವಿಷಯವಲ್ಲ. ಸಾಮಾನ್ಯ ಜನರಿಂದ ಅದ್ಭುತ ಕೆಲಸ ಮಾಡಿಸುವುದು ನಿಜಕ್ಕೂ ಶ್ಲಾಘನೀಯ ಎಂದರು.

ಸರ್ಕಾರಿ ಉದ್ಯೋಗಗಳಿಗೆ ಆಸೆ ಪಡದೇ ತಾವೇ ಉದ್ಯಮಗಳನ್ನು ಸ್ಥಾಪಿಸುವ ಕಡೆಗೆ ಮುಖ ಮಾಡುತ್ತಿದ್ದಾರೆ. ಅದು ವೈದ್ಯಕೀಯ ಕ್ಷೇತ್ರವಾಗಿರಬಹುದು, ಇಂಜಿನಿಯರ್ ಕ್ಷೇತ್ರವಾಗಿರಬಹುದು ಸ್ಟಾರ್ಟ್ ಅಪ್ ಸ್ಥಾಪನೆಗೆ ಯುವಕರು ಹೆಚ್ಚಿನ ಒಲವು ಹೊಂದಿದ್ದಾರೆ. ಇದು ದೇಶದ ಆರ್ಥಿಕ ಬೆಳವಣಿಗೆಗೆ ಪೂರಕ ಎಂದರು.

ಮೌಲ್ಯಯುತ ಸಮಾಜಕ್ಕೆ ರಾಮಕೃಷ್ಣಾಶ್ರಮ ಒತ್ತು: ದೇಶದಲ್ಲಿ ಉದ್ಯಮ ಶೀಲ ವ್ಯಕ್ತಿಗಳು ಹೆಚ್ಚಾಗಬೇಕು. ದೇಶಕ್ಕೋಸ್ಕರ ಉನ್ನತ ಸಾಧನೆ ಮಾಡಲು ಯುವಕರು ಸದಾ ಸಿದ್ದರಾಗಬೇಕು. ಕೌಶಲ್ಯವುಳ್ಳ ಯುವಜನರನ್ನು ನಮ್ಮ ಶಿಕ್ಷಣ ವ್ಯವಸ್ಥೆ ಸೃಷ್ಟಿಸುತ್ತಿದೆಯೇ ಎಂಬುದನ್ನು ಇಂದಿನ ವಿದ್ಯಾರ್ಥಿಗಳು ಖಾತ್ರಿಪಡಿಸಿಕೊಳ್ಳಬೇಕು. ಈ ಮಾತಿಗೆ ವಿವೇಕಾನಂದರು ಪ್ರತಿಪಾದಿಸಿದ್ದ ಮನುಷ್ಯತ್ವ ಮತ್ತು ಚಾರಿತ್ರ್ಯ ನಿರ್ಮಾಣದ ಅಗತ್ಯತೆ ಉತ್ತರವಾಗುತ್ತದೆ. ಇಂದು ಅನೇಕ ಮಾರ್ಗದಲ್ಲಿ ಶಿಕ್ಷಣ ಲಭ್ಯವಿದ್ದರೂ ಮೌಲ್ಯಗಳನ್ನು ಹೊಂದುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ರಾಮಕೃಷ್ಣ ವಿದ್ಯಾಸಂಸ್ಥೆ ಕೆಲಸ ಮಾಡುತ್ತಿರುವುದು ಸಂತೋಷ ಸಂಗತಿ ಎಂದರು.

ಈ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ಸಂಚಿಕೆ, ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಜಿ ಮಹಾರಾಜ್, ಸ್ವಾಮಿ ಯುಕ್ತೇಶಾನಂದ ಜೀ ಮಹಾರಾಜ್, ಡಿಆರ್‌ಡಿಒ ಮಾಜಿ ಮುಖ್ಯಸ್ಥ, ಪದ್ಮ ವಿಭೂಷಣ ಡಾ.ವಿ.ಕೆ. ಅತ್ರೆ, ಸ್ವಾಮಿ ಸತ್ಯೇಶಾನಂದ ಜೀ ಮಹರಾಜ್, ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ಸಂಘದ ಉಪಾಧ್ಯಕ್ಷ ಪಾರ್ಥಸಾರಥಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಡಿ.22(ಎಸ್‌ಪಿಎನ್)– ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಸ್ವಾಮಿ ವಿವೇಕಾನಂದರ ಸ್ಮಾರಕಕ್ಕೆ ಸರ್ಕಾರಿ ಸಾಮ್ಯದ ಉದ್ದಿಮೆಗಳ ಸಿಎಸ್‌ಆರ್ ಫಂಡ್‌ನಲ್ಲಿ ಇಂತಿಷ್ಟು ಅನುಧಾನ ಲಭ್ಯವಿರುತ್ತದೆ. ಈ ಕಟ್ಟಡ ನಿರ್ಮಾಣಕ್ಕೆ ಎಷ್ಟು ಅನುದಾನ ಕೊರತೆಯಿದೆ ಎಂಬುದರ ಪಟ್ಟಿ ನೀಡಿದರೆ, ನೆರವಾಗಲು ಪ್ರಯತ್ನಿಸುವುದಾಗಿ ಸಂಸದ ತೇಜಸ್ವಿ ಸೂರ್ಯ ಭರವಸೆ ನೀಡಿದರು.

ಮೈಸೂರು ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಸ್ವಾಮಿ ವಿವೇಕಾನಂದ ಸ್ಮಾರಕಕ್ಕೆ ಅನೇಕ ಅಡೆ–ತಡೆಗಳು ಬಂದಿದ್ದರು. ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್ ಅವರ ಸತತ ಪ್ರಯತ್ನದಿಂದ ಕಟ್ಟಡದ ನಿರ್ಮಾಣ ಕಾರ್ಯ ಒಂದು ಹಂತಕ್ಕೆ ಬಂದಿದೆ. ಈ ಕಟ್ಟಡ ನಿರ್ಮಾಣಕ್ಕೆ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ 10 ಕೋಟಿ ರೂ. ನೆರವು ನೀಡಿರುವುದು ಸ್ವಾಗತಾರ್ಹ ವಿಚಾರ ಎಂದರು.

ನಾನು ರಾಮಕೃಷ್ಣ ಆಶ್ರಮದಲ್ಲಿ ಓದದೇ ಇದ್ದರೂ ಬೇರೆ ಬೇರೆ ಸನ್ನಿವೇಶಗಳಲ್ಲಿ ರಾಮಕೃಷ್ಣಾಶ್ರಮದ ಸಂಪರ್ಕಕ್ಕೆ ಬಂದಿದ್ದೇನೆ ಹಾಗೂ ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಈ ಹಂತದವರೆಗೆ ಬೆಳೆದಿದ್ದೇನೆ. ಅಲ್ಲದೆ, ಸ್ವಾಮಿ ವಿವೇಕಾನಂದರು ಹಿಂದೂ ಧರ್ಮಕ್ಕೆ ನೀಡಿರುವ ಕೊಡುಗೆ ಅಪಾರ. ಅಂತಹ ಮಹಾನ್ ಯೋಗಿಯ ಪುತ್ಥಳಿ ಸ್ಥಾಪಿಸಿ, ಅವರ ಹೆಸರನ್ನು ಅಮೆರಿಕಾ, ಲಂಡನ್‌ನ ಪ್ರಮುಖ ವೃತ್ತ, ರಸ್ತೆಗಳಿಗಿಟ್ಟಿರುವುದೇ ಸಾಕ್ಷಿ ಎಂದರು.

1893, ಸೆ.11ರಂದು ಅಮೆರಿಕಾ ಚಿಕಾಗೊ ನಗರದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದ ಕಟ್ಟಡ ಹಾಗೂ ಕಟ್ಟಡ ಮುಂಭಾಗದ ರಸ್ತೆಗೆ ಸ್ವಾಮಿ ವಿವೇಕಾನಂದರ ಹೆಸರನ್ನಿಟ್ಟು ಗೌರವಿಸಿದೆ. ಆದರೆ, ನಮ್ಮ ದೇಶದಲ್ಲಿ ದೇಶಕ್ಕೆ ಕೀರ್ತಿ ತಂದ ಇತಿಹಾಸ ಪುರುಷರ ಸ್ಮಾರಕ ಕೇಂದ್ರಗಳನ್ನು ಸ್ಥಾಪಿಸಿ ಮುಂದಿನ ಪೀಳಿಗೆಗೆ ಪರಿಚಯಿಸಲು ಮುಂದಾಗುತ್ತಿಲ್ಲ. ಅಲ್ಲದೆ, ಮೈಸೂರಿನ ರಾಜಮನೆತನಕ್ಕೂ ಸ್ವಾಮಿ ವಿವೇಕಾನಂದರಿಗೂ ಅಮೆರಿಕಾದ ಚಿಕಾಗೊ ಹೋಗುವ ಸಂಬಂಧ ಹಲವು ಪತ್ರ ವ್ಯವಹಾರ ನಡೆದಿರುವ ವಿಚಾರ ಎಲ್ಲರಿಗೂ ತಿಳಿದಿದೆ ಎಂದರು.

ಮೂರನೇ ಆರ್ಥಿಕ ಶಕ್ತಿಯಾಗಿ ಭಾರತ: ಅಲ್ಲದೆ, ಮುಂದಿನ ಮೂರು ವರ್ಷಗಳಲ್ಲಿ ಭಾರತ ಜಗತ್ತಿನ ಮೂರನೇ ಆರ್ಥಿಕ ಶಕ್ತಿ ರಾಷ್ಟ್ರವಾಗಿ ಹೊರ ಹೊಮ್ಮಲಿದೆ. ಇದಕ್ಕೆ ಪೂರಕವಾಗಿ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯುವ ಶಕ್ತಿ ದೇಶದ ಆರ್ಥಿಕತೆ ಬೆಳವಣಿಗೆಗೆ ಸ್ಪಂದಿಸಬೇಕಿದೆ. ಭಾರತ ಸರ್ಕಾರ ಕಳೆದ 10 ವರ್ಷಗಳಲ್ಲಿ 100 ವಿಮಾನ ನಿಲ್ದಾಣ ನಿರ್ಮಾಣ ಮಾಡಿದೆ. ಮುಂದಿನ ಐದು ವರ್ಷಗಳಲ್ಲಿ ನಿರ್ಮಾಣ ಕ್ಷೇತ್ರದಲ್ಲಿ 100 ಲಕ್ಷ ಕೋಟಿಯಷ್ಟು ಹೂಡಿಕೆಯಾಗುವ ಸಂಭವವಿದೆ. ಇದರ ಉಪಯೋಗವನ್ನು ಉದ್ಯಮಕ್ಕೆ ಬರುವ ಯುವಕರು ಸದುಪಯೋಗ ಪಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಸ್ಟಾರ್ಟ್ ಅಪ್ ಸ್ಥಾಪನೆಯತ್ತ ಯುವ ಸಮೂಹ: ಭಾರತದ ಆರ್ಥಿಕತೆ ಅತೀ ವೇಗವಾಗಿ ಬೆಳವಣಿಗೆಯಾಗುತ್ತಿದೆ. ಇದರಿಂದ ಕರ್ನಾಟಕದ ಯುವ ಸಮೂಹ

'ಪೆರುಮಾಳ್ ಪ್ರೇರಣಾ ಕೇಂದ್ರ ಸ್ಥಾಪಿಸಿ'

"ನನ್ನೂರು ಚಿಕ್ಕಮಗಳೂರು. ಇಲ್ಲಿ ವಾಸವಿದ್ದ ಅರಸಿಂಗ ಪೆರುಮಾಳ್ ಅವರು ಚಿಕಾಗೋದಲ್ಲಿದ್ದ ಸ್ವಾಮಿ ವಿವೇಕಾನಂದರಿಗೆ ಆರ್ಥಿಕ ಸಹಕಾರ ನೀಡಿರುವ ಕುರಿತು ಹಲವು ಪತ್ರ ವ್ಯವಹಾರ ನಡೆಸಿದ್ದರು. ಅವರ ಅನುಯಾಯಿಯಾಗಿ ಅನೇಕ ವಿಚಾರಗಳನ್ನು ದಾಖಲಿಸಿದ್ದಾರೆ. ಅಂಥ ವ್ಯಕ್ತಿಯ ಮನೆಯನ್ನು ಸರ್ಕಾರ ಪ್ರೇರಣಾ ಕೇಂದ್ರವಾಗಿ ಅಭಿವೃದ್ಧಿಪಡಿಸಬೇಕಿತ್ತು. ಆದರೆ, ಯಾವುದೇ ಸರ್ಕಾರಗಳು ಅಂತಹ ಕೆಲಸ ಮಾಡಲಿಲ್ಲ. ಈ ವಿಷಯದಲ್ಲಿ ನಾವು ವಿದೇಶಿಗರಿಂದ ಸಾಕಷ್ಟು ಕಲಿಯಬೇಕಿದೆ. **–ತೇಜಸ್ವಿ ಸೂರ್ಯ, ಸಂಸದ**

ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಅಮಿತ್ ಶಾ ಹೇಳಿಕೆ ಖಂಡಿಸಿ

ಇಂದು ಮೈಸೂರಲ್ಲಿ ಬೃಹತ್ ಪ್ರತಿಭಟನೆ

ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಪೂರ್ವಭಾವಿ ಸಭೆ



ಮೈಸೂರು ಕಾಂಗ್ರೆಸ್ ಭವನದಲ್ಲಿ ಪ್ರತಿಭಟನೆ ಪೂರ್ವಭಾವಿ ಸಭೆ ನಡೆಸಿದ ವೇಳೆ ಕಚೇರಿಯಲ್ಲಿ ಅಳವಡಿಸಿರುವ ಸಂವಿಧಾನ ಪೀಠಿಕೆ ಫಲಕವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅನಾವರಣಗೊಳಿಸಿದರು. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಪಕ್ಷದ ಜಿಲ್ಲಾಧ್ಯಕ್ಷ ಡಾ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರಿದ್ದರು.

ಮೈಸೂರು, ಡಿ.22(ಎಸ್‌ಬಿಡಿ)– ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ಖಂಡಿಸಿ ಡಿ.23ರಂದು ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು, ಈ ಸಂಬಂಧ ನಗರದ ಕಾಂಗ್ರೆಸ್ ಭವನದಲ್ಲಿ ಶನಿವಾರ ಪೂರ್ವಭಾವಿ ಸಭೆ ನಡೆಸಲಾಯಿತು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಮಾತನಾಡಿ, ದೇಶದ ಜನರ ಹಕ್ಕುಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ಹೊತ್ತಿರುವ ಗೃಹ ಸಚಿವರು ಸಂಸತ್‌ನಲ್ಲಿ ಆಡಿದ ಮಾತು ಬಹಳ ಆತಂಕಕಾರಿ. ಅಮಿತ್ ಶಾ ಮಾತಿನಲ್ಲಿ ಬಲಪಂಥೀಯವಾದದ ಹಿಡನ್ ಅಜೆಂಡಾ ಇದೆ. ಅವರ ನಡೆ ಸಂವಿಧಾನ ವಿರೋಧಿಯಾಗಿದೆ ಎಂದು ಹೇಳಿದರು.

ಸಂವಿಧಾನ ಪರಾಮರ್ಶೆ ಸಮಯದಲ್ಲಿ ಮೊದಲ ಬಾರಿಗೆ ಧ್ವನಿ ಎತ್ತಿದ್ದು ನಾವು. ಸಿದ್ದರಾಮಯ್ಯನವರು ಸೇರಿದಂತೆ ನಾವೆಲ್ಲಾ ಹಳೆಯ ಜಿಲ್ಲಾಧಿಕಾರಿ ಕಚೇರಿ ಬಳಿ ಹೋರಾಟ ನಡೆಸಿದ ನಂತರ ಅದು ದೇಶಾದ್ಯಂತ ವ್ಯಾಪಿಸಿತು. ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಎಂದು ಪ್ರತಿಪಕ್ಷದವರು ಟೀಕಿಸುತ್ತಾರೆ. ಆದರೆ ಆ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಕಾಂಗ್ರೆಸ್ ಪಕ್ಷದ ಸದಸ್ಯರೂ ಆಗಿರಲಿಲ್ಲ. ಅವರನ್ನು ನಿಜವಾಗಿ ಸೋಲಿಸಿದ್ದು ಹಿಂದೂ ಮಹಾಸಭಾ ಹಾಗೂ ಕಮ್ಯುನಿಸ್ಟ್ ಪಕ್ಷ ಎಂದರು.

ಬಿಜೆಪಿಯವರು ಸಂವಿಧಾನ ಧ್ವಂಸ ಮಾಡುವ ಮಟ್ಟಕ್ಕೆ ಇಳಿದಿದ್ದಾರೆ. ಅಂಬೇಡ್ಕರ್ ಓರ್ವ ರಾಷ್ಟ್ರವಾದಿ ಹಾಗೂ ದೇಶಪ್ರೇಮಿ. ಆದರೆ ಅಮಿತ್ ಶಾ ಆಡಿರುವ ಮಾತು ಖಂಡನಾರ್ಹ. ರಾಷ್ಟ್ರಪತಿಯವರು ಕೂಡಲೇ ಮಧ್ಯ ಪ್ರವೇಶ ಮಾಡಿ, ಅಮಿತ್ ಶಾ ಅವರ ಸಂಸತ್ ಸದಸ್ಯ ಸ್ಥಾನವನ್ನು ರದ್ದು ಮಾಡಬೇಕು. ಈ ನಿಟ್ಟಿನಲ್ಲಿ ಸೋಮವಾರ ಬೆಳಗ್ಗೆ 11ಕ್ಕೆ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ನಡೆಸಲಾಗುವ ಬೃಹತ್ ಪ್ರತಿಭಟನೆಯಲ್ಲಿ ಜಿಲ್ಲೆಯ ಎಲ್ಲಾ ಶಾಸಕರು, ಮುಖಂಡರು, ಕಾರ್ಯಕರ್ತರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಸಂಸತ್ತಿನಲ್ಲಿ ಅಂಬೇಡ್ಕರ್ ಅವರ ಬಗ್ಗೆ ಅಮಿತ್ ಶಾ ನೀಡಿರುವ ಹೇಳಿಕೆಯನ್ನು ಖಂಡಿಸಿ ನಡೆಸಲಾಗುವ ಪ್ರತಿಭಟನೆಯಲ್ಲಿ 10 ಸಾವಿರಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ನವದೆಹಲಿಯಲ್ಲಿ ಕಾಂಗ್ರೆಸ್ ಬಿಜೆಪಿ ವಿರುದ್ಧ ಪ್ರತಿಭಟನೆ ಮಾಡುವಾಗ ರಾಹುಲ್ ಗಾಂಧಿಯವರು ಬಿಜೆಪಿ ಸಂಸದರನ್ನು ತಳ್ಳಿದ್ದಾರೆಂದು ಆರೋಪಿಸಿ ಎಫ್‌ಐಆರ್ ದಾಖಲಿಸಿ, ಪ್ರಕರಣವನ್ನು ಸಿಬಿಐಗೆ ವಹಿಸಲಾಗಿದೆ. ಅರವಿಂದ ಕ್ರೇಜಿವಾಲ್ ಮಾರುಕಟ್ಟೆಯಲ್ಲಿ ಗಲಾಟೆ ಮಾಡಿದ್ದಾರೆಂದು ಪ್ರಕರಣ ದಾಖಲಿಸಲಾಗಿದೆ. ಇದೆಲ್ಲವೂ ಬಿಜೆಪಿ ರಾಜಕೀಯ ಪ್ರಹಸನ. ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿರುವ ಅಮಿತ್ ಶಾ ವಿರುದ್ಧ ಪರಿಣಾಮಕಾರಿ ಹೋರಾಟ ರಾಜ್ಯದಲ್ಲಿ ನಡೆಯಬೇಕಿದೆ ಎಂದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಸಭೆಯಲ್ಲಿದ್ದರು.

ಮಕ್ಕಳನ್ನು ಓದಿನ ಜೊತೆ ಸಾಂಸ್ಕೃತಿಕ ಚಟುವಟಿಕೆಯಲ್ಲೂ ತೊಡಗಿಸಬೇಕು

ಆಯಾಮೋತ್ಸವದಲ್ಲಿ ನೃತ್ಯ ನಾಟಕಗಳ ಉತ್ಸವದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಸಲಹೆ



ಮೈಸೂರು ಕಲಾಮಂದಿರ ಕಿರುರಂಗಮಂದಿರದಲ್ಲಿ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ಆಯೋಜಿಸಿದ್ದ ಆಯಾಮೋತ್ಸವದಲ್ಲಿ ನೃತ್ಯ ನಾಟಕಗಳ ಉತ್ಸವವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು,ಡಿ.22(ಎಸ್‌ಪಿಎನ್)– ಮಕ್ಕಳನ್ನು ಓದಿನ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಯಲ್ಲೂ ತೊಡಗಿಸಿ ಉತ್ತಮ ಪ್ರಜೆಗಳಾಗಿ ರೂಪಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಮೈಸೂರು ಕಲಾಮಂದಿರ ಕಿರುರಂಗ ಮಂದಿರದಲ್ಲಿ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ಆಯೋಜಿಸಿದ್ದ ಆಯಾಮೋತ್ಸವದಲ್ಲಿ ನೃತ್ಯ ನಾಟಕಗಳ ಉತ್ಸವದಲ್ಲಿ 'ಸತ್ಯವೇ ಮಾರ್ಗ, ತ್ಯಾಗವೇ ಧರ್ಮ' ಗೋವಿನ ಹಾಡು ನೃತ್ಯ ರೂಪಕಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳು ಟಿವಿ, ಮೊಬೈಲ್‌ನಲ್ಲಿ ತೊಡಗಿರುತ್ತಾರೆ. ಅದರಿಂದ ಹೊರಬರಲು ಇಂತಹ ನೃತ್ಯ ಕಾರ್ಯಕ್ರಮಗಳು ಸಹಕಾರಿಯಾಗಲಿದೆ. ಗೋವಿನ ಹಾಡಿಗೆ ಖ್ಯಾತ ನೃತ್ಯಪಟು ಡಾ.ಎಸ್.ವಿ.ಶಾಂಭವಿ ಸ್ವಾಮಿ ಅವರ ನೇತೃತ್ವದಲ್ಲಿ ಮಕ್ಕಳನ್ನು ಸಜ್ಜುಗೊಳಿಸಿ, ನೃತ್ಯ ಪ್ರದರ್ಶನ ನೀಡುತ್ತಿರುವುದು ಸಂತೋಷ ಸಂಗತಿ ಎಂದರು.

ಮಕ್ಕಳು ಕಲೆಗಳಲ್ಲಿ ತೊಡಗಿಸಿಕೊಳ್ಳಲು ಹೆಚ್ಚು ಇಷ್ಟಪಡುತ್ತಾರೆ. ಅದಕ್ಕೆ ಪೂರಕವಾಗಿ ಪೋಷಕರೂ ಪ್ರೋತ್ಸಾಹಿಸುತ್ತಿದ್ದಾರೆ. ಇಂತಹ ಬೆಳವಣಿಗೆ ಉತ್ತಮ ಸಮಾಜ ಕಟ್ಟಲು ಪೂರಕ ಎಂದ ಶಾಸಕರು, ಮಕ್ಕಳು ಚಿಕ್ಕ ವಯಸ್ಸಿನಲ್ಲೇ ಕಲೆ, ಸಾಹಿತ್ಯ, ನೃತ್ಯ, ಸಂಗೀತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಇದು ಉತ್ತಮ ವೇದಿಕೆಯಾಗಲಿದೆ ಎಂದರು.

ಮೈಸೂರನ್ನು ಸಾಂಸ್ಕೃತಿಕ ನಗರಿ ಎಂಬ ಹೆಸರಿನಿಂದಲೂ ವಿಶ್ವದ ಬೇರೆ ಬೇರೆ ರಾಷ್ಟ್ರಗಳಲ್ಲಿ ಕರೆಯುತ್ತಾರೆ. ಇದಕ್ಕೆ ಕಾರಣ ಮೈಸೂರು ರಾಜ ಮನೆತನದ ಆಡಳಿತಾವಧಿಯಲ್ಲಿ ಕಲೆಗಳಿಗೆ ನೀಡಿರುವ ಪ್ರೋತ್ಸಾಹ. ಹಾಗಾಗಿ ಮೈಸೂರಿನಲ್ಲಿ ಇಂತಹ ಕಾರ್ಯಕ್ರಮಗಳು ಇಂದಿಗೂ ಹೆಚ್ಚು ಹೆಚ್ಚು ನಡೆಯಲು ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ನೈಪುಣ್ಯ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಆರ್.ರಘು ಮಾತನಾಡಿ, ಇಂದಿನ ಮಕ್ಕಳಿಗೆ ಸ್ಪರ್ಧಾತ್ಮಕ ಜಗತ್ತಿನ ಪರಿಚಯದ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಸೇರಿದಂತೆ ಇತರೆ ಕಲಾತ್ಮಕ ಚಟುವಟಿಕೆಗಳನ್ನು ಪರಿಚಯಿಸಬೇಕು. ಭಾರತ ರತ್ನ ಪಂಡಿತ್ ಭೀಮ್ ಸೇನ್ ಜೋಶಿ ಅವರು, ಚಿಕ್ಕವಯಸ್ಸಿನಲ್ಲಿ ಸಂಗೀತ ಕಲಿಯಲು ಅವರ ಗುರುಗಳ ಬಳಿ ಹೋಗಿ ಕೇಳಿಕೊಂಡಾಗ, ಆ ಗುರುಗಳು ಜೋಶಿ ಅವರನ್ನು ಆರು ತಿಂಗಳು ನೀರು ಶೇಖರಿಸುವ ಕೆಲಸ ನೀಡಿ, ಅವರ ಶ್ರಮ, ತಾಳ್ಮೆ, ಕಲಿಯುವ ಉತ್ಸಾಹವನ್ನು ಕಂಡು ನಂತರ ಸಂಗೀತ ಕಲಿಕೆಗೆ ಆದ್ಯತೆ ನೀಡಿದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು.

ವೇದಿಕೆಯಲ್ಲಿ ನೃತ್ಯ ರೂಪಕ ನಿರ್ದೇಶಕಿ ವಿದುಷಿ ಡಾ.ಎಸ್.ವಿ.ಶಾಂಭವಿಸ್ವಾಮಿ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಪ್ರೊ.ಕೆ.ರಾಮ ಮೂರ್ತಿರಾವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ನಂತರ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವಿದ್ಯಾರ್ಥಿಗಳು ಪ್ರದರ್ಶಿಸಿದ ಗೋವಿನ ಹಾಡಿಗೆ 'ಸತ್ಯವೇ ಮಾರ್ಗ ತ್ಯಾಗವೇ ಧರ್ಮ' ಶೀರ್ಷಿಕೆಯಡಿ ನೃತ್ಯರೂಪಕ ಪ್ರದರ್ಶಿಸಿದರು.

ಕೇಳಿದ್ದ ಎಲ್ಲಾ ಚುನಾವಣಾ ದಾಖಲೆ ಇನ್ನು ಲಭ್ಯವಿರಲ್ಲ!

ನವದೆಹಲಿ, ಡಿ.22–ಇನ್ನು ಮುಂದೆ ಚುನಾವಣೆಗೆ ಸಂಬಂಧಿಸಿದಂತೆ ಕೇಳಿದ ಎಲ್ಲಾ ದಾಖಲೆಗಳು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ. ಕೆಲ ಚುನಾವಣಾ ದಾಖಲೆ ಮತ್ತು ಕಡತಗಳ ಪರಿಶೀಲನೆಯನ್ನು ನಿರ್ಬಂಧಿಸಿ ಕಾನೂನು ಮತ್ತು ನ್ಯಾಯ ಸಚಿವಾಲಯವು ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿದೆ.

ಈ ಹಿಂದೆ 1961ರ ಚುನಾವಣಾ ನಿಯಮದಲ್ಲಿ 93(2)(ಎ) ಚುನಾವಣೆಗೆ ಸಂಬಂಧಿಸಿದ ಎಲ್ಲ ದಾಖಲೆಗಳು ಸಾರ್ವಜನಿಕ ತಪಾಸಣೆಗೆ ಮುಕ್ತವಾಗಿರುತ್ತವೆ ಎಂದು ಹೇಳಲಾಗಿತ್ತು. ಅದಕ್ಕೀಗ ತಿದ್ದುಪಡಿ ತರಲಾಗಿದ್ದು, ಅದರ ಪ್ರಕಾರ, ಚುನಾವಣೆಗೆ

ಚುನಾವಣಾ ನಿಯಮಗಳಿಗೆ ತಿದ್ದುಪಡಿ

ಸಂಬಂಧಿಸಿದಂತೆ ನಿರ್ದಿಷ್ಟ ದಾಖಲೆ, ಕಡತಗಳು ಮಾತ್ರ ಜನರ ತಪಾಸಣೆಗೆ ಲಭ್ಯವಿರುತವೆ. ಉಳಿದಂತೆ ಇತರ ದಾಖಲೆ ಹಾಗೂ ಕಡತ ಪರಿಶೀಲನೆಗೆ ಲಭ್ಯವಿರುವುದಿಲ್ಲ.

ಸಿಸಿಟಿವಿ ಕ್ಯಾಮೆರಾ, ವೆಬ್‌ಕಾಸ್ಟಿಂಗ್ ದೃಶ್ಯಾವಳಿಗಳು ಮತ್ತು ಅಭ್ಯರ್ಥಿಗಳ ವಿಡಿಯೊ ರೆಕಾರ್ಡಿಂಗ್‌ಗಳಂತಹ ಎಲೆಕ್ಟ್ರಾನಿಕ್ ದಾಖಲೆಗಳನ್ನು ಸಾರ್ವಜನಿಕರ ತಪಾಸಣೆಯಿಂದ ಹೊರಗಿಡಲಾಗಿದೆ. ದುರುಪಯೋಗ ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ. ಚುನಾವಣಾ ಆಯೋಗದ ಶಿಫಾರಸಿನ ಮೇರೆಗೆ ಈ ತಿದ್ದುಪಡಿಗಳನ್ನು ಮಾಡಲಾಗಿದೆ.

ಯಾವುದು ಲಭ್ಯ, ಅಲಭ್ಯ?: ಅಭ್ಯರ್ಥಿಗಳ ನಾಮಪತ್ರಗಳು, ಚುನಾವಣಾ ಏಜೆಂಟರ ನೇಮಕ, ಫಲಿತಾಂಶ ಮತ್ತು ಚುನಾವಣಾ ಖರ್ಚು ವೆಚ್ಚದ ಮಾಹಿತಿಯು ತಿದ್ದುಪಡಿ ನಿಯಮದಲ್ಲಿ ಉಲ್ಲೇಖಿಸಿದ್ದು, ಅವುಗಳನ್ನು ಸಾರ್ವಜನಿಕರು ಪರಿಶೀಲಿಸಬಹುದು. ಆದರೆ, ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು, ವೆಬ್‌ಕಾಸ್ಟಿಂಗ್ ದೃಶ್ಯಾವಳಿ ಮತ್ತು ಮಾದರಿ ನೀತಿ ಸಂಹಿತೆ ಅವಧಿಯಲ್ಲಿ ಅಭ್ಯರ್ಥಿಗಳ ವಿಡಿಯೊ ರೆಕಾರ್ಡಿಂಗ್‌ನಂತಹ ಎಲೆಕ್ಟ್ರಾನಿಕ್ ದಾಖಲೆಗಳನ್ನು ನಿಯಮಗಳಲ್ಲಿ ಉಲ್ಲೇಖಿಸಲಾಗಿಲ್ಲ. ಹೀಗಾಗಿ ಇವುಗಳ ಪರಿಶೀಲನೆಗೆ ನಿರ್ಬಂಧ ಇರುತ್ತದೆ.

ನಾಳೆ 16ನೇ ಸ್ವಸ್ತಿ ಸಂಭ್ರಮ


ಮೈಸೂರು,ಡಿ.22(ಜಿಎ)–ಶ್ರೀ ಬುಂಡೆಗೌಡ ಮೆಮೋರಿಯಲ್ ಟ್ರಸ್ಟ್‌ನ ಶ್ರೀ ಪ್ರಜ್ಞಾ ಗುರುಕುಲ ಶಾಲೆ ವಾರ್ಷಿಕೋತ್ಸವವನ್ನು ಡಿ.24ರಂದು ಸಂಜೆ 5 ಗಂಟೆಗೆ '16ನೇ ಸ್ವಸ್ತಿ ಸಂಭ್ರಮ' ಹೆಸರಿನಡಿ ಆಚರಿಸಲಾಗುವುದು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಲೆಯ ಪ್ರಾಂಶುಪಾಲ ಡಾ.ಶಂಕರೇಗೌಡ ಈ ವಿಷಯ ತಿಳಿಸಿ, ಮುಖ್ಯ ಅತಿಥಿಗಳಾಗಿ ಜಿಪಂ ಸಿಇಒ ಕೆ.ಎಂ. ಗಾಯತ್ರಿ, ಗುಪ್ತಚರ ಮತ್ತು ಸಮನ್ವಯ ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತೆ ಕೆ.ಆರ್.ನಂದಿನಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಲ್.ನಾಗೇಶ್ ಪಾಲ್ಗೊಳ್ಳಲಿದ್ದು, ಟ್ರಸ್ಟ್‌ನ ಅಧ್ಯಕ್ಷ ಡಾ.ಕೆ.ಬಿ.ಸಿದ್ದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಇಂದು ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ

ಮೈಸೂರು, ಡಿ.22–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಡಿ.23ರಂದು ಬೆಳಗ್ಗೆ 10 ಗಂಟೆಗೆ 30 ದಿನಗಳ ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್ ಉಪಸ್ಥಿತರಿರುವರು. ಹಾಗೂ ಮೈಸೂರು ಜಿಲ್ಲಾ ಪೊಲೀಸ್ ಅಧಿಕ್ಷಕ ವಿಷ್ಣುವರ್ಧನ ಮತ್ತು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಅವರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ.

ದೇಶ - ವಿದೇಶ

ಕರಾಚಿ–ಲಾಹೋರ್‌ಗಳಲ್ಲಿ ಶೀತಗಾಳಿ, ಅಪಾಯಕಾರಿ ಮಟ್ಟದಲ್ಲಿ ವಾಯುಮಾಲಿನ್ಯ




ಕರಾಚಿ: ಪಾಕಿಸ್ತಾನದ ಆರ್ಥಿಕ ರಾಜಧಾನಿ ಕರಾಚಿಯಲ್ಲಿ ಶೀತಗಾಳಿ ಬೀಸುತ್ತಿದ್ದು, ಆತಂಕದ ಮಟ್ಟದಲ್ಲಿ ವಾಯುಮಾಲಿನ್ಯ ಉಂಟಾಗಿದೆ. ಕರಾಚಿಯಲ್ಲಿ 9.5 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ನಗರದ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 199ರಷ್ಟಿದ್ದು, ವಾಯುಗುಣಮಟ್ಟ ಮಾನಿಟರ್ ಐಕ್ಯೂಏರ್ ಇದನ್ನು ಅನಾರೋಗ್ಯಕರ ಎಂದು ಹೇಳಿದೆ.

ಶೀತಗಾಳಿಯ ಮಧ್ಯೆ ಅನೇಕ ಪ್ರದೇಶಗಳಲ್ಲಿ ತಾಪಮಾನವು ಒಂದಂಕಿಗೆ ಇಳಿಕೆಯಾಗಿರುವುದು ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ. ವಾಯುವ್ಯದಿಂದ ಗಂಟೆಗೆ 8 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಆರ್ದ್ರತೆಯು ಶೇ.41ರಷ್ಟಿದೆ. ಕರಾಚಿಯಲ್ಲಿ ಈ ತಿಂಗಳಲ್ಲಿ ಎರಡನೇ ಬಾರಿಗೆ ತಾಪಮಾನವು 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಾಗಿದೆ.

ಆಗ್ನೇಯ ಸಿಂಧ್‌ನಲ್ಲಿ ತಾಪಮಾನವು 3 ಡಿಗ್ರಿ ಸೆಲ್ಸಿಯಸ್‌ನಿಂದ 4 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಲಿದೆ ಎಂದು ಪಾಕಿಸ್ತಾನ ಹವಾಮಾನ ಇಲಾಖೆ (ಪಿಎಂಡಿ) ಈ ಹಿಂದೆ ಮುನ್ಸೂಚನೆ ನೀಡಿತ್ತು. ಈಗಾಗಲೇ ವಾರಗಳಿಂದ ನಿರಂತರ ಮಂಜು ಹೊಗೆಯಿಂದ ಆವೃತವಾಗಿರುವ ಲಾಹೋರ್, 303 ಎಕ್ಯೂಐನೊಂದಿಗೆ ವಿಶ್ವದ ಎರಡನೇ ಅತ್ಯಂತ ಕಲುಷಿತ ನಗರವಾಗಿದೆ.


ಪಶ್ಚಿಮ ಬಂಗಾಳ: ಶಂಕಿತ ಕಾಶ್ಮೀರಿ ಉಗ್ರನ ಬಂಧನ



ಪಶ್ಚಿಮ ಬಂಗಾಳ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಭಾನುವಾರ ಶಂಕಿತ ಕಾಶ್ಮೀರದ ಉಗ್ರನೊಬ್ಬನನ್ನು ಬಂಧಿಸಲಾಗಿದೆ. ಕಾಶ್ಮೀರ ಕಣಿವೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ 'ತೆಹ್ರೀಕ್ ಇ ಮುಜಾ ಹಿದ್ದೀನ್' ಸಂಘಟನೆಯ ಸದಸ್ಯನೆಂದು ಶಂಕಿಸಲಾದ ಜಾವೇದ್ ಮುನ್ಷಿಯನ್ನು ಜಮ್ಮು–ಕಾಶ್ಮೀರ ಪೊಲೀಸರು ಮತ್ತು ಬಂಗಾಳ ಪೊಲೀಸರ ಜಂಟಿ ತಂಡ ಬಂಧಿಸಿದೆ.

ಕಣಿವೆಯಲ್ಲಿ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಉಗ್ರ ಹಲವು ದಿನಗಳಿಂದ ಜಮ್ಮು ಮತ್ತು ಕಾಶ್ಮೀರ ಪೊಲೀಸರಿಗೆ ಬೇಕಾಗಿದ್ದ. ಜಮ್ಮು–ಕಾಶ್ಮೀರ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿನ ಇತರ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ತೆಹೀಕ್ ಇ–ಮುಜಾಹಿದ್ದೀನ್ ಸಂಘಟನೆ ಪಾಕಿಸ್ತಾನದಿಂದ ನಿಯಂತ್ರಿಸುತಿತ್ತು ಎಂದು ಮಾಹಿತಿ ನೀಡಿದ್ದಾರೆ. ಜಾವೇದ್ ಶ್ರೀನಗರದ ನಿವಾಸಿಯಾಗಿದ್ದರೂ, ಯಾವುದೇ ಭಯೋತ್ಪಾದಕ ಸಂಘಟನೆಯೊಂದಿಗೆ ಆತ ಹೊಂದಿರುವ ಸಂಪರ್ಕದ ಬಗ್ಗೆ ನಮಗೆ ತಿಳಿದಿರಲಿಲ್ಲ. ಆರೋಪಗಳು ನಿಜ ವೆಂದು ಕಂಡುಬಂದರೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಜಾವೇದ್ ಸಂಬಂಧಿಕರು ಹೇಳಿದ್ದಾರೆ.

13 ವರ್ಷಗಳ ನಂತರ ಡಮಾಸ್ಕಸ್‌ನಲ್ಲಿ ಕತಾರ್ ರಾಯಭಾರ ಕಚೇರಿ ಪುನಾರಂಭ




ಡಮಾಸ್ಕಸ್: ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿ 13 ವರ್ಷಗಳ ನಂತರ ಕತಾರ್ ತನ್ನ ರಾಯಭಾರ ಕಚೇರಿಯನ್ನು ಅಧಿಕೃತವಾಗಿ ಪುನಾರಂಭಿಸಿದೆ. ವರ್ಷಗಳ ನಂತರ ಇದೇ ಮೊದಲ ಬಾರಿಗೆ ರಾಯಭಾರ ಕಚೇರಿ ಮೇಲೆ ಕತಾರ್ ಧ್ವಜ ಹಾರಾಡುತ್ತಿದೆ. ಡಮಾಸ್ಕಸ್‌ನ ಅಬು ರುಮ್ಮಾನೆ ಪ್ರದೇಶದಲ್ಲಿರುವ ರಾಯಭಾರ ಕಚೇರಿಯ ಕಾಂಪೌಂಡ್ ಅನ್ನು ಕಾರ್ಮಿಕರು ಸ್ವಚ್ಛಗೊಳಿಸುವುದು ಮತ್ತು ಅದರ ಗೋಡೆಗಳ ಮೇಲೆ ಬರೆಯಲಾದ ಗೀಚುಬರಹಗಳನ್ನು ಅಳಿಸಲಾಗುತ್ತಿರುವ ದೃಶ್ಯಗಳು ಕಂಡು ಬಂದಿವೆ. ಡಿ.8ರಂದು ಸಿರಿಯಾದ ಮಾಜಿ ಅಧ್ಯಕ್ಷ ಬಷರ್ ಅಲ್–ಅಸ್ಸಾದ್ ಅವರ ಸರ್ಕಾರದ ಪತನದ ನಂತರ ದೇಶದ ಚುಕ್ಕಾಣಿ ಹಿಡಿಯಲಿರುವ ನಾಯಕತ್ವವನ್ನು ಭೇಟಿಯಾಗಲು ಪ್ರಾದೇಶಿಕ ಮತ್ತು ಪಾಶ್ಚಿಮಾತ್ಯ ಪ್ರತಿನಿಧಿಗಳು ಸಿರಿಯಾಕ್ಕೆ ಭೇಟಿ ನೀಡಿದ ಮಧ್ಯೆ, ಕತಾರ್ ರಾಯಭಾರ ಕಚೇರಿಯನ್ನು ಮತ್ತೆ ತೆರೆಯಲಾಗಿದೆ. ಸಿರಿಯನ್ ಅಂತರ್ಯುದ್ಧ ಪ್ರಾರಂಭವಾದ ನಂತರ 2011ರಲ್ಲಿ ಕತಾರ್ ಇಲ್ಲಿನ ತನ್ನ ರಾಜತಾಂತ್ರಿಕ ಕಚೇರಿಯನ್ನು ಮುಚ್ಚಿತ್ತು. ಸದ್ಯ ಬಷರ್ ಸರ್ಕಾರದ ಪತನದ ನಂತರ ಕಳೆದ ವಾರ ಕತಾರ್ ನಿಯೋಗವೊಂದು ಡಮಾಸ್ಕಸ್‌ಗೆ ಭೇಟಿ ನೀಡಿ ಕಚೇರಿಯ ಪುನಾರಂಭಕ್ಕೆ ಸಿದ್ಧತೆಗಳನ್ನು ಆರಂಭಿಸಿತ್ತು.

ದಾರಿ ತಪ್ಪಿಸುವ ಜಾಹೀರಾತು, ಐಎಎಸ್ ಕೋಚಿಂಗ್ ಸಂಸ್ಥೆಗೆ ದಂಡ

ನವದೆಹಲಿ: ದಾರಿ ತಪ್ಪಿಸುವ ಜಾಹೀರಾತಿಗಾಗಿ ಸುಬ್ರಾರಂಜನ್ ಐಎಎಸ್ ಕೋಚಿಂಗ್ ಸಂಸ್ಥೆಗೆ ಕೇಂದ್ರ ಗ್ರಾಹಕ ಹಿತಾರಕ್ಷಣಾ ಪ್ರಾಧಿಕಾರ ರೂ. 2 ಲಕ್ಷ ದಂಡ ವಿಧಿಸಿದೆ. ಜಾಹೀರಾತಿನಲ್ಲಿ ಪ್ರತಿಷ್ಠಿತ ಭಾರತೀಯ ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ (ಐಎಎಸ್) ಯಶಸ್ವಿಯಾದ ವಿದ್ಯಾರ್ಥಿಗಳ ಕೋರ್ಸ್ ವಿವರ ಕುರಿತ ಮಾಹಿತಿಯನ್ನು ಸಂಸ್ಥೆ ಮುಚ್ಚಿಟ್ಟಿರುವುದು ತಿಳಿದುಬಂದಿದೆ. 2023ರ ಯುಪಿಎಸ್‌ಸಿ ಐಎಎಸ್ ಪರೀಕ್ಷೆಯಲ್ಲಿ ಟಾಪ್ 100ರಲ್ಲಿ 13 ವಿದ್ಯಾರ್ಥಿಗಳು, ಟಾಪ್ 200ರಲ್ಲಿ 28 ವಿದ್ಯಾರ್ಥಿಗಳು ಹಾಗೂ ಟಾಪ್ 300ರಲ್ಲಿ 39 ವಿದ್ಯಾರ್ಥಿಗಳಿದ್ದಾರೆ ಎಂದು ಜಾಹೀರಾತಿನಲ್ಲಿ ಹೇಳಿಕೊಂಡಿದ್ದು, ಪರೀಕ್ಷೆಯಲ್ಲಿ ಯಶಸ್ವಿಯಾದ ವಿದ್ಯಾರ್ಥಿಗಳ ಹೆಸರು, ಫೋಟೋವನ್ನು ಪ್ರದರ್ಶಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂಸ್ಥೆಯು ತನ್ನ ಜಾಹೀರಾತು ಮತ್ತು ಲೆಟರ್ ಹೆಡ್‌ಗಳಲ್ಲಿ 'ಶುಭ್ರರಂಜನ್ ಐಎಎಸ್' ಮತ್ತು 'ಶುಭ್ರ ರಂಜನ್ ಐಎಎಸ್ ವಿದ್ಯಾರ್ಥಿಗಳು' ಎಂಬ ಪದಗಳನ್ನು ಬಳಸಿದ್ದು, ಐಎಎಸ್ ಅಧಿಕಾರಿ ಶುಭ ರಂಜನ್ ಅವರ ಹೆಸರಿನಲ್ಲಿ ವಂಚಿಸುವ ಹುನ್ನಾರ ಎನ್ನಲಾಗಿದೆ. ಜಾಹೀರಾತು 2019ರ ಗ್ರಾಹಕ ಹಿತರಕ್ಷಣಾ ಕಾಯ್ದೆ ಉಲ್ಲಂಘನೆಯಾಗಿದೆ. 2022ರ ಐಎಎಸ್ ಪರೀಕ್ಷೆ ಫಲಿತಾಂಶ ದಾರಿ ತಪ್ಪಿಸುವ ಜಾಹೀರಾತಿಗಾಗಿ ಸಂಸ್ಥೆಗೆ 7 ಲಕ್ಷ ರೂ. ದಂಡವನ್ನು CCPA ವಿಧಿಸಿತು.

ಮೊಹಾಲಿಯಲ್ಲಿ ಬಹುಮಹಡಿ ಕಟ್ಟಡ ದುರಂತ; ಇಬ್ಬರ ಸಾವು,



ಮೊಹಾಲಿ: ಪಂಜಾಬ್‌ನ ಮೊಹಾಲಿಯಲ್ಲಿ 4 ಅಂತಸ್ತಿನ ಕಟ್ಟಡದ ಕುಸಿದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ ಈಗಾಗಲೇ ಸ್ಥಳದಲ್ಲಿ ಶೋಧಕಾರ್ಯ ಮುಂದುವರಿದಿದೆ. ಅವಘಡ ಸಂಭವಿಸಿದಾಗ ಜಿಮ್‌ನೊಳಗೆ 10ಕ್ಕೂ ಹೆಚ್ಚು ಮಂದಿ ಇದ್ದರು ಎಂಬ ಶಂಕೆ ವ್ಯಕ್ತವಾಗಿದೆ.

ಮೃತರ ಪೈಕಿ ಅಭಿಷೇಕ್ ಎಂಬುವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನೊರ್ವ ಹಿಮಾಚಲ ಪ್ರದೇಶದ ಮಹಿಳೆಯಾದ 20 ವರ್ಷದ ದೃಷ್ಟಿ ವರ್ಮಾ ಅವರನ್ನು ಗಂಭೀರ ಸ್ಥಿತಿಯಲ್ಲಿ ರಕ್ಷಿಸಿ, ನಂತರ ಸ್ಥಳಿಯ ಸೊಹಾನಾ ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಅವರು ತಮ್ಮ ಗಂಭೀರ ಗಾಯಗಳಿಂದ ಸಾವನ್ನಪ್ಪಿದ್ದಾರೆ. ಮತ್ತೊಂದೆಡೆ ಕಟ್ಟಡದ ಮಾಲೀಕರಾದ ಪರ್ವಿಂದರ್ ಸಿಂಗ್ ಮತ್ತು ಗಗನ್‌ದೀಪ್ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 105ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಮೊಹಾಲಿ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ದೀಪಕ್ ಪರೀಕ್ ತಿಳಿಸಿದ್ದಾರೆ.

ಕಟ್ಟಡದಲ್ಲಿ ಜಿಮ್ ನಡೆಸಲಾಗುತ್ತಿತ್ತು. ಆದರೆ ಪಕ್ಕದ ಕಟ್ಟಡದಲ್ಲಿನ ಉತ್ಖನನದಿಂದಾಗಿ ಕುಸಿದಿದೆ ಎನ್ನಲಾಗಿದ್ದು, ಅವಶೇಷಗಳ ಅಡಿಯಲ್ಲಿ ಇದುವರೆಗೆ ಐದು ಜನರನ್ನು ಹೊರತೆಗೆಯಲಾಗಿದ್ದು, ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ನದಿಯಲ್ಲಿ ಮುಳುಗಿ ಎಲೆಕ್ಟ್ರಿಷಿಯನ್ ಸಾವು

ಕುಶಾಲನಗರ, ಡಿ.22–ಕಾವೇರಿ ನದಿಯಲ್ಲಿ ಎಲೆಕ್ಟ್ರಿಷಿಯನ್ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟಿರುವ ಪಟ್ಟಣದ ಘಟನೆ ಅಯ್ಯಪ್ಪಸ್ವಾಮಿ ದೇವಾಲಯ ಬಳಿ ನಡೆದಿದೆ.

ದೇವಾಲಯದ ಬಳಿ ವಾಸವಿದ್ದ ಎಲೆಕ್ಟ್ರಿಷಿಯನ್ ಶರವಣ (46) ಮೃತಪಟ್ಟಿದ್ದು, ಈತ ಶನಿವಾರ ಸಂಜೆ ಸ್ನಾನ ಮಾಡಲು ನದಿಗೆ ಇಳಿದಿದ್ದಾನೆ. ಈ ವೇಳೆ ಕಾಲು ಜಾರಿ ನೀರಿಗೆ ಬಿದ್ದು ಸಾವನ್ನಪ್ಪಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಭಾನುವಾರ ಶವ ಪತ್ತೆಯಾಗಿದ್ದು, ಸ್ಥಳೀಯರು ಮತ್ತು ಆಟೋ ಚಾಲಕ ಮುನೀರ್ ಶವವನ್ನು ನದಿಯಿಂದ ಮೇಲೆತ್ತಿದರು.

ಕುಶಾಲನಗರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿಕೇಂದ್ರೀಕರಣ ರಾಜಕಾರಣ ಮರೆ, ಸರ್ವಾಧಿಕಾರಿ ಆಡಳಿತ ತಾಂಡವ

ಪ್ರಸ್ತುತ ರಾಜಕೀಯ ವಿದ್ಯಮಾನಗಳ ಬಗ್ಗೆ ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ವಿಷಾದ



ಸುದ್ದಿಗೋಷ್ಠಿಯಲ್ಲಿ ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಮಾತನಾಡಿದರು.

ಮಡಿಕೇರಿ, ಡಿ.22–ಇಂದಿನ ರಾಜಕೀಯ ವ್ಯವಸ್ಥೆ ದುಃಖ ತರಿಸಿದೆ. ವಿಕೇಂದ್ರೀಕರಣ ರಾಜಕಾರಣ ಮರೆಯಾಗಿದ್ದು, ಸರ್ವಾಧಿಕಾರ ಮೆರೆಯುತ್ತಿದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶ ಮತ್ತು ವಿವಿಧ ರಾಜ್ಯಗಳಲ್ಲಿ ಸಂವಿಧಾನಕ್ಕೆ ಪೂರಕವಾದ ರಾಜಕಾರಣ ನಡೆಯುತ್ತಿಲ್ಲ. ಸಮಬಾಳಿನ ಪರಿಕಲ್ಪನೆ ಸಾಕಾರಗೊಳ್ಳುತ್ತಿಲ್ಲ. ಅಧಿಕಾರ ವಿಕೇಂದ್ರೀಕರಣವಾಗುತ್ತಿಲ್ಲ. ಸಮಾಜ ಭ್ರಷ್ಟಾಚಾರ ಮುಕ್ತವಾಗುತ್ತಿಲ್ಲ. ಮತ ಚಲಾವಣೆಗೂ ಮತದಾರ ಹಣ ಪಡೆಯುವ ರೀತಿಯಲ್ಲಿ ಭ್ರಷ್ಟ ವ್ಯವಸ್ಥೆ ಬೆಳೆದು ಬಿಟ್ಟಿದೆ. ಕುಟುಂಬ ರಾಜಕಾರಣಕ್ಕೆ ಒತ್ತು ನೀಡಲಾಗುತ್ತಿದೆ. ಸರ್ವಾಧಿಕಾರ ರಾಜಕೀಯ ನಡೆಯುತ್ತಿದೆ. ಸದನದಲ್ಲಿ ವೈಯಕ್ತಿಕ ನಿಂದನೆಯಾಗುತ್ತಿದೆ. ಹೆಚ್ಚು ಹಲ್ಲೆ ಪ್ರಕರಣಗಳು ನಡೆಯುತ್ತಿವೆ ಎಂದರು.

ಕೊಡಗಿಗೆ ಪ್ರತ್ಯೇಕ ಕ್ಷೇತ್ರ: ಕೊಡಗು ಜಿಲ್ಲೆಯಲ್ಲಿ 5 ತಾಲೂಕುಗಳಿದ್ದು, ಇದೊಂದು ವಿಭಿನ್ನ ಭೌಗೋಳಿಕ ರಚನೆಯ ಜಿಲ್ಲೆಯಾಗಿರುವುದರಿಂದ ವಿಧಾನಸಭಾ ಕ್ಷೇತ್ರಗಳನ್ನು ಹೆಚ್ಚಿಸುವ ಅಗತ್ಯವಿದೆ. ಕೇವಲ ಎರಡು ಕ್ಷೇತ್ರಗಳಾದರೆ ಶಾಸಕರಾದವರಿಗೆ ನಿರ್ವಹಣೆ ಕಷ್ಟವಾಗಲಿದೆ ಮತ್ತು ಅನುದಾನದ ಕೊರತೆಯಾಗಲಿದೆ. ಲೋಕಸಭಾ ಕ್ಷೇತ್ರ ಹಿಂದೆ ಕೊಡಗು ಮಂಗಳೂರಿನೊಂದಿಗೆ ಹಂಚಿಕೊಂಡು ಇದೀಗ ಮೈಸೂರಿನೊಂದಿಗಿದೆ. ಕೊಡಗು ಜಿಲ್ಲೆಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ನೀಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಜಿಲ್ಲೆಯಲ್ಲಿ ಜಮೀನಿನ ಸಮಸ್ಯೆ ಮುಂದುವರೆದಿದೆ. ಅರಣ್ಯ ಮತ್ತು ಕೃಷಿ ಭೂಮಿ ರಕ್ಷಣೆಗಾಗಿ ಕೊಡಗಿಗೆ ಸೀಮಿತವಾಗಿ ವಿಶೇಷ ಅರಣ್ಯ ನೀತಿ ಜಾರಿಗೆ ತರಬೇಕಾಗಿದೆ. ಮುಂದಿನ ದಿನಗಳಲ್ಲಿ ಕೊಡಗು ಜಿಲ್ಲೆಯಲ್ಲೂ ಆಮ್ ಆದ್ಮಿ ಪಾರ್ಟಿಯನ್ನು ಜನಜಾಗೃತಿ ಮೂಲಕ ಬೆಳೆಸಲಾಗುವುದು. ಆ ಮೂಲಕ ಕೃಷಿಕರ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟ ನಡೆಸಲಾಗುವುದು ಎಂದರು.

ಜಿಪಂ, ತಾಪಂ ಚುನಾವಣೆ: ಕಳೆದ 4 ವರ್ಷಗಳಿಂದ ಜಿಪಂ ಮತ್ತು ತಾಪಂ ಚುನಾವಣೆ ನಡೆಸದೆ ರಾಜ್ಯ ಸರ್ಕಾರ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಕಡೆಗಣಿಸಿದೆ. ಶೀಘ್ರ ಚುನಾವಣೆ ನಡೆಸದಿದ್ದರೆ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಲಾಗುವುದು. ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಎಎಪಿ ಸ್ಪರ್ಧಿಸಲಿದೆ ಎಂದು ಮುಖ್ಯಮಂತ್ರಿ ಚಂದ್ರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ರವಿಕುಮಾರ್, ಭೋಜಣ್ಣ ಸೋಮಯ್ಯ, ಕೊಡಗು ಜಿಲ್ಲಾಧ್ಯಕ್ಷ ಮುಕ್ಕಾಟಿರ ಅಪ್ಪಯ್ಯ ಹಾಗೂ ಕಾರ್ಯದರ್ಶಿ ಹೆಚ್.ಬಿ.ಪೃಥ್ವಿ ಉಪಸ್ಥಿತರಿದ್ದರು.

ಸಭೆಗೆ ಗೈರಾದ ಅಧಿಕಾರಿಗಳನ್ನು ಅಮಾನತುಗೊಳಿಸಿ

ಕಣ್ಣಂಗಾಲ ಗ್ರಾಮ ಪಂಚಾಯಿತಿ ಗ್ರಾಮಸಭೆಯಲ್ಲಿ ಗ್ರಾಮಸ್ಥರ ಒತ್ತಾಯ

> ಸಭೆಯಲ್ಲಿ ಅಭಿವೃದ್ಧಿ ಹಾಗೂ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದ್ದು, ಗ್ರಾಮದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಮುಂದಾಗಬೇಕು. ಕೆಲ ಗಂಭೀರ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ವರದಿ ನೀಡಲಾಗುವುದು. –ಡಾ.ರವಿ, ನೋಡಲ್ ಅಧಿಕಾರಿ

> ಗ್ರಾಮದ ಅಭಿವೃದ್ಧಿ ಬಗ್ಗೆ ಅಧಿಕಾರಿಗಳ ಸಮ್ಮುಖದಲ್ಲಿ ಮುಕ್ತವಾಗಿ ಚರ್ಚಿಸಲಾಗಿದ್ದು, ಗ್ರಾಪಂ ವ್ಯಾಪ್ತಿ ಮತ್ತಷ್ಟು ಅಭಿವೃದ್ಧಿ ಕಾರ್ಯ ನಡೆಯಲು ಗ್ರಾಮಸ್ಥರು ಪಂಚಾಯಿತಿಗೆ ಸಹಕರಿಸಬೇಕು. –ಗ್ರೀಷ್ಮಾ ರಂಜು, ಗ್ರಾಮ ಪಂಚಾಯಿತಿ ಅಧ್ಯಕ್ಷೆ



ಕಣ್ಣಂಗಾಲ ಸರ್ಕಾರಿ ಶಾಲಾ ಸಭಾಂಗಣದಲ್ಲಿ ನಡೆದ ಗ್ರಾಪಂ ಗ್ರಾಮಸಭೆಯಲ್ಲಿ ಅಧ್ಯಕ್ಷೆ ಗ್ರೀಷ್ಮಾ ರಂಜು ಮಾತನಾಡಿದರು.

ಸಿದ್ದಾಪುರ, ಡಿ.22–ಗ್ರಾಮಸಭೆಗೆ ಗೈರಾದ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಸಭೆಯಲ್ಲಿ ಗ್ರಾಮಸ್ಥರು ಒತ್ತಾಯಿಸಿದರು.

ವಿರಾಜಪೇಟೆ ತಾಲೂಕಿನ ಕಣ್ಣಂಗಾಲ ಸರ್ಕಾರಿ ಶಾಲಾ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗ್ರೀಷ್ಮಾ ರಂಜು ಅಧ್ಯಕ್ಷತೆ ಹಾಗೂ ನೋಡಲ್ ಅಧಿಕಾರಿ ಡಾ.ರವಿ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕೆಲ ಅಧಿಕಾರಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಮೊದಲ ಬಾರಿ ನಡೆದ ಸಭೆಗೆ ಅಧಿಕಾರಿಗಳು ಬಾರದ ಹಿನ್ನೆಲೆ ಸಭೆ ಮುಂದೂಡಲಾಗಿತ್ತು. ಇದೀಗ ಎರಡನೇ ಬಾರಿಗೆ ನಡೆಯುತ್ತಿರುವ ಗ್ರಾಮಸಭೆಗೆ ಕೆಲ ಅಧಿಕಾರಿಗಳು ಗೈರಾಗಿದ್ದರು. ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು, ಗ್ರಾಮದ ಅಭಿವೃದ್ಧಿ ಹಾಗೂ ಜನರ ಸಮಸ್ಯೆ ಬಗ್ಗೆ ಚರ್ಚಿಸಲು ಸಭೆಗೆ ಗೈರಾಗುವ ಮೂಲಕ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಂಡು ಸೇವೆಯಿಂದ ಅಮಾನತುಗೊಳಿಸಬೇಕು ಆಗ್ರಹಿಸಿದರು.

ನಂತರ ಗ್ರಾಮಸ್ಥ ಗೋಪಾಲಕೃಷ್ಣ ಮಾತನಾಡಿ, ಕಾಡುಪ್ರಾಣಿಗಳ ಹಾವಳಿ, ಕುಡಿಯುವ ನೀರು, ರಸ್ತೆ ದುರಸ್ತಿ, ಸೇತುವೆ ನಿರ್ಮಾಣ, ಜಲಜೀವನ್ ಮಿಷನ್ ಯೋಜನೆ ಸೇರಿದಂತೆ ಹಲವು ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳು ಮುಂದಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಹಲವು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಇದ್ದು, ಜಲಜೀವನ್ ಮಿಷನ್ ಯೋಜನೆ ಮೂಲಕ ಅಂದಾಜು 90 ಲಕ್ಷ ರೂ. ವೆಚ್ಚದಲ್ಲಿ ಶಾಶ್ವತ ನೀರಿನ ವ್ಯವಸ್ಥೆ ಒದಗಿಸಲು ವರ್ಷಗಳ ಹಿಂದೆ ಗುಂಡಿ ತೆಗೆದು ಕಾಟಾಚಾರಕ್ಕೆ ಪೈಪ್‌ಲೈನ್ ಅಳವಡಿಸಿದ್ದಾರೆ. ಇದೀಗ ಈ ಯೋಜನೆ ಪೈಪ್‌ಲೈನ್‌ಗೆ ಮಾತ್ರ ಸೀಮಿತವಾಗಿದೆ ಹೊರತು ಬೋರ್‌ವೆಲ್, ಟ್ಯಾಂಕ್ ಸೇರಿದಂತೆ ಯಾವುದೇ ಕಾಮಗಾರಿ ಪ್ರಾರಂಭವಾಗಿಲ್ಲ. ಅಧಿಕಾರಿಗಳು ಹಾಗೂ ಗುತ್ತಿಗೆದಾರು ಯೋಜನೆ ಪೂರ್ಣಗೊಳಿಸದೆ ಅಸಹಾಯಕತೆ ತೋರುತ್ತಿದ್ದಾರೆ. ಕೂಡಲೇ ಗುತ್ತಿಗೆದಾರರ ಟೆಂಡರ್ ರದ್ದುಗೊಳಿಸಿ, ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು.

ಗ್ರಾಮೀಣ ಕುಡಿಯುವ ನೀರಿನ ಯೋಜನೆ ಇಂಜಿನಿಯರ್ ರಶ್ಮಿ ಮಾತನಾಡಿ, ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿ ಪೈಪ್‌ಲೈನ್ ಕಾರ್ಯ ಮುಗಿದಿದೆ. 10 ಲಕ್ಷ ರೂ. ಬಿಡುಗಡೆಯಾಗಿದ್ದು, ಬಾಕಿ ಹಣ ಉಳಿದಿದೆ. ನೀರಿನ ಸಮಸ್ಯೆ ಬಗೆಹರಿಸಲು ಸದ್ಯದಲ್ಲೇ ಯೋಜನೆ ಪುನರಾರಂಭಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗುವುದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಥಳೀಯರು, ನೀರಿನ ಅಂಶ ಸಿಗುವ ಸ್ಥಳಗಳನ್ನು ಹುಡುಕದೆ ಕಾಟಾಚಾರಕ್ಕೆ ಬೋರ್‌ವೆಲ್ ಕೊರೆದು ಬಿಡಲಾಗಿದೆ. ಸಮೀಪದಲ್ಲೇ ಕಾವೇರಿ ನದಿ ಇದ್ದರೂ ನೀರಿನ ಸಮಸ್ಯೆ ಬಗೆಹರಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಮಿತಿಮೀರಿದ್ದು, ಕಾರ್ಮಿಕರು, ಬೆಳೆಗಾರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ನಡೆದಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ಕಾಟಾಚಾರಕ್ಕೆ ಆನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಲಾಗುತ್ತದೆ ಆರೋಪಿಸಿದರು.

ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ರಜನಿ ಕುಟ್ಟಪ್ಪ, ಸದಸ್ಯರಾದ ಜೀವನ್, ಕಲ್ಲೇಸ್, ಗಣೇಶ್, ಪೂಣಚ್ಚ, ವನಿತಾ, ಶಾಂತಿ, ಲೋಕೇಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗುರುಶ್ರೀ, ಕಾರ್ಯದರ್ಶಿ ಧಣಿ, ಗ್ರಾಮಸ್ಥರಾದ ರಾಬೀನ್, ಚಿನ್ನಪ್ಪ, ತಿಮ್ಮಯ್ಯ, ಅಜಿತ್, ಸುಬ್ಬಯ್ಯ, ಸುರೇಶ್, ಗಣೇಶ್, ರಂಜು, ದಿನೇಶ್, ಉದಯ, ಪೆಮ್ಮಯ್ಯ, ತಮ್ಮಯ್ಯ, ಈಶ್ವರ ಹಾಜರಿದ್ದರು.

ಶಿಕ್ಷಣ ಸಂಸ್ಥೆಗಳು ಮೌಲ್ಯಾಧರಿತ ಶಿಕ್ಷಣ ನೀಡಬೇಕು



ವಿರಾಜಪೇಟೆ ಸಂತ ಅನ್ನಮ್ಮ ವಿದ್ಯಾಸಂಸ್ಥೆ ವಾರ್ಷಿಕೋತ್ಸವದಲ್ಲಿ ಗಣ್ಯರು ಭಾಗವಹಿಸಿದ್ದರು.

ವಿರಾಜಪೇಟೆ, ಡಿ.22–ಪ್ರತಿಯೊಬ್ಬರು ವಿದ್ಯಾವಂತರಾದಲ್ಲಿ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಜೊತೆಗೆ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಸಮಾಜಕ್ಕೆ ಉತ್ತಮ ವಿದ್ಯಾರ್ಥಿಯನ್ನು ಕೊಡುಗೆ ನೀಡಬೇಕು ಎಂದು ಮೈಸೂರಿನ ಕ್ರಿಶ್ಚಿಯನ್ ಧರ್ಮಗುರು ಡಾ.ಬರ್ನಾಡ್ ಮೋರಸ್ ಹೇಳಿದರು.

ಪಟ್ಟಣದ ಸಂತ ಅನ್ನಮ್ಮ ವಿದ್ಯಾಸಂಸ್ಥೆ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಶಿಕ್ಷಣ ಸಂಸ್ಥೆಗಳು ಮೌಲ್ಯಾಧರಿತ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಮುಂದಾಗಬೇಕು. ಭ್ರಷ್ಟಾಚಾರದಂತಹ ಕೃತ್ಯಗಳು ಸಮಾಜಕ್ಕೆ ಮಾರಕವಾಗಿದೆ. ಸಂತ ಅನ್ನಮ್ಮ ವಿದ್ಯಾಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದೆ. ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸುವಂತಾಗ ಬೇಕು ಎಂದರು.

ಅರಮೇರಿ ಕಳಂಚೇರಿ ಮಠಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಮಾತನಾಡಿ, ಶಿಕ್ಷಣ ಗಳಿಕೆಗೆ ಮಾತ್ರ ಸೀಮಿತವಾಗಬಾರದು. ಸಮಾಜದ ಸೇವೆಗೆ ಉಪಯುಕ್ತವಾದಲ್ಲಿ ಸುಂದರ ಸಮಾಜ ನಿರ್ಮಾಣವಾಗಲು ಸಾಧ್ಯ. ಸಂತ ಅನ್ನಮ್ಮ ವಿದ್ಯಾಸಂಸ್ಥೆ ಶತಮಾನಗಳಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳನ್ನು ಅರಿತು ಶಿಕ್ಷಣ ನೀಡುತ್ತಿದೆ. ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ. ಶಿಕ್ಷಣವನ್ನು ಸೇವಾ ಕಾರ್ಯಕ್ಕೆ ಉಪಯೋಗಿಸಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಎಂಡಿಇಎಸ್ ಕಾರ್ಯದರ್ಶಿ ರೆ.ಫಾ.ಎಡ್ವರ್ಡ್ ವಿಲಿಯಂ ಸಲ್ಡಾನ ಮಾತನಾಡಿ, ರೈತರು ಹೆಚ್ಚಿನ ವಿದ್ಯೆ ಕಲಿತವರಲ್ಲ. ಪ್ರಕೃತಿಗಾಗಿ ಜ್ಞಾನ ಸಂಪಾದಿಸಿದ್ದಾರೆ. ಎಷ್ಟೋ ಪೋಷಕರು ಮಕ್ಕಳ ಮೇಲೆ ಶಿಕ್ಷಣದ ಹೆಸರಿನಲ್ಲಿ ಬಂಡವಾಳ ಹೂಡಿ, ಹಲವು ಕನಸ್ಸು ಕಾಣುತ್ತಿದ್ದಾರೆ. ಹೂಡಿಕೆ ಬದಲು ಅವರಿಗೆ ಬದುಕು ನಡೆಸುವ ಜ್ಞಾನ ಕಲಿಸಬೇಕು ಎಂದರು.

ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಮಾತನಾಡಿದರು. ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಬಿಂದು, ಸಂತ ಅನ್ನಮ್ಮ ದೇವಾಲಯ ಧರ್ಮಗುರು ರೆ. ಫಾ.ಜೇಮ್ಸ್ ಡೊಮಿನಿಕ್, ಪ್ರಾಂಶುಪಾಲರಾದ ರೆ.ಫಾ.ಮುದಲೈ ಮುತ್ತು, ತೃಪ್ತಿ ಬೋಪಣ್ಣ, ಬೆನ್ನಿ ಜೋಸೆಫ್, ಸಿಸ್ಟರ್‌ಗಳಾದ ಐಡಾ, ರೋಸಿ, ಪಾಲಕ ಮತ್ತು ಶಿಕ್ಷಕರ ಸಂಘದ ಉಪಾಧ್ಯಕ್ಷ ಜೋಕಿಂ ರೋಡ್ರಿಗಸ್, ಡಿಸಿಸಿ–ಕೆಡಿಪಿ ಸದಸ್ಯ ಮರ್ವಿನ್ ಲೋಬೋ, ಉಪನ್ಯಾಸಕ ಡಾ.ಹೇಮಂತ್ ಹಾಜರಿದ್ದರು.

ಇದೇ ವೇಳೆ ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಎಲ್‌ಕೆಜಿಯಿಂದ ಸ್ನಾತ್ತಕೋತ್ತರ ಪದವಿವರೆಗಿನ ವಿದ್ಯಾರ್ಥಿಗಳಿಗೆ ಪಾರಿತೋಷಕ ನೀಡಲಾಯಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು.

ಡಿ.26, ವಿಶೇಷ ಶಿಕ್ಷಣ ಕಾರ್ಯಕ್ರಮ

ಮಡಿಕೇರಿ, ಡಿ.22–ರಾಜ್ಯ ಸಹಕಾರ ಮಹಾಮಂಡಳ ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಮಹಿಳಾ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗೆ ಡಿಜಿಟಲ್ ಬ್ಯಾಂಕಿಂಗ್, ಸೈಬರ್ ಭದ್ರತೆ, ಸಹಕಾರ ಕಾಯ್ದೆ–ಕಾನೂನು, ಲೆಕ್ಕಪರಿಶೋಧನೆ ಕುರಿತು ವಿಶೇಷ ಶಿಕ್ಷಣ ಕಾರ್ಯಕ್ರಮವನ್ನು ಡಿ.26ರಂದು ಬೆಳಗ್ಗೆ 11 ಗಂಟೆಗೆ ಕುಶಾಲನಗರ ಎಪಿಸಿಎಂಎಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸುಂಟಿಕೊಪ್ಪ 'ಶ್ರೇಷ್ಠ ಮಹಿಳಾ ಸಹಕಾರಿ' ಪ್ರಶಸ್ತಿ ಪುರಸ್ಕೃತರಾದ ಸರಸು ಪೊನ್ನಪ್ಪ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎ.ಕೆ.ಮನು ಮುತ್ತಪ್ಪ, ಉಪಾಧ್ಯಕ್ಷ ಪಿ.ಸಿ.ಮನು ರಾಮಚಂದ್ರ ಇತರರು ಪಾಲ್ಗೊಳ್ಳಲಿದ್ದಾರೆ.

ಹಸಿರು ನಮ್ಮ ಉಸಿರು

ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ತರಬೇತಿ ಪೂರಕ

ಉಚಿತ ಕಾರ್ಯಾಗಾರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸಲಹೆ



ಚಾಮರಾಜನಗರ ಅಂಬೇಡ್ಕರ್ ಭವನದಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕವಿತಾ ಉದ್ಘಾಟಿಸಿದರು.

ಚಾಮರಾಜನಗರ, ಡಿ.22–ಪರಿಶ್ರಮ, ಶ್ರದ್ಧೆ, ನಂಬಿಕೆ ಇದ್ದಾಗ ಏನು ಬೇಕಾದರೂ ಸಾಧಿಸಬಹುದು. ಯುಪಿಎಸ್‌ಸಿ, ಕೆಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ತರಬೇತಿ ಪೂರಕವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ದೇವರತ್ನ ಫೌಂಡೇಷನ್ ವತಿಯಿಂದ ನಡೆದ 2023–24ನೇ ಸಾಲಿನ ಯುಪಿಎಸ್‌ಸಿ, ಕೆಪಿಎಸ್‌ಸಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸಾಧಕರು ಹೂವಿನ ಹಾಸಿಗೆಯಿಂದ ಬಂದವರಲ್ಲ. ಅವರು ಪರಿಶ್ರಮದಿಂದ ಸಾಧನೆ ಮಾಡಿ ಬಂದವರು. ಹಾಗಾಗಿ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸರ್ಕಾರಿ ಶಾಲೆಯಲ್ಲಿ ಓದಿದವರು, ಇಂಗ್ಲಿಷ್ ಜ್ಞಾನವಿಲ್ಲದಿದ್ದರೂ ಐಎಎಸ್, ಕೆಎಎಸ್ ಪರೀಕ್ಷೆ ಎದುರಿಸಲು ಸಾಧ್ಯವಿದೆ. ಸಾಧಕರು ಹಾಗೂ ಉನ್ನತಾಧಿಕಾರಿಗಳು ಶೇ.90ರಷ್ಟು ಗ್ರಾಮೀಣ ಭಾಗದವರೇ, ಅದರಲ್ಲೂ ಸರ್ಕಾರಿ ಶಾಲೆಯಲ್ಲಿ ಓದಿದವರೇ ಹೆಚ್ಚು. ಗ್ರಾಮೀಣ ಮಕ್ಕಳೇ ಅಪಾರ ಜ್ಞಾನಾರ್ಜನೆ ಹೊಂದಿದ್ದಾರೆ. ಜೀವನ ಹೇಗೆ ನಡೆಸಬೇಕು, ಶ್ರಮದ ಮಹತ್ವ ಏನೆಂಬುವುದನ್ನು ಅರಿತುಕೊಂಡಿದ್ದಾರೆ ಎಂದು ತಿಳಿಸಿದರು.

ಇಂಗ್ಲಿಷ್ ಭಯ ಬಿಡಿ, ಇಂಗ್ಲಿಷ್ ಒಂದು ಭಾಷೆಯಾಗಿದೆ ಅಷ್ಟೇ. ಇಂಗ್ಲಿಷ್ ಬರಲ್ಲ, ಹೇಗೆ ಪರೀಕ್ಷೆ ಬರಲಿ ಎಂಬ ಭಯ ಇದ್ದರೆ ಬಿಟ್ಟುಬಿಡಿ. ದೇವರತ್ನ ಫೌಂಡೇಷನ್ ನೀಡುತ್ತಿರುವ ತರಬೇತಿಯನ್ನು ಸದುಪಯೋಗಪಡಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ದೇಶ, ರಾಜ್ಯದಲ್ಲಿ ಉತ್ತಮ ಸೇವೆ ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ದೇವರತ್ನ ಫೌಂಡೇಷನ್ ಸಂಸ್ಥಾಪಕ ಎಂ.ಶಿವಪ್ರಸಾದ್ ಮಾತನಾಡಿ, ಫೌಂಡೇಷನ್ ಕೇವಲ ಒಂದು ವರ್ಗ, ಜಾತಿಗೆ ಸೀಮಿತವಾಗಿಲ್ಲ. ಬದಲಾಗಿ ಎಲ್ಲಾ ವರ್ಗಗಳ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಹೊಂದಿದೆ ಎಂದರು.

ಎಲ್ಲಾ ವರ್ಗದ ಕಡುಬಡವರಿಗೆ ನೆರವಾಗಬೇಕೆಂಬುದು ಫೌಂಡೇಷನ್ ಆಶಯವಾಗಿದೆ. ಹಮ್ಮಿಕೊಂಡಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ಕಾರ್ಯಾಗಾರವನ್ನು ಶಿಬಿರಾರ್ಥಿಗಳು ಸದುಪಯೋಗಪಡಿಸಿಕೊಂಡು ಪರೀಕ್ಷೆಯಲ್ಲಿ ಪಾಸಾಗಿ ಜನರ ಸೇವೆ ಮಾಡುವಂತಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಫೌಂಡೇಷನ್ ಅಧ್ಯಕ್ಷ ಅವಿನಾಶ್, ತರಬೇತುದಾರ ಸಿ.ವಿ.ಗೋಪಿನಾಥ್, ಮೈಸೂರು ಮತ್ತು ಚಾಮರಾಜನಗರ ವಿಭಾಗದ ಉಸ್ತುವಾರಿ ಶಿವಮೂರ್ತಿ, ಪೋಷಕ ಬಿಲ್ಡರ್ಸ್ ರೇವಣ್ಣ, ಬಿಸಿಎಂ ಇಲಾಖೆ ತಾಲೂಕು ಅಧಿಕಾರಿ ನಿಂಗರಾಜು, ಎಲ್‌ಐಸಿ ಎಸ್.ರಾಜಣ್ಣ, ಆಲೂರು ಮಲ್ಲು, ಬಸವನಪುರ ರಾಜಶೇಖರ್, ಮಾದಪ್ಪ ಮಾದಿಗರ್, ಅರಕಲವಾಡಿ ನಾಗೇಂದ್ರ, ಜಿ.ಎಂ.ಶಂಕರ್, ರಾಮಸಮುದ್ರ ಎಂ.ಶಿವಕುಮಾರ್, ಅರುಂಧತಿ ಕೋ–ಅಪರೇಟಿವ್ ಸೊಸೈಟಿ ಅಧ್ಯಕ್ಷ ಜವರಯ್ಯ ಸುಂದರ್, ವಕೀಲರಾದ ರಾಜೇಶ್, ಸಿದ್ದೇಶ್, ಉಪನ್ಯಾಸಕ ರಮೇಶ್, ಕೋಡಿಪುರ ಮಾದೇಶ್, ರಂಗಸ್ವಾಮಿ, ಡಾ.ಪರಮೇಶ್ವರಪ್ಪ, ಆರ್.ಪಿ.ರಾಚಪ್ಪ, ಕೆಎಸ್‌ಆರ್‌ಟಿಸಿ ನಾಗರಾಜು, ಚಾ.ಗು.ನಾಗರಾಜು, ಹೆಚ್.ಹೆಚ್.ನಾಗರಾಜು, ಕೆಸ್ತೂರು ಮರಪ್ಪ ಸುದೇಶ್, ಪ್ರಸನ್ನಕುಮಾರ್, ರವಿ ಇತರರು ಹಾಜರಿದ್ದರು.

ಅತೂರು ಗ್ರಾಮಕ್ಕೆ ಡಿಹೆಚ್‌ಓ ಭೇಟಿ



ಗೋಪಿನಾಥಂ ಗ್ರಾಪಂ ವ್ಯಾಪ್ತಿಯ ಅತೂರು ಗ್ರಾಮಕ್ಕೆ ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರಂ ಭೇಟಿ ನೀಡಿ, ಪರಿಶೀಲಿಸಿದರು.

ಹನೂರು, ಡಿ22–ತಾಲೂಕಿನ ಗೋಪಿನಾಥಂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡಂಚಿನ ಗ್ರಾಮಗಳ ನಿವಾಸಿಗಳು ಹಾಗೂ ರಾಜ್ಯ ರೈತ ಸಂಘದ ಒತ್ತಾಯದ ಮೇರೆಗೆ ಜಿಲ್ಲಾ ಆರೋಗ್ಯಾಧಿಕಾರಿ ಚಿದಂಬರಂ ಅತೂರು ಗ್ರಾಮಕ್ಕೆ ಭೇಟಿ ನೀಡಿ, ಆಸ್ಪತ್ರೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ನಡೆಸಿದರು.

ಹಿಂದೆ ಗೋಪಿನಾಥಂ ಗ್ರಾಪಂ ವ್ಯಾಪ್ತಿ ನಡೆದ ರೈತ ಸಂಘದ ಗ್ರಾಮಘಟಕ ಉದ್ಘಾಟನೆ ವೇಳೆ ಸಂಘದ ಜಿಲ್ಲಾ ಉಪಾಧ್ಯಕ್ಷ ಗೌಡೇಗೌಡ, ಗ್ರಾಪಂ ವ್ಯಾಪ್ತಿ ಆಸ್ಪತ್ರೆ ಇಲ್ಲದೆ, ಇಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಯಾವುದೇ ಅನಾರೋಗ್ಯ ಸಮಸ್ಯೆ ಕಂಡು ಬಂದರೆ ನೆರೆ ರಾಜ್ಯ ತಮಿಳುನಾಡಿಗೆ ತೆರಳಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಿಸಬೇಕು ಎಂದು ಒತ್ತಾಯಿಸಿದ್ದರು. ಜೊತೆಗೆ ಕಳೆದ ತಿಂಗಳು ಹೊಗೆನಕಲ್‌ಗೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿಗಳ ಗಮನಕ್ಕೂ ಈ ವಿಚಾರ ತರಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಡಿಹೆಚ್‌ಓ ಭೇಟಿ ನೀಡಿದರು.

ಈ ವೇಳೆ ಪಿಡಿಓ ರಾಜಕುಮಾರ್ ಮಾತನಾಡಿ, ಈಗಾಗಲೇ ಗುರುತಿಸಿರುವ ಒಂದು ಎಕರೆ ಜಾಗದಲ್ಲಿ 90 ಸೆಂಟ್ ಜಾಗವನ್ನು ಆಸ್ಪತ್ರೆ ನಿರ್ಮಾಣಕ್ಕೆ ಕೊಡಲು ಸೂಕ್ತ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಡಿಹೆಚ್‌ಓ ಡಾ.ಚಿದಂಬರು ಮಾತನಾಡಿ, ಆಸ್ಪತ್ರೆ ನಿರ್ಮಾಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಗೋಪಿನಾಥಂ ಗ್ರಾಪಂ ವ್ಯಾಪ್ತಿ ಐದು ಸಾವಿರ ಜನಸಂಖ್ಯೆ ಇದ್ದರೂ ಚಿಕಿತ್ಸೆ ಪಡೆಯಲು ನೂರಾರು ಕಿ.ಮೀ. ಕ್ರಮಿಸಬೇಕಿದೆ. ಸಾರಿಗೆ ವ್ಯವಸ್ಥೆ ಇಲ್ಲದಿವುದರಿಂದ ಆಸ್ಪತ್ರೆ ತೆರೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. ಇದೇ ರೀತಿ ಮೀಣ್ಯಂ ಗ್ರಾಪಂ ವ್ಯಾಪ್ತಿ ಕಡಿಮೆ ಜನಸಂಖ್ಯೆಯಿದ್ದರೂ ರೋಗಿಗಳ ಅನುಕೂಲಕ್ಕಾಗಿ ಆಸ್ಪತ್ರೆ ತೆರೆಯಲಾಗಿದೆ ಎಂದರು.

ಸೊಳ್ಳೆ ನಿಯಂತ್ರಣಕ್ಕೆ ಕ್ರಮ: ಮಲೆಮಹದೇಶ್ವರಬೆಟ್ಟ ಗ್ರಾಪಂ ವ್ಯಾಪ್ತಿಯ ನಾಗಮಲೆಯಲ್ಲಿ ತೆರೆದ ಬಾವಿ ನೀರನ್ನು ಗ್ರಾಮಸ್ಥರು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಯಾವುದೇ ರೋಗಗಳು ಗ್ರಾಮಸ್ಥರಿಗೆ ಬಾರದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಸೊಳ್ಳೆ ನಿಯಂತ್ರಿಸಲು 300ಕ್ಕೂ ಹೆಚ್ಚು ಮೀನಿನ ಮರಿಗಳನ್ನು ಕೆರೆಗೆ ಬಿಡಲಾಗಿದೆ ಎಂದರು.

ಇದೇ ವೇಳೆ ಹಿರಿಯ ಆರೋಗ್ಯ ನಿರೀಕ್ಷಕ ನಿಂಬೇಶ್, ಎಲ್‌ಹೆಚ್‌ವಿ ನಾಗಮ್ಮ, ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷ ವೀರಭದ್ರಸ್ವಾಮಿ ಇನ್ನಿತರರು ಹಾಜರಿದ್ದರು.

ಜಿಲ್ಲಾ ವಕೀಲರ ಸಂಘ ಪ್ರತಿಭಟನೆ



ಚಾಮರಾಜನಗರದಲ್ಲಿ ವಕೀಲರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಡಿ.22–ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಅವಹೇಳಕಾರಿ ಹೇಳಿಕೆ ನೀಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಜಿಲ್ಲಾ ವಕೀಲರ ಸಂಘದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ನ್ಯಾಯಾಲಯ ಆವರಣದ ವಕೀಲರ ಸಂಘದ ಸಭಾಂಗಣದಲ್ಲಿ ಸಭೆ ಸೇರಿದ ವಕೀಲರು, ನ್ಯಾಯಾಲಯ ಕಲಾಪದಿಂದ ಹೊರಗುಳಿಯಲು ತೀರ್ಮಾನಿಸಿದರು. ಬಳಿಕ ಅಲ್ಲಿಂದ ಬೈಕ್ ರ್‍ಯಾಲಿ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ನಂತರ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ ಮಾತನಾಡಿ, ಅಂಬೇಡ್ಕರ್ ಅವರನ್ನು ಅವಮಾನಿಸುವಂತಹ ಹೇಳಿಕೆ ನೀಡಿರುವ ಅಮಿತ್ ಶಾ ವಿರುದ್ಧ ಕ್ರಮ ವಹಿಸದಿರುವುದು ಕೇಂದ್ರ ಸರ್ಕಾರಕ್ಕೆ ಕಪ್ಪು ಚುಕ್ಕಿಯಾಗಿದೆ. ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾಗೊಳಿಸಿ, ಗಡಿಪಾರು ಮಾಡುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ವಕೀಲರಾದ ನೋಟರಿ ನಾಗಣ್ಣ, ಮಾದೇಶ್, ಪೃಥ್ವಿ ನಾಗಾರ್ಜುನ, ಸುಂದರ್, ಶ್ರೀನಿವಾಸ, ಮಹೇಂದ್ರ, ವನಜಾಕ್ಷಿ, ಶ್ವೇತಾ, ಮಲ್ಲು, ಜಗದೀಶ್, ಮಾದೇಶ್ ಇತರರಿದ್ದರು.

ತಿರುಪತಿ ಮಾದರಿ ಮ.ಬೆಟ್ಟ ಅಭಿವೃದ್ಧಿ

ಟಿಟಿಡಿ ವ್ಯವಸ್ಥಾಪಕರಿಂದ ಮಾಹಿತಿ ಪಡೆದ ಶಾಸಕ ಮಂಜುನಾಥ್, ಡಿಸಿ ಶಿಲ್ಪನಾಗ್



ತಿರುಪತಿ ಮಾದರಿಯಲ್ಲಿ ಮ.ಬೆಟ್ಟ ಅಭಿವೃದ್ಧಿಗೆ ಶಾಸಕ ಎಂ.ಆರ್.ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಟಿಟಿಡಿ ವ್ಯವಸ್ಥಾಪಕರಿಂದ ಮಾಹಿತಿ ಪಡೆದರು.

ಹನೂರು, ಡಿ.22–ತಿರುಪತಿ ಮಾದರಿಯಲ್ಲಿ ಶ್ರೀಕ್ಷೇತ್ರ ಮಲೆಮಹದೇಶ್ವರಬೆಟ್ಟ ಅಭಿವೃದ್ಧಿ ಪಡಿಸಲು ತಿರುಪತಿಗೆ ಶಾಸಕ ಎಂ.ಆರ್.ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಭೇಟಿ ನೀಡಿ, ಅಲ್ಲಿನ ಟಿಟಿಡಿ ವ್ಯವಸ್ಥಾಪಕರಿಂದ ಮಾಹಿತಿ ಪಡೆದರು.

ಆಂಧ್ರಪ್ರದೇಶದ ತಿರುಪತಿ ದೇವಾಲಯಕ್ಕೆ ಶಾಸಕ ಮಂಜುನಾಥ್ ಹಾಗೂ ಡಿಸಿ ಶಿಲ್ಪನಾಗ್, ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎಇ ರಘು ಹಾಗೂ ಎಇಇ ಮಹೇಶ್ ಕುಮಾರ್ ಅವರು ಅಲ್ಲಿನ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ತಿರುಪತಿ ದೇವಾಲಯದ ಟಿಟಿಡಿ ಧಾರ್ಮಿಕ ದತ್ತಿ ಇಲಾಖೆ ವ್ಯವಸ್ಥಾಪಕ ಕೋದಂಡರಾಮ ಅವರಿಂದ ತಿರುಪತಿಗೆ ಬರುವ ಭಕ್ತರಿಗೆ ಸುಗಮ ವ್ಯವಸ್ಥೆ, ದಾಸೋಹ ಭವನ ಮತ್ತು ಅಡುಗೆಮನೆ ಸೇರಿದಂತೆ ಕ್ಯೂ ಕಾಂಪ್ಲೆಕ್ಸ್, ದೇವಾಲಯ ಮುಂಭಾಗದ ಕಲ್ಯಾಣಿ ಸೇರಿದಂತೆ ವಿವಿಧ ಮಾಹಿತಿ ಪಡೆದರು.

ರಸ್ತೆ ಅಭಿವೃದ್ಧಿಗೆ ಚರ್ಚೆ: ತಿರುಪತಿ ಮಾದರಿಯಲ್ಲಿ ತಾಳುಬೆಟ್ಟದಿಂದ ಮಹದೇಶ್ವರಬೆಟ್ಟದವರೆಗೆ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಇದೇ ವೇಳೆ ಚರ್ಚಿಸಲಾಯಿತು. ಜೊತೆಗೆ ಈ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಿ, ಮ.ಬೆಟ್ಟ ಅಭಿವೃದ್ಧಿಪಡಿಸಲು ಮುಖ್ಯಮಂತ್ರಿಗಳ ಗಮನಕ್ಕೆ ತರಲು ಅಲ್ಲಿನ ರೂಪು ರೇಷೆಗಳನ್ನು ತಿಳಿಯಲಾಯಿತು. ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸಲು ಶಾಸಕರು ಹಾಗೂ ಜಿಲ್ಲಾಧಿಕಾರಿ ಅಲ್ಲಿನ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅರ್ಜಿ ಆಹ್ವಾನ

ಚಾಮರಾಜನಗರ: ತೋಟಗಾರಿಕೆ ಇಲಾಖೆಯಿಂದ 2024–25ನೇ ಸಾಲಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿ(ಸಿಡಿಬಿ) ಮತ್ತು ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಸಹಯೋಗದಲ್ಲಿ ಕೇರ ಸುರಕ್ಷಾ ಇನ್ಶೂರೆನ್ಸ್ ಸ್ಕೀಮ್ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ 18 ರಿಂದ 65 ವರ್ಷದೊಳಗಿನ ತೆಂಗಿನ ಮರ ಹತ್ತುವವರು, ನೀರಾ ತೆಯುವವರು, ತೆಂಗಿನಕಾಯಿ ಕೀಳುವವರು, ನೀರಾ ಟ್ಯಾಪರ್ಸ್‌ಗೆ, ಹೈ ಬ್ರಿಡೈಜೇಷನ್ ಕೆಲಸಗಾರರು ಈ ಯೋಜನೆಗೆ ಒಳಪಡಲಿದ್ದಾರೆ. ಮಾಹಿತಿ ಹಾಗೂ ಅರ್ಜಿಗಾಗಿ ಆಯಾ ತಾಲೂಕಿನ ಹಿರಿಯ ತೋಟಗಾರಿಕೆ ನಿರ್ದೇಶಕರ ಕಚೇರಿಯ ತಾಂತ್ರಿಕ ಸಿಬ್ಬಂದಿಯನ್ನು ಸಂಪರ್ಕಿಸಬಹುದು ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

12ನೇ ವಾರ್ಡ್‌ನಲ್ಲಿ ಕಸದ ಬುಟ್ಟಿ ವಿತರಣೆ...



ಚಾಮರಾಜನಗರ 12ನೇ ವಾರ್ಡ್‌ನಲ್ಲಿ ಸ್ವಚ್ಛ ಸರ್ವೇಕ್ಷಣ್ ಅಭಿಯಾನದಡಿ ಕಸದ ಬುಟ್ಟಿಗಳನ್ನು ನಗರಸಭೆ ಅಧ್ಯಕ್ಷ ಎಸ್.ಸುರೇಶ್ ನೇತೃತ್ವದಲ್ಲಿ ವಿತರಿಸಲಾಯಿತು. ಸದಸ್ಯರಾದ ಎಂ.ಮಹೇಶ್, ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ವಾರ್ಡ್ ನಿವಾಸಿಗಳು ಹಾಜರಿದ್ದರು.

ದಿಢೀರ್ ನಿವೃತ್ತಿ ಘೋಷಿಸಿದ್ದ ಕ್ರಿಕೆಟಿಗ ಆರ್.ಅಶ್ವಿನ್‌ಗೆ ಪ್ರಧಾನಿ ಮೋದಿಯಿಂದ ಅಭಿನಂದನಾ ಪತ್ರ



ನರೇಂದ್ರ ಮೋದಿ ರವಿಚಂದ್ರನ್ ಅಶ್ವಿನ್

ನವದೆಹಲಿ, ಡಿ.22- ಭಾರತ ತಂಡದ ದಿಗ್ಗಟ ಆಟಗಾರ ರವಿಚಂದ್ರನ್ ಅಶ್ವಿನ್ ತಮ್ಮ ಸುದೀರ್ಘ 14 ವರ್ಷಗಳ ಅಂತರರಾಷ್ಟ್ರೀಯ ಕ್ರಿಕೆಟ್ ವೃತ್ತಿಜೀವನಕ್ಕೆ ವಿದಾಯ ಹೇಳಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದಾರೆ.

ಈ ಕುರಿತು ಪತ್ರವೊಂದನ್ನು ಹಂಚಿಕೊಂಡಿರುವ ಪ್ರಧಾನಿ, ಅಶ್ವಿನ್ ಅವರ ಅದ್ಭುತ ವೃತ್ತಿಜೀವನವನ್ನು ಶ್ಲಾಘಿಸಿದ್ದಾರೆ. ತಮ್ಮ ಆಫ್-ಸ್ಪಿನ್ ಮತ್ತು ನವೀನ ಬದಲಾವಣೆಗಳೊಂದಿಗೆ ಬ್ಯಾಟ್ಸ್‌ಮನ್‌ಗಳನ್ನು ಮೀರಿಸುವ ಅವರ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ತಾವು ತಂಡಕ್ಕಾಗಿ ಆಡುತ್ತಿದ್ದ ರೀತಿಯನ್ನು ನೆನಪಿಸಿಕೊಂಡ ಮೋದಿ, ಅಶ್ವಿನ್ ಅವರ ಬದ್ಧತೆಯನ್ನು ಶ್ಲಾಘಿಸಿದ್ದಾರೆ. ಅಶ್ವಿನ್ ಅವರ ಐಕಾನಿಕ್ ಜೆರ್ಸಿ ಸಂಖ್ಯೆ 99 ಅನ್ನು ಅಭಿಮಾನಿಗಳು ಮತ್ತು ತಂಡದ ಸಹ ಆಟಗಾರರು ಸಹ ಮಿಸ್ ಮಾಡಿಕೊಳ್ಳುತ್ತಾರೆ ಎಂದಿದ್ದಾರೆ.

ಕೇರಂ ಬಾಲ್ ಸ್ಪೆಷಲಿಸ್ಟ್ ಅಶ್ವಿನ್: ಆರ್ ಅಶ್ವಿನ್ ಅವರು ಕೇರಂ ಬಾಲ್ ಸ್ಪೆಷಲಿಸ್ಟ್ ಎಂದೇ ಗುರುತಿಸಿಕೊಂಡಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿರುವ ನಿಮ್ಮ ನಿರ್ಧಾರವು ಭಾರತ ಮತ್ತು ಪ್ರಪಂಚದಾದ್ಯಂತ ಇರುವ ಅಭಿಮಾನಿಗಳಿಗೆ ಆಶ್ಚರ್ಯ ಉಂಟುಮಾಡಿದೆ. ಎಲ್ಲರೂ ನಿಮ್ಮಿಂದ ಇನ್ನೂ ಅನೇಕ ಆಫ್-ಬ್ರೇಕ್‌ಗಳಿಗಾಗಿ ಎದುರು ನೋಡುತ್ತಿದ್ದರು. ಇಂತಹ ಸಮಯದಲ್ಲಿ ನೀವು ಕೇರಂ ಬಾಲ್ ಅನ್ನು ಎಸೆಯುವ ಮೂಲಕ ಎಲ್ಲರನ್ನೂ ಆಶ್ಚರ್ಯಕ್ಕೀಡುಮಾಡಿದ್ದೀರಿ ಎಂದು ಪ್ರಧಾನಿ ಮೋದಿ ಬರೆದಿದ್ದಾರೆ.

ನಿಮ್ಮ ವೃತ್ತಿ ಜೀವನದುದ್ದಕ್ಕೂ ಭಾರತಕ್ಕಾಗಿ ನೀವು ಅಭೂತಪೂರ್ವವಾಗಿ ಆಡಿದ ಬಳಿಕ ನಿವೃತ್ತಿ ಘೋಷಿಸುವ ನಿರ್ಧಾರ ತೆಗೆದುಕೊಳ್ಳುವುದು ನಿಮಗೆ ಕಷ್ಟವಾಗಿತ್ತು ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳುತ್ತಾರೆ. ಭಾರತ ತಂಡದ ಪರ ಸಾಕಷ್ಟು ಪಂದ್ಯಗಳಲ್ಲಿ ಆಡಿ ತಂಡದ ಗೆಲುವಿನಲ್ಲಿ ಪಾತ್ರ ವಹಿಸಿದ್ದೀರಿ ಎಂದು ಮೋದಿ ಕೊಂಡಾಡಿದ್ದಾರೆ.

ಅಶ್ವಿನ್ ಕುಟುಂಬಕ್ಕೆ ಅಭಿನಂದನೆ: ಪ್ರಧಾನಿ ಮೋದಿ ಅವರು ಅಶ್ವಿನ್ ಅವರ ಕುಟುಂಬಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅವರ ಯಶಸ್ಸಿನಲ್ಲಿ ಅವರ ಪತ್ನಿ ಪ್ರೀತಿ ಮತ್ತು ಅವರ ಇಬ್ಬರು ಮಕ್ಕಳು ಮತ್ತು ಪೋಷಕರು ವಹಿಸಿದ ನಿರ್ಣಾಯಕ ಪಾತ್ರವನ್ನು ಗುರುತಿಸಿದ್ದಾರೆ. ಅಶ್ವಿನ್ ಅವರು ತಮ್ಮ ಪ್ರೀತಿಪಾತ್ರರಿಗೆ ಹೆಚ್ಚಿನ ಸಮಯ ನೀಡುವ ಮೂಲಕ ಮತ್ತು ಆಟಕ್ಕೆ ತಮ್ಮ ಕೊಡುಗೆಗಳನ್ನು ನೀಡುವ ಮೂಲಕ ಭವಿಷ್ಯವನ್ನು ಪೂರೈಸಲಿ ಎಂದು ಪ್ರಧಾನಿ ಹಾರೈಸಿದರು.

ನೀವು ಇಷ್ಟು ವರ್ಷ ಪ್ರೀತಿಸಿರುವ ಆಟಕ್ಕೆ ಇನ್ನುಂದೆಯೂ ಕೊಡುಗೆ ನೀಡುವುದನ್ನು ಮುಂದುವರಿಸಲು ನೀವು ಹೊಸ ಮಾರ್ಗಗಳನ್ನು ಕಂಡುಕೊಳ್ಳಬಹುದು. ನಿಮ್ಮ ಅತ್ಯುತ್ತಮ ವೃತ್ತಿಜೀವನಕ್ಕೆ ಮತ್ತೊಮ್ಮೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ನಿಮ್ಮ ಮುಂದಿನ ಜೀವನಕ್ಕೆ ಶುಭಾಶಯಗಳು ಎಂದು ಮೋದಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕನ್ನಡ ಉಳಿಸಲು ಹೋರಾಟ ಅತ್ಯಗತ್ಯ

ಆದರೆ, ಇಂದಿನ ಚಿತ್ರಗೀತೆಗಳನ್ನು ವಿಮರ್ಶೆ ಮಾಡಲು ಸಹ ಆಗುವುದಿಲ್ಲ. ಇಂದಿನ ಚಿತ್ರಸಾಹಿತಿಗಳು ಕುವೆಂಪು ಅವರ 'ಸರ್ವಜನಾಂಗದ ಶಾಂತಿಯ ತೋಟ' ಎಂಬ ವಾಕ್ಯವನ್ನು ನೆನಪಿನಲ್ಲಿಟ್ಟುಕೊಂಡು ಸಾಹಿತ್ಯಗಳನ್ನು ರಚಿಸಲಿ ಎಂದು ಸಲಹೆ ನೀಡಿದರು. ಪ್ರಸ್ತುತ ಸಮಾಜದಲ್ಲಿ ತಂದೆ-ಮಗ, ಅಣ್ಣ- ತಮ್ಮ ಅಥವಾ ಅಕ್ಕ-ತಂಗಿಯ ನಡುವಿನ ಸಂಬಂಧ ನಶಿಸಿ ಹೋಗುತ್ತಿದೆ. ಈ ಪೀಳಿಗೆಯ ನಮ್ಮ ಮಕ್ಕಳಲ್ಲಿ ರಕ್ತಸಂಬಂಧದ ಬಾಂಧವ್ಯ ನೋಡಲು ಕಷ್ಟವಾಗಿದೆ. ಹಿಂದೆ ಅವಿಭಕ್ತ ಕುಟುಂಬದಲ್ಲಿದ್ದ ಸಹಪಂಕ್ತಿ ಭೋಜನ ಇಂದು ಕಾಣಸಿಗುವುದಿಲ್ಲ. ಪ್ರತಿಯೊಬ್ಬರಿಗೂ ವೈಭೋಗವಿದೆ. ಶಾಂತಿಯುತ ಬದುಕಿಲ್ಲ. ಹಿಂದೆ ಮೂಲಸೌಕರ್ಯ ಇಲ್ಲದಿದ್ದರೂ ನೆಮ್ಮದಿಯ ಬದುಕಿತ್ತು. ಈಗ ನೆಮ್ಮದಿಯ ಬದುಕನ್ನು ನಮ್ಮ ಇಂದಿನ ಪೀಳಿಗೆ ಹುಡುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

ಕೇಂದ್ರ ಸಚಿವನಾಗಿರುವ ನಾನು ನಮ್ಮ ಈ ಭಾಗದ ಜನರ ಋಣ ತೀರಿಸಲು ಸಿದ್ಧನಾಗಿದ್ದು, ಹಲವು ಕಾರ್ಖಾನೆಗಳನ್ನು ತರಲು ಚಿಂತಿಸಿದ್ದೇನೆ. ಇದಕ್ಕೆ ರಾಜ್ಯ ಸರ್ಕಾರದ ಬೆಂಬಲ ಬೇಕು. ಭದ್ರಾವತಿ ಉಕ್ಕಿನ ಕಾಖಾನೆ ಅಭಿವೃದ್ಧಿಗೆ ಹಾಗೂ ಬೆಂಗಳೂರಿನ ಎಚ್‌ಎಂಟಿ ವಾಚ್ ಕಾರ್ಖಾನೆಯ ಪುನಶ್ಚೇತನಕ್ಕೆ ನಾನು ಸಿದ್ಧನಿದ್ದು, ಮತ್ತಷ್ಟು ಕಾರ್ಖಾನೆ ಸ್ಥಾಪಿಸಲು ಉತ್ಸುಕನಾಗಿದ್ದೇನೆ ಎಂದು ತಿಳಿಸಿದರು.

ಆದಿಚುಂಚನಗಿರಿ ಮಠಾಧೀಶ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಮಾತನಾಡಿ, ಜಗತ್ತಿನ ಇತಿಹಾಸದಲ್ಲಿ ಸೃಷ್ಟಿ ವಿಕಾಸದ ಪ್ರಕ್ರಿಯೆಯಲ್ಲಿ ದೊಡ್ಡ ಕೊಡುಗೆ ಭಾಷೆಯಾಗಿದೆ. ಮನುಷ್ಯನಿಗೂ ಜೀವಿಗೂ ವ್ಯತ್ಯಾಸವೆಂದರೆ ಅದು ಭಾಷೆ. ಆ ನಿಟ್ಟಿನಲ್ಲಿ ಮನುಷ್ಯನಿಗೆ ಅಸ್ಮಿತೆಕೊಟ್ಟ ಕನ್ನಡ ವನ್ನು ನಾವು ಸದಾ ಕಾಲ ಸ್ಮರಿಸಬೇಕು ಎಂದರು.

ರಾಷ್ಟ್ರಕವಿ ಕುವೆಂಪು ಅವರ ಮೊದಲ ಸಾಹಿತ್ಯವು ಸಹ ಆಂಗ್ಲವಾಗಿತ್ತು. ಆದರೆ ಅದನ್ನು ವಿದ್ವಾಂಸ ಜೇಮ್ಸ್ ಕಸೀನ್ ಅವರಿಗೆ ಪುಟ್ಟಪ್ಪನವರು ತೋರಿಸಿದಾಗ ನಿನ್ನ ಭಾಷೆಯಲ್ಲಿ ಸಾಹಿತ್ಯ ರಚಿಸುವಂತೆ ಸಲಹೆ ನೀಡಿದ್ದರು. ಭಾಷೆ ಶ್ರೇಷ್ಠವಾಗದಿದ್ದರೂ ಭಾಷಾ ಬೆಳವಣಿಗೆಗೆ ಒಬ್ಬ ಶ್ರೇಷ್ಠರು ಸಿಗಬೇಕೆಂದು ಕಸೀನ್ ಕುವೆಂಪು ಅವರಿಗೆ ಸಲಹೆ ನೀಡಿದ್ದರು. ಬಳಿಕ ಕುವೆಂಪು ಮಾಡಿದ್ದು ಕರ್ನಾಟಕದಲ್ಲಿ ಇತಿಹಾಸ ಎಂದು ಬಣ್ಣಿಸಿದರು.

ವೇದಿಕೆಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಗೋ.ರು.ಚನ್ನಬಸಪ್ಪ, ತುಮಕೂರಿನ ಸಿದ್ದಗಂಗಾ ಸ್ವಾಮೀಜಿ, ಚಿಕ್ಕಮಗಳೂರಿನ ಗೌರಿಗದ್ದೆ ಮಠದ ವಿನಯ್‌ಗುರೂಜಿ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ನಿಕಟ ಪೂರ್ವ ಸಮ್ಮೇಳನಾಧ್ಯಕ್ಷ ಪ್ರೊ.ದೊಡ್ಡರಂಗೇಗೌಡ, ಖ್ಯಾತ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಹೆಚ್.ಟಿ.ಮಂಜು, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ಕೆ.ವಿವೇಕಾನಂದ, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಡಾ.ಕೆ. ಅನ್ನದಾನಿ, ಕೆ.ಟಿ.ಶ್ರೀಕಂಠೇಗೌಡ, ಸಂಸದ ನಾರಾಯಣಸ್ವಾಮಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಷಿ, ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್, ಉಪಾಧ್ಯಕ್ಷ ಎಂ.ಪಿ. ಅರುಣ್ ಕುಮಾರ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮನ್ಮುಲ್ ಅಧ್ಯಕ್ಷ ಬೋರೇಗೌಡ, ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಒ ಶೇಖ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಸಾಲ ಮಾಡಿದ್ದ ಕೊಲೆ ಪಾತಕಿ

ಯಂತ್ರ ಬೇಡ ಎಂದು ಆತನನ್ನು ವಾಪಸ್ ಕಳುಹಿಸಿದ್ದೆ ಎಂದು ತಿಳಿಸಿದ್ದಾರೆ. ಬಳಿಕ ಕ್ಯಾತನಹಳ್ಳಿ ಬಳಿಯ ಒಂಟಿ ಮನೆಗೆ ಬಂದಿದ್ದ. ರಾಜ್ಯ ಹೆದ್ದಾರಿ ಪಕ್ಕದಲ್ಲಿಯೇ ಇದ್ದ ತೋಟದ ಮನೆಯಲ್ಲಿ ವಯಸ್ಸಾದ ದಂಪತಿ ಇದ್ದಿದ್ದರಿಂದ ಕೊಲೆಗೈದು ದರೋಡೆಗೆ ಯತ್ನಿಸಿದ್ದ. ಗಂಭೀರ ಗಾಯದ ನಡುವೆಯೂ ಯಶೋದಮ್ಮ ಮನೆಯಿಂದ ಹೊರಬಂದು ಬಾಗಿಲು ಲಾಕ್ ಮಾಡಿದ್ದರು. ಇತ್ತ ಮನೆಯ ಒಳಗೆಯಿಂದ ರಮೇಶ್ ಬರ್ಬರ ಹತ್ಯೆ ಮಾಡಿದ್ದಾನೆ. ಮನಸೋ ಇಚ್ಛೆ ಮರ ಕತ್ತರಿಸುವ ಯಂತ್ರದಿಂದ ರಮೇಶ್ ಕೊಲೆ ಮಾಡಿದ್ದಾನೆ.

ಬೆಳೆ; ಇಸ್ರೋ ಪ್ರಯೋಗ

ಮುಚ್ಚಿದ ಪೆಟ್ಟಿಗೆಯ ಪರಿಸರದಲ್ಲಿ ಎಂಟು ಅಲಸಂದೆ ಕಾಳುಗಳನ್ನು ಮೊಳಕೆಯೊಡೆಸಿ, ಎರಡು ಎಲೆಗಳು ಬರುವ ಹಂತದವರೆಗೆ ಸಸಿಯನ್ನು ಬೆಳೆಸಲು ಇಸ್ರೊ ಯೋಜಿಸಿದೆ. ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರವು (ವಿಎಸ್‌ಎಸ್‌ಸಿ) ಅಭಿವೃದ್ಧಿಪಡಿಸಿರುವ ಕಾಂಪ್ಯಾಕ್ಟ್ ರಿಸರ್ಚ್ ಮಾಡ್ಯೂಲ್ ಫಾರ್ ಆರ್ಬಿಟಲ್ ಪ್ಲಾಂಟ್ ಸ್ಟಡೀಸ್ (ಸಿಆರ್‌ಒಪಿಎಸ್) ಭಾಗವಾಗಿ ಈ ಪ್ರಯೋಗ ನಡೆಯಲಿದೆ.

ಮುಂಬೈನ ಅಮಿಟಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಅಮಿಟಿ ಪ್ಲಾಂಟ್ ಎಕ್ಸ್‌ಪರಿಮೆಂಟಲ್ ಮಾಡ್ಯೂಲ್ ಇನ್ ಸ್ಪೇಸ್ (ಎಪಿಇಎಂಎಸ್), ಬಾಹ್ಯಾಕಾಶದ ಮೈಕ್ರೊಗ್ರಾವಿಟಿ ಪರಿಸರವು ಪಾಲಕ್ ಸಸಿಗಳ ಬೆಳವಣಿಗೆಯ ಮೇಲೆ ಹೇಗೆ ಪರಿಣಾಮ ಬೀರಲಿದೆ ಎಂದು ಅಧ್ಯಯನ ನಡೆಸಲಿದೆ. ಈ ಎರಡೂ ಪ್ರಯೋಗಗಳು (ಬಾಹ್ಯಾಕಾಶದಲ್ಲಿ ಪಿಒಇಎಂ-4 ಮತ್ತು ಭೂಮಿಯಲ್ಲಿ ಅಮಿಟಿ ವಿ.ವಿ) ಏಕಕಾಲದಲ್ಲಿ ನಡೆಯಲಿವೆ. ಸಸ್ಯಗಳು ಗುರುತ್ವಾಕರ್ಷಣೆ ಮತ್ತು ಬೆಳಕಿನ ದಿಕ್ಕನ್ನು ಹೇಗೆ ಗ್ರಹಿಸುತ್ತವೆ ಎಂಬುದರ ಕುರಿತ ಒಳನೋಟವನ್ನು ಈ ಪ್ರಯೋಗದ ಫಲಿತಾಂಶವು ನೀಡಲಿದೆ. ವಿಎಸ್‌ಎಸ್‌ಸಿ ಅಭಿವೃದ್ಧಿಪಡಿಸಿರುವ 'ಡೆಬ್ರಿಸ್ ಕ್ಯಾಪ್ಚರ್ ರೋಬಾಟಿಕ್ ಮ್ಯಾನಿಪುಲೇಟರ್' ಬಾಹ್ಯಾಕಾಶದಲ್ಲಿರುವ ಅವಶೇಷಗಳನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜಾಗತಿಕ ಲಿಂಗಾಯತ ಮಹಾಸಭಾ

ವೀರಶೈವ ಲಿಂಗಾಯತ ಮಹಾಸಭಾಕ್ಕೆ ಪರ್ಯಾಯವಲ್ಲ

ಲಿಂಗಾಯತ ಧರ್ಮ ಜಾಗೃತಿ ಸಮಾವೇಶದಲ್ಲಿ ಮದ್ದಾಗರಲಿಂಗಯ್ಯನಹುಂಡಿ ವಿರಕ್ತ ಮಠದ ಶ್ರೀಗೌರಿ ಶಂಕರಸ್ವಾಮೀಜಿ


ತಿ.ನರಸೀಪುರ, ಡಿ.22– ಜಾಗತಿಕ ಲಿಂಗಾಯತ ಮಹಾಸಭಾ ವೀರಶೈವ ಲಿಂಗಾಯತ ಮಹಾಸಭಾಕ್ಕೆ ಪರ್ಯಾಯ ಸಂಘವಲ್ಲ ಎಂದು ಮದ್ದಾಗರಲಿಂಗಯ್ಯನಹುಂಡಿ ವಿರಕ್ತ ಮಠದ ಶ್ರೀಗೌರಿ ಶಂಕರಸ್ವಾಮೀಜಿ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಭಾನುವಾರ ಜಾಗತಿಕ ಲಿಂಗಾಯತ ಮಹಾಸಭಾ ತಿ.ನರಸೀಪುರ ತಾಲೂಕು ಘಟಕದಿಂದ ಆಯೋಜಿಸಿದ್ದ ಲಿಂಗಾಯತ ಧರ್ಮ ಜಾಗೃತಿ ಸಮಾವೇಶ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಜಾಗತಿಕ ಲಿಂಗಾಯತ ಮಹಾಸಭಾ ವೀರಶೈವ ಮಹಾಸಭಾಕ್ಕೆ ಪರ್ಯಾಯವಾಗಿ ಅಸ್ತಿತ್ವಕ್ಕೆ ಬಂದಿದ್ದಲ್ಲ. ಬಸವಣ್ಣನವರ ಆದರ್ಶ, ತತ್ವ ಸಿದ್ಧಾಂತ, ಶರಣ ಪರಂಪರೆ ತಿಳಿಸಿಕೊಡುವುದೇ ಜಾಗತಿಕ ಲಿಂಗಾಯತ ಮಹಾಸಭಾದ ಉದ್ದೇಶ. ನಮ್ಮದೇನಿದ್ದರೂ ಬಸವ ಮಾರ್ಗ, ಮೌಢ್ಯತೆಗಳ ವಿರುದ್ಧ ನಮ್ಮ ಹೋರಾಟವೇ ಹೊರತು ಲಿಂಗಾಯತ ಮಹಾಸಭೆ ವಿರುದ್ಧವಲ್ಲ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಹಿತಾಸಕ್ತಿಗಾಗಿ ಜಾಗತಿಕ ಲಿಂಗಾಯತ ಮಹಾಸಭೆ ಲಿಂಗಾಯತ ಮಹಾಸಭೆಗೆ ಪರ್ಯಾಯ ಎಂದು ಬಿಂಬಿಸುವ ಕೆಲಸದಲ್ಲಿ ನಿರತರಾಗಿದ್ದು, ಖಂಡಿತವಾಗಿಯೂ ನಮ್ಮದು ಯಾವುದೇ ಸಂಘದ ಪರ್ಯಾಯ ಸಂಘವಲ್ಲ ಎಂದು ಸ್ಪಷ್ಟಪಡಿಸಿದರು.

ಬಸವಣ್ಣನವರು ಅಂದು ಅನುಭವ ಮಂಟಪ ಸ್ಥಾಪಿಸಿ ಎಲ್ಲಾ ಜಾತಿ, ಜನಾಂಗದವರನ್ನು ಒಗ್ಗೂಡಿಸಿ ಮೌಢ್ಯಗಳ ವಿರುದ್ಧ ಹೋರಾಟ ಮಾಡಿದ್ದರೋ ಇಂದು ಅದೇ ಉದ್ದೇಶದೊಂದಿಗೆ ನಾವು ಅದೇ ಕೆಲಸ ಮಾಡಲು ಹೊರಟಿದ್ದೇವೆ. ನಾವು ಲಿಂಗವಂತರಾಗಿ ನಿತ್ಯ ಬೇರೆ ದೇವರನ್ನು ಪೂಜೆ ಮಾಡುತ್ತಿವಲ್ಲ ಅದೇ ಮೌಢ್ಯತೆಯಾಗಿದೆ ಎಂದರು.

ಮತೀಯವಾದಿಗಳಿಂದ ಬಿಡಿಸಲು ಬಸವಣ್ಣನವರು ಉತ್ತಮ ಸಮಾಜ ನಿರ್ಮಾಣ ಮಾಡಿದರು. ರೈತರನ್ನು ಮತೀಯವಾದಿಗಳು ಶೂದ್ರರೆಂದು ಕರೆಯುತ್ತಿದ್ದರು. ರೈತ ದೇಶಕ್ಕೆ ಅನ್ನಕೊಡುವ ಅನ್ನದಾತ ಆತ ಶೂದ್ರನಾಗಲು ಸಾಧ್ಯವೇ? ವೈದ್ಯರು, ವಕೀಲರು, ಉಪನ್ಯಾಸಕರು, ರಾಜಕಾರಣಿಗಳು ಕೊನೆಗೆ ಮಠಾಧಿಪತಿಗಳು ಇಲ್ಲದಿದ್ದರೂ ದೇಶ ನಡೆಯಲಿದೆ. ಆದರೆ ರೈತ ಇಲ್ಲದಿದ್ದಲ್ಲಿ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಬಸವಣ್ಣನವರು ಅಂದು ಕಾಯಕ ಮತ್ತು ದಾಸೋಹಕ್ಕೆ ಒತ್ತು ಕೊಟ್ಟಿದ್ದರು. ಇಂದಿನ ಮಠಾಧೀಶರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸ್ವಾಮೀಜಿಗಳ ಮಾರ್ಗದರ್ಶನ ಇದ್ದರೆ ಭಕ್ತಾದಿಗಳ ಬದುಕು ಹಸನಾಗಲಿದೆ ಎಂದರು.



ಸಮಾರಂಭದಲ್ಲಿ ಎಂ.ಎಲ್.ಹುಂಡಿ ಮಠದ ಶ್ರೀಗೌರಿಶಂಕರ ಸ್ವಾಮೀಜಿ ಮಾತನಾಡಿದರು.

ಸಮಾಜದಲ್ಲಿ ಕಡ್ಡಿ ಇಲ್ಲದೇ ಬೆಂಕಿ ಹಚ್ಚುವವರಿದ್ದಾರೆ: ಸಮಾಜಸಲ್ಲಿ ಕೆಲವರಿದ್ದಾರೆ. ಕಡ್ಡಿ ಇಲ್ಲದೇ ಬೆಂಕಿ ಹಚ್ಚುತ್ತಾರೆ. ಅವರಿಗೆ ಸಮಾಜದ ಬೆಳವಣಿಗೆ ಬೇಕಿಲ್ಲ. ಸಮಾಜ ಒಡೆಯುವ ಕೆಲಸಕ್ಕೆ ಮುಂದಾಗುತ್ತಾರೆ. ಹಾಗಾದರೂ ಅವರೇ ಮುಂಚೂಣಿಗೆ ಬರುತ್ತಿದ್ದಾರೆ. ಇಂದು ಅಕ್ಕಿ, ಬೇಳೆ, ಎಣ್ಣೆ ಬೆಲೆ ಗಗನಕ್ಕೇರುತ್ತಿದೆ. ಆದರೆ ಬೆಂಕಿ ಪೊಟ್ಟಣದ ಬೆಲೆ ಕೇವಲ ಒಂದೇ ಒಂದು ರೂಪಾಯಿ. ಇದರ ಅರ್ಥ ಬೆಂಕಿ ಹಚ್ಚುವವರಿಗೆ ಕಿಮ್ಮತ್ತಿಲ್ಲ ಎಂಬುದಾಗಿದೆ. ಹಚ್ಚುವುದಿದ್ದರೆ ಹಣತೆ ಹಚ್ಚಿ ಬೆಂಕಿ ಹಚ್ಚಿ ಸಮಾಜದ ಸ್ವಾಸ್ಥ್ಯ ಕೆಡಿಸಬೇಡಿ. ಸಮಾಜಕ್ಕೆ ಬೆಳಕಾಗಿ ಎಂದು ಸಲಹೆ ನೀಡಿದರು.

> ಬುದ್ಧನಿಗಿಂತ ಬೌದ್ಧ ಧರ್ಮ ಮೊದಲಿರಲಿಲ್ಲ. ಯೇಸುವಿಗಿಂತ ಮೊದಲೇ ಕ್ರಿಶ್ಚಿಯನ್ ಧರ್ಮ ಹುಟ್ಟಿ ಕೊಂಡಿತ್ತು. ಹಾಗೆಯೇ ಬಸವಣ್ಣನವರಿಗಿಂತ ಮೊದಲು ಲಿಂಗಾಯತ ಧರ್ಮ ಇರಲಿಲ್ಲ. ಆಗ ವೀರಶೈವ ಎಂದಿತ್ತು. ಬಸವಣ್ಣರವರು ಬಂದ ನಂತರ ವೀರಶೈವ ಎಂಬುದನ್ನು ಲಿಂಗಾಯತ ಧರ್ಮ ಮಾಡಿದರು. ಕಾರಣ ಕೆಲವು ವೀರಶೈವರಲ್ಲಿ ಮೌಢ್ಯತೆ ಆಚಾರಗಳು ತುಂಬಿಕೊಂಡಿತ್ತು. ಅದನ್ನು ಹೋಗಲಾಡಿಸಿದ ಬಸವಣ್ಣ ಲಿಂಗವಂತ ಧರ್ಮಕ್ಕೆ ರೂಪುರೇಷೆ ಕೊಟ್ಟು ಭದ್ರ ಬುನಾದಿ ಹಾಕಿಕೊಟ್ಟರು.
>
> -ಶ್ರೀಗೌರಿ ಶಂಕರಸ್ವಾಮಿ,
> ಮದ್ದಾಗರಲಿಂಗಯ್ಯನಹುಂಡಿ ವಿರಕ್ತ ಮಠ.

ಸೋಮಹಳ್ಳಿ ಮಠದ ಕಿರಿಯ ಶ್ರೀಗಳಾದ ಬಸವಯೋಗಿ ಪ್ರಭು ಸ್ವಾಮೀಜಿ ಮಾತನಾಡಿದರು. ಹೊಸಮಠದ ಚಿದಾನಂದ ಸ್ವಾಮೀಜಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಜಿ.ಬಿ. ಪಾಟೀಲ್, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಮಹದೇವಪ್ಪ, ತಾಲೂಕು ಅಧ್ಯಕ್ಷ ತೊಟ್ಟವಾಡಿ ರವಿ, ಕಾರ್ಯದರ್ಶಿ ನಾಗರಾಜು, ಶರಣ, ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಮಹದೇವಪ್ಪ, ಕುರುಬೂರು ಬ್ಯಂಗೀಶ್, ಪರಮೇಶ್ ಪಟೇಲ್, ಸಂಘದ ಪೋಷಕರಾದ ಕೆ.ಜಿ.ಶಿವಪ್ರಸಾದ್, ಉಪಾಧ್ಯಕ್ಷ ಎಂ.ಮಹೇಶ್ ಕುಮಾರ್, ಗೌರವ ಪ್ರಧಾನ ಸಂಚಾಲಕ ಡಿ.ಎಲ್.ಮಹದೇವಪ್ಪ ಕಸಬಾ ಹೋಬಳಿ ಅಧ್ಯಕ್ಷ ಗುರುಸ್ವಾಮಿ, ತಲಕಾಡು ಹೋಬಳಿ ಅಧ್ಯಕ್ಷ ವೀರೇಶ್, ಮೂಗೂರು ಹೋಬಳಿ ಅಧ್ಯಕ್ಷ ಕೆ.ಎಸ್. ಶಿವಕುಮಾರ್, ಸೋಸಲೆ ಹೋಬಳಿ ಅಧ್ಯಕ್ಷ ಗೌ.ಬಸವರಾಜಪ್ಪ ನಿರ್ದೇಶಕರಾದ ಕೆ.ಎಸ್.ಮಹದೇವಸ್ವಾಮಿ, ನಾಗಪ್ಪ, ಶರಣ ವಿರೂಪಾಕ್ಷ, ಮಹೇಶ್, ಓಂಕಾರ ಸ್ವಾಮಿ, ಹರೀಶ್ ಷಡಕ್ಷರಿ, ಸತೀಶ್ ಮತ್ತಿತರಿದ್ದರು.

ಸಚಿವ ವೆಂಕಟೇಶ್ ದ್ವೇಷದ ರಾಜಕಾರಣ ಮಾಡಿಲ್ಲ

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರ ಸ್ಪಷ್ಟನೆ



ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರು ಮಾತನಾಡಿದರು.

ಪಿರಿಯಾಪಟ್ಟಣ, ಡಿ.22– ಸಚಿವ ಕೆ.ವೆಂಕಟೇಶ್ ತಮ್ಮ ರಾಜಕೀಯ ಜೀವನದಲ್ಲಿ ಯಾವುದೇ ದ್ವೇಷ ರಾಜಕಾರಣ ಮಾಡಿಲ್ಲ. ಸದಾ ತಾಲೂಕಿನ ಅಭಿವೃದ್ಧಿ ಬಗ್ಗೆ ಚಿಂತಿಸುವ ಅವರನ್ನು ಜೆಡಿಎಸ್ ಮುಖಂಡರು ದ್ವೇಷ ರಾಜಕಾರಣಿ ಎಂದು ಬಿಂಬಿಸಿರುವುದು ಖಂಡನೀಯ ಎಂದು ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಮುಖಂಡರು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಮಾತನಾಡಿದ ಮುಖಂಡರು, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ ಅವರು ಪಟ್ಟಣದ ಮೂಲ ನಿವಾಸಿಯಾಗಿದ್ದು, ತಾಲೂಕಿನ ಕಗ್ಗುಂಡಿ ಡೈರಿಯಲ್ಲಿ ಅಕ್ರಮವಾಗಿ ಸದಸ್ಯತ್ವ ಪಡೆದು ಮೈಮುಲ್ ನಿರ್ದೇಶಕರಾಗಿ ಆಯ್ಕೆಯಾಗಿದ್ದು ಅಕ್ರಮ. ಅವರ ಅಧಿಕಾರಾವಧಿಯಲ್ಲಿ ಕಗ್ಗುಂಡಿ ಡೈರಿಯಲ್ಲಿ ಸರ್ಕಾರದಿಂದ ಸಂಘದ ಸದಸ್ಯರಿಗೆ ಬರುವ ಪ್ರೋತ್ಸಾಹಧನ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಪಕ್ಷಾತೀತವಾಗಿ ನೀಡುವ ಬದಲು ಕಾಂಗ್ರೆಸ್ ಸದಸ್ಯರಿಗೆ ಪಕ್ಷಪಾತ ಮಾಡುವುದು ಅಲ್ಲದೇ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು ಬಯಲಿಗೆ ಬಂದಿದೆ. ಈ ಬಗ್ಗೆ ಸಹಕಾರ ಸಂಘದ ಸಹಾಯಕ ನಿಬಂಧಕರಿಗೆ ಗ್ರಾಮಸ್ಥರು ದೂರು ನೀಡಿದ್ದು, ಸಂಘದಿಂದ 72 ನೋಟಿಸ್ ನೀಡಿದರೂ ತನಿಖೆಗೆ ಸಹಕಾರ ನೀಡದೆ ಸಂಬಂಧಪಟ್ಟ ದಾಖಲೆ ನಾಶಪಡಿಸಿರುವುದು ಧೃಢಪಟ್ಟ ಹಿನ್ನೆಲೆಯಲ್ಲಿ ಅವರ ಸದಸ್ಯತ್ವ ವಜಾಗೊಂಡಿದೆ ವಿನಹ ಇದರಲ್ಲಿ ಸಚಿವರ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಚಿವ ವೆಂಕಟೇಶ್ ಅವರು ಯಾವುದೇ ದ್ವೇಷ ರಾಜಕಾರಣ ಮಾಡಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದ ಮುಖಂಡರು ಮುಂದಿನ ದಿನಗಳಲ್ಲಿ ಸಚಿವರ ವಿರುದ್ಧ ಸುಳ್ಳು ಆರೋಪ ಮಾಡಿ ಸಾರ್ವಜನಿಕರನ್ನು ದಿಕ್ಕು ತಪ್ಪಿಸುವ ಕಾರ್ಯ ಕಂಡು ಬಂದಲ್ಲಿ ಅವರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ, ರೆಹಮದ್ ಜಾನ್‌ಬಾಬು, ಮುಖಂಡರಾದ ಹೊಲದಪ್ಪ, ಟಿ.ಪಿ. ಲೋಕೇಶ್, ತಮ್ಮಣ್ಣಯ್ಯ, ಈರಯ್ಯ, ಪ್ರಕಾಶ್, ಪುಟ್ಟರಾಜು, ವಿಜಯಕುಮಾರ್, ಮಹದೇವ್ ಸೇರಿದಂತೆ ಇನ್ನಿತರರಿದ್ದರು.

ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ತಡೆ



ಸರಗೂರು, ಡಿ.22– ತಾಲೂಕಿನ ಬೇಗೂರು ಬಳಿ ನಿರ್ಮಾಣವಾಗುತ್ತಿರುವ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ತಡೆಯೊಡ್ಡಿದ್ದಾರೆ.

ತಾಲೂಕಿನ ಕಾಡ ಬೇಗೂರು, ಕಾಡ ಬೇಗೂರು ಕಾಲೋನಿ ಹಾಗೂ ಸಿದ್ದಪ್ಪಾಜಿ ಕಾಲೋನಿ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಜೆಜೆಎಂ ಯೋಜನೆಯಡಿ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರಾಗಿತ್ತು. ಬಳಿಕ ಬೇಗೂರಿನ ಸರ್ವೆ ನಂ.6ರಲ್ಲಿರುವ ಸೋಮನಾಯಕ ಅವರ ಜಮೀನಿನಲ್ಲಿ ಜಾಗವನ್ನು ದಾನ ಪಡೆದು ಕಾಮಗಾರಿ ಪ್ರಾರಂಭ ಮಾಡಲಾಗಿತ್ತು ಆದರೆ ಅರಣ್ಯ ಇಲಾಖೆ ಅಧಿಕಾರಿಗಳು ಕಾಮಗಾರಿ ನಡೆಸದಂತೆ ತಡೆವೊಡ್ಡಿದ್ದರು. ವಿಷಯ ತಿಳಿದ ಶಾಸಕ ಅನಿಲ್, ತಹಸೀಲ್ದಾರ್, ಇಓ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿ ಕಾಮಗಾರಿಗೆ ಅಡ್ಡಿಪಡಿಸದಂತೆ ಆರ್‌ಎಫ್‌ಓ ಅಮೃತಾ ಅವರಿಗೆ ಸೂಚಿಸಿದ್ದರು.

ಬಳಿಕ ಮತ್ತೆ ಕಾಮಗಾರಿ ಆರಂಭವಾಗಿತ್ತು. ಇದೀಗ ಮತ್ತೆ ಅರಣ್ಯಾಧಿಕಾರಿಗಳು ಶಾಸಕ ಅನಿಲ್, ತಹಸೀಲ್ದಾರ್ ಸೂಚನೆಗೂ ಮನ್ನಣೆ ನೀಡದೇ ಮತ್ತೆ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ತಡೆಯೊಡ್ಡಿದ್ದಾರೆ. ಅಲ್ಲದೇ ಕಾಮಗಾರಿ ನಿಲ್ಲಿಸದಿದ್ದರೇ ಎಫ್‌ಐಆರ್ ದಾಖಲಿಸುವುದಾಗಿ ಸಂಬಂಧಪಟ್ಟ ಎಇಇಗೆ ನೋಟಿಸ್ ಜಾರಿಗೊಳಿಸಿದ್ದಾರೆ. ಇದರಿಂದ ಕುಡಿಯುವ ನೀರಿಲ್ಲದೆ ಕಾಡ ಬೇಗೂರು, ಕಾಡ ಬೇಗೂರು ಕಾಲೋನಿ ಹಾಗೂ ಸಿದ್ದಪ್ಪಾಜಿ ಕಾಲೋನಿ ನಿವಾಸಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ಗ್ರಾಮಸ್ಥರು, ಈ ಭಾಗದ ಜನ ಕುಡಿಯುವ ನೀರಿಗಾಗಿ ನುಗು ನದಿಯನ್ನು ಅವಲಂಬಿಸಿದ್ದಾರೆ. ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಅರಣ್ಯಾಧಿಕಾರಿಗಳು ವಿನಾಕಾರಣ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ಶಾಸಕರ ಗಮನಕ್ಕೆ ತರಲಾಗಿದೆ. ಆದರೂ ಆರ್‌ಎಫ್‌ಓ ಅಮೃತ ಅವರು, ಕಾಮಗಾರಿಗೆ ತೊಂದರೆ ನೀಡುವ ಜೊತೆಗೆ ಕೃಷಿ ಚಟುವಟಿಕೆಗೂ ಅಡ್ಡಿಪಡಿಸುತ್ತಿದ್ದಾರೆ. ಈ ಸಂಬಂಧ ಮತ್ತೊಮ್ಮೆ ಶಾಸಕರ ಗಮನಕ್ಕೆ ತರಲಾಗುವುದು. ಅಲ್ಲದೇ ಕಾಮಗಾರಿ ನಡೆಯಲು ಅವಕಾಶ ನೀಡದಿದ್ದರೇ ವೊಳೆಯೂರು ಅರಣ್ಯ ಇಲಾಖೆ ಕಚೇರಿ ಎದುರು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ನಂಜನಗೂಡಲ್ಲಿ ವಿಶ್ವ ಧ್ಯಾನ ದಿನಾಚರಣೆ

ಧ್ಯಾನ ಆಂತರ್ಯ ಅರಿಯುವ ಮಾರ್ಗ

ನಂಜನಗೂಡು, ಡಿ.22– ವಿಶ್ವ ಧ್ಯಾನ ದಿನಾಚರಣೆ ಅಂಗವಾಗಿ ನಗರದ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯಲ್ಲಿ ನೂರಾರು ಯೋಗ ಬಂಧುಗಳು ಸಾಮೂಹಿಕ ಧ್ಯಾನ ಕೈಗೊಂಡರು.

ಸಮಿತಿಯ 8 ಶಾಖೆಗಳ ಯೋಗ ಬಂಧುಗಳು ಯೋಗ ಮಹಾಮನೆಯಲ್ಲಿ ಸಾಮೂಹಿಕವಾಗಿ ಪಾಲ್ಗೊಂಡು ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಅವರ ಮಾರ್ಗದರ್ಶನದಲ್ಲಿ ಧ್ಯಾನ ಮಾಡಿ ಆನಂದಿಸಿದರು.

ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ. ಉಡಿಗಾಲ ಮಾತನಾಡಿ, ಧ್ಯಾನ ಆಂತರ್ಯ ಅರಿಯುವ ಮಾರ್ಗವಾಗಿದ್ದು, ನಮ್ಮ ಇಂದ್ರೀಯಗಳನ್ನು ಸಮತೋಲನದಲ್ಲಿಡಲು ಸಹಕಾರಿಯಾಗಿದೆ. ಋಷಿ ಮುನಿಗಳು, ಸಂತರು, ಶರಣರು ಧ್ಯಾನದಲ್ಲಿ ಸಾಧನೆ ಮಾಡಿ ಜಗತ್ತನ್ನೇ ಅರಿಯುವ ಪ್ರಖರತೆ ಹೊಂದಿದ್ದರು. ಹಾಗಾಗಿ ಅವರಿಗೆ ಜಗತ್ತಿನ ಎಲ್ಲಾ ವಿದ್ಯಮಾನಗಳ ಅರಿವಿತ್ತು. ಧ್ಯಾನದಿಂದ ಅದ್ವಿತೀಯ ಜ್ಞಾನ ಸಂಪಾದಿಸಿದ ಗೌತಮ ಬುದ್ಧರು ಜಗತ್ತಿಗೆ ಬೆಳಕಿನ ಸನ್ಮಾರ್ಗ ತೋರಿ ಪ್ರಾತಃಸ್ಮರಣೀಯರಾಗಿದ್ದಾರೆ ಎಂದರು.



ನಂಜನಗೂಡಿನಲ್ಲಿ ಯೋಗ ಬಂಧುಗಳು ಸಾಮೂಹಿಕ ಧ್ಯಾನ ಮಾಡಿದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ ಎನ್.ಆರ್. ಗಣೇಶಮೂರ್ತಿ ಮಾತನಾಡಿ, ಯೋಗ, ಧ್ಯಾನ, ಆಧ್ಯಾತ್ಮದಲ್ಲಿ ತನ್ನದೇ ಆದ ಹಿರಿಮೆ ಹೊಂದಿರುವ ಭಾರತಕ್ಕೆ ಮತ್ತೊಂದು ಜಾಗತಿಕ ಮನ್ನಣೆ ಸಿಕ್ಕಿದೆ. ಭಾರತೀಯ ಮೂಲದ ಯೋಗವನ್ನು ವಿಶ್ವವೇ ಆಚರಿಸುವಂತಾಗಿದ್ದು, ಇದೀಗ ಧ್ಯಾನವನ್ನೂ ಕೂಡ ವಿಶ್ವವೇ ಮೆಚ್ಚಿ ಜಗತ್ತಿನೆಲ್ಲೆಡೆ ಆಚರಿಸುವಂತಾಗಿರುವುದು ಹೆಮ್ಮೆಯ ಸಂಗತಿ. ದುರಂತವೆಂದರೆ ಧ್ಯಾನದ ಬಗ್ಗೆ ನಮ್ಮಲ್ಲಿಯೇ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಪ್ರಸ್ತುತ ಜಗತ್ತಿಗೆ ಶಾಂತಿ, ನೆಮ್ಮದಿ ಬೇಕಿದೆ. ಆ ನಿಟ್ಟಿನಲ್ಲಿ ಮೊದಲ ಬಾರಿಗೆ ವಿಶ್ವ ಸಂಸ್ಥೆ ಧ್ಯಾನ ದಿನಾಚರಣೆ ಘೋಷಣೆ ಮಾಡಿ ಆಂತರಿಕ ಶಾಂತಿ ಹಾಗೂ ಜಾಗತಿಕ ಸಾಮರಸ್ಯ ಧ್ಯೇಯದೊಂದಿಗೆ ಆಚರಣೆ ಮಾಡುತ್ತಿರುವುದು ಶ್ಲಾಘನೀಯ. ದೇಶ ದೇಶಗಳ ನಡುವೆ ಕದನ, ಮನುಷ್ಯ ಮನುಷ್ಯರ ನಡುವೆ ದ್ವೇಷ ಹೆಚ್ಚುತ್ತಿರುವ ಇಂದಿನ ದಿನಮಾನದಲ್ಲಿ ವಿಶ್ವಸಂಸ್ಥೆಯು ಆಂತರಿಕ ಶಾಂತಿ, ಜಾಗತಿಕ ಸಾಮರಸ್ಯ ಸಾಧಿಸುವ ದಿಸೆಯಲ್ಲಿ ಧ್ಯಾನ ದಿನಾಚರಣೆ ಆಚರಣೆ ಮಾಡುತ್ತಿರುವುದು ಸಮಯೋಚಿತ ನಿರ್ಧಾರ ಎಂದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಅಧ್ಯಕ್ಷ ಪ್ರಕಾಶ್, ಗೌರವಾಧ್ಯಕ್ಷ ಹಂಡುವಿನಹಳ್ಳಿ ರಾಜು ಉಪಸ್ಥಿತರಿದ್ದರು.

ಹನಗೋಡಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆ



ಹನಗೋಡು ಶಾಲೆಯಲ್ಲಿ ರಾಷ್ಟ್ರೀಯ ಗಣಿತ ದಿನ ಆಚರಿಸಲಾಯಿತು.

ಹುಣಸೂರು, ಡಿ.22– ತಾಲೂಕಿನ ಹನಗೋಡು ಸರ್ಕಾರಿ ಪ್ರೌಢಶಾಲೆಯಲ್ಲಿ ಭಾರತೀಯ ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಹುಟ್ಟಿದ ದಿನದ ನೆನಪಿಗಾಗಿ ರಾಷ್ಟ್ರೀಯ ಗಣಿತ ದಿನ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಂಡ ವಿವಿಧ ತಂಡಗಳನ್ನು ರಚಿಸಿ, ವಿಭಿನ್ನ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಗಣಿತ ದಿನಾಚರಣೆ ಹಾಗೂ ದಿನನಿತ್ಯದ ಜೀವನದಲ್ಲಿ ಗಣಿತದ ಪ್ರಾಮುಖ್ಯತೆ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು.

ಗಣಿತದ ಆಕೃತಿಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಉಪ ಪ್ರಾಂಶುಪಾಲ ಸಂತೋಷ್ ಕುಮಾರ್, ಮೂಲ ವಿಜ್ಞಾನದ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಕಡಿಮೆಯಾಗುತ್ತಿದ್ದು, ಪ್ರಸ್ತುತ ಮೂಲ ವಿಜ್ಞಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಮೂಲ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲು ಶಿಕ್ಷಕರು ಪ್ರಯತ್ನ ಪಡಬೇಕು ಎಂದು ಅಭಿಪ್ರಾಯಪಟ್ಟರು.

ಶ್ರೀನಿವಾಸ ರಾಮಾನುಜನ್ ಹುಟ್ಟುಹಬ್ಬದ ಪ್ರಯುಕ್ತ ಶಾಲೆಯಲ್ಲಿ ಗಣಿತ ಆಕೃತಿಗಳ ರಚನೆ ಮತ್ತು ವಸ್ತು ಪ್ರದರ್ಶನ, ಭಾರತೀಯ ಗಣಿತ ತಜ್ಞರ ಬಗ್ಗೆ ಭಾಷಣ ಸ್ಪರ್ಧೆ, ಪ್ರೌಢಶಾಲಾ ಹಂತದಲ್ಲಿರುವ ಗಣಿತದ ಸೂತ್ರಗಳ ಪಠಣ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ವೇದ ಗಣಿತದಲ್ಲಿ ಸೂತ್ರ ಬಿಡಿಸುವ ಸುಲಭ ವಿಧಾನಗಳು, ಚಮತ್ಕಾರ ಮತ್ತು ವಿನೋದ ಗಣಿತ ಕಾರ್ಯಕ್ರಮ, ಮೈಂಡ್ ಗೇಮ್ ಲೆಕ್ಕಗಳನ್ನು ಮಕ್ಕಳಿಗಾಗಿ ಆಯೋಜಿಸಲಾಗಿತ್ತು. ಅಲ್ಲದೇ ಮ್ಯಾಜಿಕ್ ಹಾಗೂ ವಿನೋದ ಗಣಿತದ ಮೂಲಕ ಮಕ್ಕಳಿಗೆ ಮನರಂಜನೆ ಜೊತೆಗೆ ಗಣಿತದ ಕಲಿಕೆ ಮತ್ತು ಆಸಕ್ತಿ ಹಾಗೂ ಕುತೂಹಲ ಬರುವಂತಹ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಗಣಿತ ಆಕೃತಿ ಚಿತ್ರ ರಚನೆ ಸ್ಪರ್ಧೆಯಲ್ಲಿ ಧನುಶ್ರೀ ತಂಡ ಪ್ರಥಮ, ದಿವ್ಯಾ ತಂಡ ದ್ವಿತೀಯ, ಪ್ರಾರ್ಥನ ತಂಡ ತೃತೀಯ, ಪ್ರಬಂಧ ಸ್ಪರ್ಧೆಯಲ್ಲಿ ತೇಜಸ್ವಿನಿ ಪ್ರಥಮ, ಪ್ರೀತಮ್ ದ್ವಿತೀಯ, ಪಾರ್ವತಿ ತೃತೀಯ ಸ್ಥಾನ, ಫಜಲ್ ಗೇಮ್‌ನಲ್ಲಿ ವಂದನಾ ತಂಡ ಪ್ರಥಮ, ಸ್ಪಂದನ ತಂಡ ದ್ವಿತೀಯ, ವೇದಗಣಿತ ಮತ್ತು ಚಾಲೆಂಜ್ ಯುವರ್ ಮೈಂಡ್ ಸ್ಪರ್ಧೆಯಲ್ಲಿ ಪ್ರೀತಮ್ ಪ್ರಥಮ, ಚಿನ್ನು ದ್ವಿತೀಯ, ಸ್ಪಂದನ ತೃತೀಯ, ಗಣಿತ ಸೂತ್ರ ಪಠಣದಲ್ಲಿ ಪ್ರೀತಮ್ ಪ್ರಥಮ ಸ್ಥಾನ ಪಡೆದುಕೊಂಡರು.

ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀನಿವಾಸ ರಾಮಾನುಜನ್ ಗಣಿತ ಕ್ಲಬ್ ನೋಡಲ್ ಶಿಕ್ಷಕರಾದ ಜಯಂತಿ, ಭಾನುಮತಿ ಮತ್ತು ಸತೀಶ್ ಹಾಗೂ ಶಿಕ್ಷಕರಾದ ವರ್ಷ, ಯತೀಶ್ ಶರ್ಮಾ, ಜಯಲಕ್ಷ್ಮಿ, ನಿಹಾರಿಕ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಷ್ಟ್ರಮಟ್ಟದ ಬಾಲಕರ ವಾಲಿಬಾಲ್‌ಗೆ ಆಯ್ಕೆ



ಹುಣಸೂರು, ಡಿ.22– ತೆಲಂಗಾಣದಲ್ಲಿ ನಡೆಯುತ್ತಿರುವ ಪದವಿ ಪೂರ್ವ ವಿಭಾಗದ 19 ವರ್ಷದೊಳಗಿನ ರಾಷ್ಟ್ರಮಟ್ಟದ ಬಾಲಕರ ವಾಲಿಬಾಲ್‌ಗೆ ಕರ್ನಾಟಕದಿಂದ ನಗರದ ಟ್ಯಾಲೆಂಟ್ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿ ನಾಗಭೂಷಣ್ ಆಯ್ಕೆಯಾಗಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಶಿಕ್ಷಕ ವರ್ಗ ತಂಡದ ಗೆಲುವಿಗೆ ಶುಭ ಹಾರೈಸಿದ್ದಾರೆ.

ಅರೇನಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ



ಡೆಕ್ಕನ್ ಟೊಬ್ಯಾಕೋ ಕಂಪನಿ ಮ್ಯಾನೇಜರ್ ಪಾಷ ಮಾತನಾಡಿದರು.

ಕಂಪಲಾಪುರ, ಡಿ.22– ಸಾರ್ವಜನಿಕರು ತಮ್ಮ ದೈನಂದಿನ ಜೀವನದ ಜಂಜಾಟದಲ್ಲಿ ಆರೋಗ್ಯದ ಕಡೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ ಎಂದು ಡೆಕ್ಕನ್ ಟೊಬ್ಯಾಕೋ ಕಂಪನಿ ಮ್ಯಾನೇಜರ್ ಪಾಷ ಕಿವಿಮಾತು ತಿಳಿಸಿದರು.

ಸಮೀಪದ ಅರೇನಹಳ್ಳಿಯಲ್ಲಿ ಡೆಕ್ಕನ್ ಟೊಬ್ಯಾಕೋ ಕಂಪನಿಯಿಂದ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಜನರು ಶುದ್ಧನೀರು, ಸ್ವಚ್ಛ ಗಾಳಿ, ಪೌಷ್ಟಿಕ ಆಹಾರದ ಕಡೆ ಹೆಚ್ಚು ಗಮನ ಹರಿಸಬೇಕು. ಜೊತೆಗೆ ನಮ್ಮ ಸುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಇದೇ ವೇಳೆ ಶಿಬಿರದಲ್ಲಿ 188 ಮಂದಿ ಆರೋಗ್ಯ ತಪಾಸಣೆಗೆ ಒಳಪಟ್ಟರು. ಈ ಪೈಕಿ ಅವಶ್ಯಕತೆ ಇದ್ದವರಿಗೆ ಶಸ್ತ್ರಚಿಕಿತ್ಸೆಗೆ ಸೂಚಿಸಲಾಯಿತು. ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆ ವೈದ್ಯೆ ಡಾ.ಶಾಜಿಯಾ ಬಾನು, ಗ್ರಾಪಂ ಸದಸ್ಯರಾದ ಸೈಯದ್ ಜವೇರಿಯಾ, ಆಸಿಯಾ ಖನಂ, ಸೈಯದ್ ಅಬ್ಬಾಸ್, ಸುಹೈಲ್ ರಬ್ಬನಿ, ಎ.ಜಿ.ಶಿವಣ್ಣ ಸೇರಿದಂತೆ ಆರೋಗ್ಯ ಸಿಬ್ಬಂದಿ, ಮೈಕಾಫ್ ಸಂಸ್ಥೆ, ಡೆಕ್ಕನ್ ಕಂಪನಿ ಸಿಬ್ಬಂದಿ ಹಾಜರಿದ್ದರು.

ಅಧಿಕಾರಿಗಳು ಸ್ಮಶಾನ ತೆರವಿಗೆ ಮುಂದಾಗಿದ್ದಾರೆ ಎಂದು ಆರೋಪಿಸಿ

ಕೋಟೆಯಲ್ಲಿ ಅಂತರಸಂತೆ ಗ್ರಾಮಸ್ಥರ ಪ್ರತಿಭಟನೆ



ಅಂತರಸಂತೆ ಗ್ರಾಮಸ್ಥರು ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಮಾಡಿದರು.

ಹೆಚ್.ಡಿ.ಕೋಟೆ, ಡಿ.22– ಬೆಂಗಳೂರು ಮೂಲದ ಖಾಸಗಿ ವ್ಯಕ್ತಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕಂದಾಯ ಇಲಾಖೆ ಅಧಿಕಾರಿಗಳು ಸ್ಮಶಾನ ತೆರವುಗೊಳಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿ ತಾಲೂಕಿನ ಅಂತರಸಂತೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಮಸ್ಥರ ಹೆಸರಿನಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ ನೆಪ ಮಾಡಿಕೊಂಡು ಆತನಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅರ್ಜಿ ನೀಡಿದ ಒಂದೇ ದಿನದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಭೂಮಾಪಕರಿಗೆ ಜಮೀನು ಹದ್ದುಬಸ್ತು ಮಾಡಲು ಸೂಚಿಸಿ ನೂರಾರು ವರ್ಷಗಳಿಂದ ಇದ್ದ ಸ್ಮಶಾನವನ್ನು ಆ ವ್ಯಕ್ತಿಗೆ ಖಾತೆ ಮಾಡಿಕೊಡಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ಅಂತರಸಂತೆ ಗ್ರಾಮದ ಸರ್ವೇ ನಂ. 102ರಲ್ಲಿ 7 ಎಕರೆ 29 ಗುಂಟೆ ಸರ್ಕಾರಿ ಜಮೀನು ಮತ್ತು ಸ್ಮಶಾನ ಜಾಗ ಒತ್ತುವರಿಯಾಗಿದ್ದು, ಅದನ್ನು ಹದ್ದುಬಸ್ತು ಮಾಡುವಂತೆ ಅರ್ಜಿ ಸಲ್ಲಿಸಲಾಗಿದೆ. ಆದರೆ ಅಳತೆ ಬಳಿಕ 2 ಎಕರೆ ಜಾಗವನ್ನು ಬೆಂಗಳೂರು ಮೂಲದ ಖಾಸಗಿ ವ್ಯಕ್ತಿಗೆ ಖಾತೆ ಮಾಡಿ ಕೊಡಲು ಹುನ್ನಾರ ನಡೆಸಿದ್ದಾರೆ ಎಂದು ಗ್ರಾಮಸ್ಥರು ದೂರಿದರು.

ಕರ್ನಾಟಕ ಭೀಮ್ ಸೇನೆ ತಾಲೂಕು ಅಧ್ಯಕ್ಷ ಪ್ರಕಾಶ್ ಬುದ್ಧ ಮಾತನಾಡಿ, ಸರ್ವೆ ಅಧಿಕಾರಿಗಳು ತಹಸೀಲ್ದಾರ್ ಆದೇಶಿಸಿದ್ದಾರೆ ಎಂದು ಸರ್ಕಾರಿ ಜಮೀನನ್ನು ಅಳತೆ ಮಾಡಿ ಸ್ಮಶಾನ ಹದ್ದುಬಸ್ತು ಮಾಡಲು ಬಂದಿದ್ದರು. ಆದರೆ ಈ ಸರ್ಕಾರಿ ಜಮೀನನ್ನು ನಾವು 4 ಬಾರಿ ಹದ್ದುಬಸ್ತು ಮಾಡಿಸಿದ್ದು, ಮತ್ತೇ ಏಕೆ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದರೆ ಅವರ ಬಳಿ ಉತ್ತರ ಇಲ್ಲ. ಈ ಬಗ್ಗೆ ತಹಸೀಲ್ದಾರ್‌ರನ್ನು ಕೇಳಿದರೆ ಅವರೂ ಸಹ ಏನಾಗಿದೆ ಗೊತ್ತಿಲ್ಲ ಎನ್ನುತ್ತಾರೆ. ಏನೂ ಗೊತ್ತಿಲ್ಲದೆ ಇಲ್ಲಿ ಅಳತೆ ಮಾಡಲು ಏಕೆ ಬಂದರು? ಅಳತೆಗೆ ಅರ್ಜಿ ಸಲ್ಲಿಸಿದವರು ಯಾರು ಎಂದು ಕೇಳಿದಾಗ ಬೆಂಗಳೂರು ಮೂಲದ ವ್ಯಕ್ತಿ ಅಂತರಸಂತೆಯವರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಈ ಬಗ್ಗೆ ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ಸೂಕ್ತ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ತಹಸೀಲ್ದಾರ್ ಖುದ್ದಾಗಿ ಸ್ಥಳ ಪರಿಶೀಲಿಸದೆ ಸರ್ಕಾರಿ ಜಮೀನು ಯಾರಿಗೆ ಸೇರಿದ್ದು ಎಂಬುದರ ಮಾಹಿತಿ ಪಡೆಯದೆ ಏಕಾಏಕಿ ಜಮೀನು ಹದ್ದುಬಸ್ತು ಮಾಡಲು ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಗ್ರಾಮಸ್ಥರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ತಹಸೀಲ್ದಾರ್ ವಿರುದ್ಧ ಹರಿಹಾಯ್ದರು.

ಜಿಲ್ಲಾಧಿಕಾರಿಗಳು ಈ ಜಮೀನಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಿ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡಬೇಕು. ಜೊತೆಗೆ ತಹಸೀಲ್ದಾರ್ ವಿರುದ್ಧ ತನಿಖೆ ನಡೆಸಿ ಅವರ ವಿರುದ್ಧ ಕ್ರಮ ಕೈಗೊಂಡು ಊರಿನ ಎಲ್ಲಾ ಸಮುದಾಯಗಳಿಗೂ ಸ್ಮಶಾನ ನೀಡಬೇಕು. ಅದರ ಹೊರತಾಗಿ ಬೇರೆಯವರಿಗೆ ಜಮೀನು ನೀಡಲು ಹೋದರೆ ಅದರ ವಿರುದ್ಧ ನಾವು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮುಖಂಡರಾದ ನಂಜಪ್ಪ, ಶಿವಣ್ಣ, ಗೋಪಾಲಯ್ಯ, ನಂಜುಂಡ, ಸಣ್ಣಪ್ಪ, ಮಾರುತಿ, ಕುಮಾರ್, ಹಾಲಯ್ಯ, ನಾಗರಾಜು, ಚನ್ನಬಸವಚಾರಿ, ಚಿನ್ನಸ್ವಾಮಿ ಶೆಟ್ಟಿ, ಖಲೀಂ, ಸೋಮೇಶ್, ಅಭಿ, ಅಯ್ಯಪ್ಪ, ಗೋಪಾಲಶೆಟ್ಟಿ, ಜಯಣ್ಣ, ಸುಬ್ರಹ್ಮಣ್ಯ, ಕುಮಾರಿತ್ಮತರರಿದ್ದರು.

ಭಿನ್ನಾಭಿಪ್ರಾಯ ಮರೆತು ಸಮಾಜ ಒಗ್ಗೂಡಿಸುವ ಕೆಲಸ ಮಾಡಿ

ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ ಸಂಸ್ಥಾಪಕ ಕೇತಹಳ್ಳಿ ರಾಜಣ್ಣ



ದಿನದರ್ಶಿಕೆಯನ್ನು ಕುಂಬಾರರ ಸಂಘದ ಸಂಸ್ಥಾಪಕ ಕೇತಹಳ್ಳಿ ರಾಜಣ್ಣ ಬಿಡುಗಡೆಗೊಳಿಸಿದರು.

ತಿ.ನರಸೀಪುರ, ಡಿ.22– ನಮ್ಮಲ್ಲಿರುವ ಭಿನ್ನಾಭಿಪ್ರಾಯ ಮರೆತು ಎಲ್ಲರೂ ಸಮಾಜ ಒಗ್ಗೂಡಿಸುವ ಕೆಲಸ ಮಾಡಬೇಕಿದೆ ಎಂದು ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ ಸಂಸ್ಥಾಪಕ ಕೇತಹಳ್ಳಿ ರಾಜಣ್ಣ ತಿಳಿಸಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ 2025ನೇ ಸಾಲಿನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಮ್ಮ ಸಮಾಜಕ್ಕೆ ರಾಜಕೀಯವಾಗಿ ಮೇಲೆತ್ತುವ ಹಾಗೂ ಕೆಳಗೆ ಬೀಳಿಸುವ ಶಕ್ತಿ ಇದೆ. ಇದನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳಬೇಕಿದೆ. ನಮ್ಮನ್ನು ಬಳಸಿಕೊಂಡು ರಾಜಕಾರಣಿಗಳು ಬೆಳೆಯುತ್ತಿದ್ದಾರೆ. ಆದರೆ ಅವರಿಂದ ನಮಗೆ ಯಾವುದೇ ಉಪಯೋಗವಾಗುತ್ತಿಲ್ಲ ಎಂದರು.

ಕುಂಬಾರ ಸಂಘಕ್ಕೆ 75 ವರ್ಷಗಳ ಇತಿಹಾಸವಿದೆ. ನಾವು ಜನಸಂಖ್ಯೆಯಲ್ಲಿ ಅಲ್ಪ ಸಂಖ್ಯಾತರಾದರೂ ಆರ್ಥಿಕವಾಗಿ ಸಬಲರಾಗಿದ್ದೇವೆ. ನಾವು ಎಲ್ಲಾ ಜನಾಂಗದಂತೆ ಶೈಕ್ಷಣಿಕ, ಆರ್ಥಿಕವಾಗಿ ಮುಂದುವರೆದಿದ್ದು ಸಮಾಜದ ಅನೇಕರು ದೊಡ್ಡ ಹುದ್ದೆಯಲ್ಲಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಕಿರಗಸೂರು ರಮೇಶ್ ಮಾತನಾಡಿ, ಕುಂಬಾರ ಸಂಘದ ಸದಸ್ಯತ್ವ ನೋಂದಣಿ ಕಾರ್ಯ ಆರಂಭಿಸಿ ಸಂಘಟನೆ ಚುರುಕುಗೊಳಿಸಲಾಗುವುದು. ಕುಂಬಾರ ಸಮುದಾಯದ ಆಗು ಹೋಗುಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸುವ ಸಲುವಾಗಿ ಸಮಾಜದ ಹಿರಿಯ ಮುಖಂಡರ ಮಾರ್ಗದರ್ಶನ ಪಡೆದು ಸಂಘವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಶ್ರಮಿಸಲಾಗುವುದು ಎಂದರು.

ಗೌರವಾಧ್ಯಕ್ಷ ಕೃಷ್ಣಾಪುರ ಮಹದೇವಶೆಟ್ಟಿ, ಉಪಾಧ್ಯಕ್ಷ ಕೇತಹಳ್ಳಿ ಆರ್.ಸಿದ್ದರಾಜು, ಕಾರ್ಯದರ್ಶಿ ಸೋಮನಾಥಪುರ ಜೆ. ಮಹದೇವಸ್ವಾಮಿ, ಖಜಾಂಚಿ ಹೆಚ್.ಎಂ.ಸಿ ಸ್ವಾಮಿ, ಜಿಲ್ಲಾ ಪ್ರತಿನಿಧಿ ಟಿ.ಎಸ್.ಚಂದ್ರಶೇಖರ್, ಕಾನೂನು ಸಲಹೆಗಾರ ಕುಂತನಹಳ್ಳಿ ಜಿ.ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಅಲಗೂಡು ಎಂ.ಪಿ.ಸಿದ್ದರಾಜು, ಸಹ ಕಾರ್ಯದರ್ಶಿ ಗೊರವನಹಳ್ಳಿ ಜೆ.ಆರ್. ನಾಗರಾಜು, ನಿರ್ದೇಶಕರಾದ ಮಹದೇವಶೆಟ್ಟಿ, ಬಿ.ಎನ್.ಮಂಜುನಾಥ್, ಹೆಚ್.ಆರ್.ಶಿವಕುಮಾರ್, ವಸಂತ, ಬೇಕರಿ ಸಿದ್ದರಾಜು, ನಂಜುಂಡ, ಮಾದಶೆಟ್ಟಿ, ಮಹದೇವ, ಶಿವಲಿಂಗ, ಸಮಾಜದ ಮುಖಂಡರು ಹಾಜರಿದ್ದರು.

ಮೈಸೂರು ಮಿತ್ರ

ಸಮಾನತೆ, ನ್ಯಾಯ, ಬಹುತ್ವತೆ ಎತ್ತಿ ಹಿಡಿಯುವುದೇ ಕಾನೂನು

ಹಿರಿಯ ವಕೀಲ ಎಸ್.ಬಾಲನ್ ಅಭಿಮತ

ಮೈಸೂರು, ಡಿ.22(ಜಿಎ)–ಕಾನೂನು ಎಂದರೆ ಯಾವುದೇ ಒಬ್ಬ ವ್ಯಕ್ತಿಯ ಬಗ್ಗೆ ಅಥವಾ ಕೆಲವು ಜನರ ಆದೇಶವಲ್ಲ. ಬದಲಾಗಿ ಸಮಾನತೆ ನ್ಯಾಯ ಮತ್ತು ಬಹುತ್ವತೆಯನ್ನು ಎತ್ತಿ ಹಿಡಿಯುವ ಒಂದು ಪ್ರಬಲ ಸಾಧನ ಎಂದು ಹಿರಿಯ ವಕೀಲ ಎಸ್.ಬಾಲನ್ ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಪರಿನಿಬ್ಬಾಣ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ, ಸಂಶೋಧಕರ ಸಂಘ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಭಾರತೀಯ ನೂತನ ಕ್ರಿಮಿನಲ್ ಕಾನೂನುಗಳು– ಒಂದು ಚರ್ಚೆ ವಿಷಯ ಕುರಿತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾನೂನು ಸರ್ವಸಾಮಾನ್ಯ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಎಲ್ಲಾ ಸಂದರ್ಭದಲ್ಲಿಯು ಅನ್ವಯವಾಗುವಂತಿರಬೇಕು ಮತ್ತು ಎಲ್ಲರ ಒಪ್ಪಿಗೆಗೂ ಅರ್ಹವಾಗಿರಬೇಕು ಎಂದರು.

ಕ್ರಿಮಿನಲ್ ಅಪರಾಧಗಳ ವಿರುದ್ಧ ಕ್ರಮ ಜರುಗಿಸಲು ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮವನ್ನು ಅನುಷ್ಠಾನಕ್ಕೆ ತಂದಿರುವುದು ದೇಶದ ನ್ಯಾಯಾಂಗ ವ್ಯವಸ್ಥೆಯ ಪಾಲಿಗೆ ಐತಿಹಾಸಿಕ ಎಂದರು.

ಪ್ರಬಲರಿಂದ ದುರ್ಬಲರು ಶೋಷಣೆಗೆ ಒಳಗಾಗ ಬಾರದೆಂಬ ಉದ್ದೇಶದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ಭಾರತೀಯ ಕಾನೂನುಗಳಿಗೆ ಹೊಸ ಭಾಷ್ಯವನ್ನೇ ಬರೆದರು. ಸಂವಿಧಾನ ರಚನೆ ಸಂದರ್ಭದಲ್ಲಿಯೂ ಕೂಡ ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ನೀಡಿ ಸಾರ್ವತ್ರಿಕ ನ್ಯಾಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿದ್ದು ಆ ದಿಸೆಯಲ್ಲಿ ಭಾರತೀಯ ಕಾನೂನು ಪ್ರಕ್ರಿಯ ಸಾಗುತ, ಬಂದಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಕ್ರಿಮಿನಲ್ ನ್ಯಾಯ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲ ಮೂರೂ ಕಾನೂನುಗಳು ಮಾನವೀಯ ಆಧಾರದ ಮೇಲೆ ತಿದ್ದುಪಡಿ ಮಾಡಲಾಗಿರುವುದು ಗಮನಾರ್ಹ. ಹಳೆಯ ಕಾನೂನುಗಳು ಬ್ರಿಟಿಷ್ ಸಾಮ್ರಾಜ್ಯದ ಹಿತಾಸಕ್ತಿಗೆ ಆದ್ಯತೆ ನೀಡುತ್ತಿದ್ದವು. ಆದರೆ ಮೂರು ಹೊಸ ಪ್ರಮುಖ ಕಾನೂನುಗಳ ಉದ್ದೇಶ ಶಿಕ್ಷೆ ನೀಡುವುದಲ್ಲ, ಬದಲಿಗೆ ನ್ಯಾಯ ಒದಗಿಸುವುದಾಗಿದೆ ಎಂದರು.

ಭಾರತೀಯ ಕಾನೂನುಗಳು ಪ್ರಾಚೀನ ಕಾಲದಲ್ಲಿ ಪುರೋಹಿತಶಾಹಿಯ ಯಜಮಾನಗಾರಿಕೆಗೆ ಸಿಲುಕಿ ದುರ್ಬಲರನ್ನು ಶೋಷಿಸುವುದೇ ನ್ಯಾಯ ಎಂಬಂತೆ ವ್ಯಾಖ್ಯಾನಿಸಲ್ಪಟ್ಟಿದ್ದವು. ತದನಂತರ ಬ್ರಿಟಿಷ್ ಆಳ್ವಿಕೆಯ ಪರಿಣಾಮ ಭಾರತೀಯ ದಂಡ ಸಂಹಿತೆ1860 (ಐ.ಪಿ.ಸಿ.) ಭಾರತೀಯ ದಂಡ ಪ್ರಕಿಯ ಸಂಹಿತೆ 1973(ಸಿ ಆರ್ ಪಿ ಸಿ) ಭಾರತೀಯ ಸಾಕ್ಷ್ಯ ಅಧಿನಿಯಮ 1872 ಈ ಮೂರು ಅಪರಾಧಿಕ ಕಾನೂನುಗಳು ಕ್ರೂಢಿಕರಿಸಲ್ಪಟ್ಟ ನ್ಯಾಯ ನಿರ್ಣಯಕ್ಕೆ ಪೂರಕವಾದ ಸರ್ವಮಾನ್ಯ ಕಾನೂನುಗಳಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ವಿದ್ಯಾವರ್ಧಕ ಕಾನೂನು ಕಾಲೇಜಿನ ಉಪನ್ಯಾಸಕ ಡಾ.ಪ್ರಕೃತಿ, ಡಾ.ಕೆ.ಎಲ್.ಚಂದ್ರಶೇಖರ್ ಐಜೂರು, ವಕೀಲರಾದ ಎ.ಆರ್.ಕಾಂತರಾಜು, ಬಿ.ಆರ್.ರಂಗಸ್ವಾಮಿ, ದಲಿತ ವಿದ್ಯಾರ್ಥಿ ಒಕ್ಕೂಟದ ಪುನೀತ್ ಆಲನಹಳ್ಳಿ, ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಕಿರಂಗೂರು ಸ್ವಾಮಿ, ಮಹೇಶ್ ಇರಸವಾಡಿ, ಎಡದೊರೆ ಮಹದೇವ್ಯ, ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಪರಿನಿಬ್ಬಾಣ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ, ಸಂಶೋಧಕರ ಸಂಘ ಮೊದಲಾದವುಗಳ ಸಂಯುಕ್ತಾಶ್ರಯದಲ್ಲಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ 'ಭಾರತೀಯ ನೂತನ ಕ್ರಿಮಿನಲ್ ಕಾನೂನುಗಳು– ಒಂದು ಚರ್ಚೆ' ವಿಷಯ ಕುರಿತು ಚರ್ಚಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪುಷ್ಪ–2 (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಪ್ರಭಾ	
ಪುಷ್ಪ–2 (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಯುಐ (2024) (ಕ): ಬೆ.9.30ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಮ.2.35ಕ್ಕೆ, ಸಂ.5ಕ್ಕೆ, ರಾ.7.25ಕ್ಕೆ, ಮಾರ್ಕೋ (ಮ): ರಾ.9.55ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9ಕ್ಕೆ, ಪುಷ್ಪಾ 2 (ತೆ): ಮ.12.05ಕ್ಕೆ, ವಿಡುತಲೈ 2 (ತ): ಮ.3.55ಕ್ಕೆ, ರಾ.10.05ಕ್ಕೆ, ವನ್ವಾಸ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 3	ಇಡಿ ಎಕ್ಸ್ಟ್ರಾ ಡಿಸೆಂಟ್ (ಮ): ಬೆ.9.50ಕ್ಕೆ, ಪುಷ್ಪಾ 2 (ಕ): ಮ.12.15ಕ್ಕೆ, ಸಂ.6.10ಕ್ಕೆ, ಹರಿದಾಸರ ದಿನಚರಿ (ಕ): ಸಂ.4.05ಕ್ಕೆ, ಬಚ್ಚಲ ಮಲ್ಲಿ (ತೆ): ರಾ.10.05ಕ್ಕೆ.
ಸ್ಕ್ರೀನ್ 4	ಯುಐ (2024) (ಕ): ಬೆ.8.30ಕ್ಕೆ, ಬೆ.11.10ಕ್ಕೆ, ಮ.1.50ಕ್ಕೆ, ಸಂ.4.30.ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಂಗಡ ಹಣ ಕಟ್ಟಿಸಿಕೊಂಡು 2 ವರ್ಷವಾಗುತ್ತಿದ್ದರೂ ಸಾಧಕರಿಗೆ ನಿವೇಶನ ನೀಡದ ಮುಡಾ

ಕ್ರೀಡಾ ಸಾಧಕರ ಅಳಲು



ಮೈಸೂರು, ಡಿ.22(ಎಂಟಿವೈ)– ಮುಡಾ ಸಾಧಕರ ಕೋಟಾದಲ್ಲಿ ನಿವೇಶನ ಹಂಚಿಕೆಗೆ ಅರ್ಜಿ ಕರೆದು ಮುಂಗಡ ಹಣವನ್ನು ಕಟ್ಟಿಸಿಕೊಂಡಿದ್ದರೂ ಇದುವರೆಗೂ ನಿವೇಶನ ಮಂಜೂರು ಮಾಡದೆ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂದು ಕ್ರೀಡಾಪಟುಗಳು ಅಳಲು ತೋಡಿಕೊಂಡರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಚೆಸ್ ತರಬೇತಿದಾರ ಎಂ.ಪಿ.ಅಜಿತ್ ಮಾತನಾಡಿ, 2023ರ ಫೆಬ್ರವರಿಯಲ್ಲಿ 188 ಸಾಧಕರಿಗೆ ದೇವನೂರು ಬಡಾವಣೆ 3ನೇ ಹಂತದಲ್ಲಿ ನಿವೇಶನ ಹಂಚಿಕೆಗೆ ಅರ್ಜಿ ಕರೆದು ಮುಂಗಡ ಹಣ ಪಡೆದಿತ್ತು. ಅಂತಾರಾಷ್ಟ್ರೀಯ ಚೆಸ್ ಪಂದ್ಯದಲ್ಲಿ ಬೆಳ್ಳಿ ಪದಕ ವಿಜೇತನಾಗಿ ಪ್ರಸ್ತುತ ಅಂತಾ ರಾಷ್ಟ್ರೀಯ ಚೆಸ್ ತರಬೇತುದಾರನಾಗಿದ್ದು, ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇನೆ. 40–60 ವಿಸ್ತೀರ್ಣದ ನಿವೇಶನಕ್ಕಾಗಿ ಮುಡಾಗೆ ಅರ್ಜಿ ಸಲ್ಲಿಸಿ, ಶೇ.10ರಷ್ಟು 2.9 ಲಕ್ಷ ರೂ. ಮುಂಗಡ ಹಣ ಪಾವತಿಸಿ 22 ತಿಂಗಳಾಗಿದೆ. ಆದರೂ ಇದುವರೆಗೆ ನಿವೇಶನ ಹಂಚಿಕೆ ಮಾಡಿಲ್ಲ. ಈ ಸಂಬಂಧ ಮುಡಾಗೆ ಹತ್ತಾರು ಬಾರಿ ಅಲೆದರೂ ಸಮರ್ಪಕ ಉತ್ತರ ದೊರೆಯುತ್ತಿಲ್ಲ. ಬೇಕಿದ್ದರೆ ನೀವು ಕಟ್ಟಿರುವ ಹಣ ಹಿಂಪಡೆದುಕೊಳ್ಳಿ ಎನ್ನುತ್ತಾರೆ ಎಂದು ದೂರಿದರು.

ಅಥ್ಲೆಟಿಕ್ ಪಟು ರವಿ ಮಾತನಾಡಿ, ನಾನು 30–40 ವಿಸ್ತೀರ್ಣದ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ 16 ಲಕ್ಷರೂ. ಮುಂಗಡ ಹಣ ಪಾವತಿಸಿದ್ದೇನೆ. ಹೆಚ್.ಕೆಟಗರಿ ವಿಶೇಷ ಕೋಟಾದಡಿ ನಿವೇಶನ ಹಂಚಿಕೆ ಮೈಸೂರಿಗೆ ಸೀಮಿತವಾಗಿ ಅರ್ಜಿ ಕರೆಯದೆ ಇಡೀ ರಾಜ್ಯಾದ್ಯಂತ ಅರ್ಜಿ ಕರೆದ ಪರಿಣಾಮ 488 ಅರ್ಜಿ ಸಲ್ಲಿಕೆಯಾಗಿತ್ತು. ಅವುಗಳಲ್ಲಿ 188 ಅರ್ಜಿಗಳು ಕ್ರಮಬದ್ಧವಾಗಿವೆ ಎಂದು ಹೇಳಲಾಗಿದ್ದರೂ ಅರ್ಹರಿಗೆ ಈವರೆಗೆ ನಿವೇಶನ ಹಂಚಿಕೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತರಬೇತಿ ಕಾರ್ಯಾಗಾರಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಡಿ.22– ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ವತಿಯಿಂದ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಇಂದಿರಾಗಾಂಧಿ ವೃತ್ತಿ ತರಬೇತಿ ಕೇಂದ್ರ, ಬೆಂಗಳೂರು ಇವರ ಸಹಯೋಗದೊಂದಿಗೆ ಬಂಜಾರ ಸಮುದಾಯದ ವಿದ್ಯಾವಂತ ನಿರುದ್ಯೋಗಿ ಯುವಕ, ಯುವತಿಯರಿಗೆ ಬಂಜಾರ ಸಂಸ್ಕೃತಿ ಸಂವಿಧಾನ ಹಾಗೂ ವೃತ್ತಿ ತರಬೇತಿ ಕುರಿತು ಅರಿವು ಮೂಡಿಸಲು 2 ದಿನಗಳ ತರಬೇತಿ ಕಾರ್ಯಾಗಾರವನ್ನು ಸಂತ ಸೇವಾಲಾಲ್ ಜನ್ಮಸ್ಥಳವಾದ ಬಾಯಗಡ್, ನ್ಯಾಮತಿ ತಾಲೂಕು, ದಾವಣಗೆರೆ ಜಿಲ್ಲೆಯಲ್ಲಿ ನೀಡಲು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕಾರ್ಯಾಗಾರದಲ್ಲಿ ಭಾಗವಹಿಸಲು ಪಿಯುಸಿ ಮತ್ತು ಯಾವುದೇ ಪದವಿ, ಸ್ನಾತಕೋತ್ತರ ಪದವಿ ಹಾಗೂ ಅದಕ್ಕೂ ಮೇಲ್ಪಟ್ಟ ವಿದ್ಯಾಭ್ಯಾಸ ಹೊಂದಿರುವ ಬಂಜಾರ ಸಮುದಾಯದ ಅಭ್ಯರ್ಥಿಗಳಾಗಿರಬೇಕು.

ಆಸಕ್ತರು https://banjarathanda.Karnataka.gov ವೆಬ್‌ಸೈಟ್‌ನ ಮೂಲಕ ಅರ್ಜಿಯನ್ನು ಸಲ್ಲಿಸಬಹುದು. 2 ದಿನಗಳ ತರಬೇತಿಯನ್ನು ಪಡೆದ ಅಭ್ಯರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ವತಿಯಿಂದ ಪ್ರಮಾಣ ಪತ್ರ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 8123590234, 9606443843, 9606443846 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ನಿಯಮಿತ ಅಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಧುಮೇಹ ಕಾಯಿಲೆಗೆ ಸ್ವಯಂ ಔಷಧಿ ಪಡೆಯುವುದು ಅಪಾಯಕಾರಿ

ಜೆಎಸ್‌ಎಸ್ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ|| ಎಸ್.ಪಿ. ಮಧು



ಜೆಎಸ್‌ಎಸ್ ಮೆಡಿಕಲ್ ಕಾಲೇಜು ಸಭಾಂಗಣದಲ್ಲಿ ನಡೆದ ಮಧುಮೇಹ ಕುರಿತ ಸಮ್ಮೇಳನಕ್ಕೆ ತಜ್ಞವೈದ್ಯರು ಚಾಲನೆ ನೀಡಿದರು.

ಮೈಸೂರು, ಡಿ.22(ಎಂಟಿವೈ)– ಮಧುಮೇಹ ಕಾಯಿಲೆಗೆ ತುತ್ತಾಗಿರುವವರು ವೈದ್ಯರ ಸಲಹೆ ಇಲ್ಲದೆ ಸ್ವಯಂ ಔಷಧಿ ಪಡೆದುಕೊಳ್ಳುವುದು ಅಪಾಯಕಾರಿಯಾಗಿದ್ದು, ವೈದ್ಯರು ಸೂಚಿಸಿದಂತೆ ಅಗತ್ಯ ಚಿಕಿತ್ಸೆ ಪಡೆಯಬೇಕು ಎಂದು ಜೆಎಸ್‌ಎಸ್ ಆಸ್ಪತ್ರೆಯ ಅಧೀಕ್ಷಕರಾದ ಡಾ ಎಸ್.ಪಿ.ಮಧು ಸಲಹೆ ನೀಡಿದ್ದಾರೆ.

ಮೈಸೂರಿನಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಕೆಆರ್‌ಎಸ್ ಎಸ್‌ಡಿಐ ವತಿಯಿಂದ ಆಯೋಜಿಸಿದ್ದ ಇಪ್ಪತ್ತನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಧುಮೇಹದಿಂದ ಪಾರಾಗಬೇಕೆಂಬ ಉದ್ದೇಶದಿಂದ ಕೆಲವರು ಸ್ವಯಂ ವೈದ್ಯರಂತೆ ಔಷಧಿ ತೆಗೆದುಕೊಳ್ಳುತ್ತಿದ್ದು, ಅದನ್ನು ಬಿಡಬೇಕು. ಜನರು ಡಯಾಬಿಟಿಸ್ ಕಾಯಿಲೆಗೆ ತಾವೇ ಚಿಕಿತ್ಸೆಯನ್ನು ಮಾಡಿಕೊಳ್ಳುವುದಕ್ಕೆ ತೊಡಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಮಾಹಿತಿಗಳನ್ನು ನಂಬುತ್ತಿದ್ದಾರೆ. ಅಲ್ಲಿ ತೋರಿಸುವ ಔಷಧಿಗಳನ್ನು ಬಳಸುತ್ತಾರೆ. ಇದು ಬಹಳ ಅಪಾಯಕಾರಿ ಸಂಗತಿ. ಆದ್ದರಿಂದ ಡಯಾಬಿಟಿಸ್ ಕಾಯಿಲೆ ಉಳ್ಳವರು ನಿಯಮಿತವಾಗಿ ವೈದ್ಯರ ಸಲಹೆ ಪಡೆದು ಔಷಧಿಗಳನ್ನು ಸೇವಿಸುವುದು ಸೂಕ್ತ ಎಂದರು.

ಮುನ್ನೂರಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಕ್ಕರೆ ಅಂಶ ಕಂಡು ಬಂದಿದ್ದರೂ ಕೆಲವರು ತಮಗೆ ಸಕ್ಕರೆ ಕಾಯಿಲೆ ಇದೆ ಎಂಬುದನ್ನು ಒಪ್ಪಿಕೊಳ್ಳಲು ತಯಾರಿರುವುದಿಲ್ಲ. ಮೊದಲು ಈ ಧೋರಣೆ ಬಿಡಬೇಕು. ನಿರ್ಲಕ್ಷ್ಯ ಮಾಡದೇ ವೈದ್ಯರ ಸಲಹೆ ಪಡೆದುಕೊಂಡು ನಿಯಂತ್ರಣ ಮಾಡಿಕೊಳ್ಳುವುದು ಅಗತ್ಯ. ಪ್ರಸ್ತುತ ದಿನದಲ್ಲಿ ಹದಿಹರೆಯದಲ್ಲೇ ಸಕ್ಕರೆ ಕಾಯಿಲೆ ಕಾಣಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಈ ಕಾಯಿಲೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ವಹಿಸಬೇಕು ಹಾಗೂ ಆಹಾರ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಘಟನಾ ಅಧ್ಯಕ್ಷ ಡಾ.ವೈ. ಎಸ್.ರವಿಕುಮಾರ್, ಅಧ್ಯಕ್ಷ ಡಾ.ಬಸವರಾಜ್ ಎಂ.ಪಾಟೀಲ್, ಸಂಘಟನಾ ಕಾರ್ಯದರ್ಶಿ ಡಾ.ಶ್ರೀನಾಥ್ ಕೆ.ಎಂ, ಕೆಆರ್‌ಎಸ್‌ಎಸ್‌ಡಿಐ ಕಾರ್ಯದರ್ಶಿ ಡಾ.ಕೆ. ವಿಜಯಕುಮಾರ್, ಖಜಾಂಚಿ ಡಾ.ಕೆಸಿ.ಶಶಿಧರ, ಡಾ.ವೈಶೇಖರ್, ಜೆಎಸ್‌ಎಸ್ ಎಎಚ್‌ಇಆರ್ ಕುಲಸಚಿವ ಮಂಜುನಾಥ್, ಜೆಎಸ್‌ಎಸ್ ಮೆಡಿಕಲ್ ಕಾಲೇಜ್ ಉಪ ಪ್ರಾಂಶುಪಾಲ ಮಾಂತಪ್ಪ, ಆಡಳಿತಾಧಿಕಾರಿ ಸತೀಶ್ಚಂದ್ರ ಮತ್ತಿತರರು ಉಪಸ್ಥಿತರಿದ್ದರು.


ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರಿಗೆ ರಜೆ ಗಳಿಕೆ ಚೆಕ್ ವಿತರಣೆ



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ನಗರ ವಿಭಾಗದಲ್ಲಿ 2020ರ ಜ.1 ರಿಂದ 2023ರ ಫೆ.28ರ ಅವಧಿಯಲ್ಲಿ ಸಂಸ್ಥೆಯ ಸೇವೆಯಿಂದ ಸೇವಾ ವಿಮುಕ್ತಿ ಹೊಂದಿರುವ ನಿವೃತ್ತ ನೌಕರರಿಗೆ ಕೇಂದ್ರ ಕಚೇರಿಯ ನಿರ್ದೇಶನದಂತೆ 'ಪರಿಷ್ಕೃತ ವೇತನ ನಿಗದಿಯನ್ವಯ ಉಪಧನ ಮತ್ತು ನಿವೃತ್ತ ಗಳಿಕೆ ರಜೆ ನಗದೀಕರಣವನ್ನು ಪಾವತಿಸಲು ನಗರ ವಿಭಾಗದ ಕ್ರಮ ಕೈಗೊಂಡು, ಸಾಂಕೇತಿಕವಾಗಿ ನಿವೃತ್ತ ನೌಕರರಾದ ಮಹದೇವಸ್ವಾಮಿ, ನರಸಿಂಹಮೂರ್ತಿ, ಪ್ರಭು ಸ್ವಾಮಿ, ರೇವಣ ಸಿದ್ದಪ್ಪ ಅವರಿಗೆ ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಚೆಕ್ಕನ್ನು ವಿತರಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಿದ್ಧರಾಗಿ

ಆಮ್ ಆದ್ಮಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕರೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಎಎಪಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳಿಗೆ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ನೇಮಕಾತಿ ಪತ್ರ ವಿತರಿಸಿ, ಪಕ್ಷಕ್ಕೆ ಸ್ವಾಗತಿಸಿದರು.

ಮೈಸೂರು, ಡಿ.22(ಜಿಎ)–ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಬಲವರ್ಧನೆಗೊಳಿಸಿ ಎಂದು ಆಮ್ ಆದ್ಮಿ ಪಕ್ಷ(ಎಎಪಿ)ದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕರೆ ನೀಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ನೇತೃತ್ವದಲ್ಲಿ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ರಾಜಕೀಯದಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದೇನೆ. ಈಗ ನನಗೆ 73 ವರ್ಷ. ದೇಶ, ರಾಜ್ಯಕ್ಕೆ ಏನಾದರೂ ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದ ಕೇಜ್ರಿವಾಲ್ ಅವರ ಸಿದ್ಧಾಂತವನ್ನು ಒಪ್ಪಿಕೊಂಡು ಎಎಪಿ ಸೇರ್ಪಡೆಗೊಂಡಿದ್ದೇನೆ ಎಂದರು.

ಜನರು ಪ್ರಾಮಾಣಿಕ ವ್ಯಕ್ತಿಗಳನ್ನು ಎಂದಿಗೂ ಕೈಬಿಡುವುದಿಲ್ಲ ಎಂಬುದಕ್ಕೆ ರಾಮಕೃಷ್ಣ ಹೆಗ್ಗಡೆ ಬಿಟ್ಟರೇ ಅರವಿಂದ್ ಕ್ರೇಜಿವಾಲ್ ಸಾಬೀತುಪಡಿಸಿದ್ದಾರೆ. ಎರಡು ಬಾರಿ ಜನರ ಮುಂದೆ ಪರೀಕ್ಷೆಗೆ ನಿಂತು ಗೆದ್ದಿದ್ದಾರೆ. ದೆಹಲಿಯಲ್ಲಿ ಸಾಕಷ್ಟು ಬದಲಾವಣೆ ಮಾಡಿದ್ದಾರೆ. ಯಾವುದೇ ಸಾಲ ಮಾಡದೇ ರಾಜ್ಯದಲ್ಲಿ ಉಚಿತ ಯೋಜನೆಗಳನ್ನು ನೀಡಿದ್ದು, ಇದರ ಪರಿಣಾಮವಾಗಿ ಪಂಜಾಬಿನಲ್ಲಿಯೂ ಛಾಪು ಮೂಡಿಸಿ, ವಿಪಕ್ಷಗಳ ನಿದ್ದೆಗೆಡಿಸಿದ್ದಾರೆ ಎಂದು ತಿಳಿಸಿದರು.

ದೆಹಲಿಯಲ್ಲಿ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ಎಎಪಿ ಅಧಿಕಾರಕ್ಕೆ ಬರುವ ಸಮೀಕ್ಷೆಗಳು ಹೊರಬಂದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅರವಿಂದ್ ಕ್ರೇಜಿವಾಲ್ ವಿರುದ್ಧ ಇಡಿಗೆ ದೂರು ನೀಡಲು ಮುಂದಾಗುತ್ತಿದ್ದಾರೆ ಎಂದರು.

ಮೈಸೂರಿನಲ್ಲಿ ಯಾವುದೇ ಕ್ಷಣದಲ್ಲಾದರೂ ಪಾಲಿಕೆ ಚುನಾವಣೆ ಘೋಷಣೆಯಾಗಬಹುದು. ಅದರಲ್ಲಿ ನಮ್ಮ ಪ್ರಾತಿನಿಧ್ಯ ಉಳಿಸಿಕೊಳ್ಳುವುದು ಬಹಳ ಮುಖ್ಯ. ಇಂದು ನೂತನವಾಗಿ ಸೇರ್ಪಡೆಗೊಂಡಿರುವವರು ಪಾಲಿಕೆಯ 65 ವಾರ್ಡ್‌ನಲ್ಲಿಯೂ ಸ್ಪರ್ಧಿಸಲು ಮುಂದಾಗಿ. ಮೀಸಲಾತಿ ಪ್ರಕಟವಾದಾಗ ಕಿತ್ತಾಡಿಕೊಳ್ಳದೇ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸಿ, ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿ ಎಂದು ಸಲಹೆ ನೀಡಿದರು.


ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಮಾತನಾಡಿ, ಇಂದು ಸೇರ್ಪಡೆಗೊಂಡಿರುವವರು ಮುಂದಿನ ದಿನಗಳಲ್ಲಿ ನೀವು ವಾರ್ಡ್ ಮಟ್ಟದಲ್ಲಿ ಸಂಘಟನೆ ಮಾಡಿ. ಜನವರಿಯೊಳಗೆ ಎರಡು ಸಾವಿರ ಮಂದಿ ಸಂಘಟಿಸುವ ಕಾರ್ಯ ಮಾಡಿ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ತೆರಳಿ ಟೌನ್‌ಹಾಲ್ ಮುಂಭಾಗವಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಬಸವರಾಜು, ರವಿ, ದರ್ಶನ್ ಜೈನ್, ಉಷಾ ಸಂಪತ್ ಕುಮಾರ್, ಅನಂತ್ ಸೂರ್ಯ, ವಿಶ್ವನಾಥ್ ಕುಲಕರ್ಣಿ, ಸೋಮಶೇಖರ್ ಉಪಸ್ಥಿತರಿದ್ದರು.

ಇಲವಾಲ ಬಳಿ ಚಿರತೆಗಳ ಪುನರ್ವಸತಿ ಕೇಂದ್ರ ನಿರ್ಮಾಣಕ್ಕೆ ಚಿಂತನೆ

- 70 ಕೋಟಿ ರೂ. ವೆಚ್ಚದ ಚಿರತೆ ರಕ್ಷಣಾ ಕೇಂದ್ರ ಸ್ಥಾಪನೆಗೆ ಡಿಪಿಆರ್ ಸಲ್ಲಿಕೆ
- 92 ಎಕರೆ ಪ್ರದೇಶದಲ್ಲಿ ಗುಜರಾತ್ ಮಾದರಿಯಲ್ಲಿ ಪುನರ್ವಸತಿ ಕೇಂದ್ರ

ಎಂ.ಟಿ.ಯೋಗೇಶ್ ಕುಮಾರ್



ಮೈಸೂರು, ಡಿ.22– ಹಳೆ ಮೈಸೂರು ಭಾಗದಲ್ಲಿ ಹೆಚ್ಚುತ್ತಿರುವ ಚಿರತೆಗಳ ಹಾವಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಮುಂದಾಗಿದ್ದು, ಈಗಾಗಲೇ ಚಿರತೆ ಕಾರ್ಯಪಡೆ ರಚಿಸಿ ಯಶಸ್ವಿಯಾಗಿರುವ ಬೆನ್ನಲ್ಲೇ ಸೆರೆ ಸಿಕ್ಕ ಚಿರತೆಗಳಿಗಾಗಿ ಇದೀಗ 92 ಎಕರೆ ಪ್ರದೇಶದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲು ಉದ್ದೇಶಿಸಿದೆ.

ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು ಸೇರಿದಂತೆ ವಿವಿಧೆಡೆ ಕಳೆದ ಐದಾರು ವರ್ಷಗಳಿಂದ ಚಿರತೆಗಳ ಉಪಟಳ ಹೆಚ್ಚಾಗಿದ್ದು, ಜಾನುವಾರು ಮಾತ್ರವಲ್ಲದೆ, ಜನರ ಮೇಲೂ ದಾಳಿ ನಡೆಸಿ ಆತಂಕವನ್ನುಂಟು ಮಾಡಿವೆ. ನಾಚಿಕೆ ಸ್ವಭಾವದ ಚಿರತೆಗಳು ಜನರು ಇರುವಿಕೆ ಗ್ರಹಿಸಿ ಪಲಾಯನ ಮಾಡುವ ಸ್ವಭಾವವುಳ್ಳ ಪ್ರಾಣಿಯಾಗಿದ್ದರೂ ಎರಡು ವರ್ಷದ ಹಿಂದೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚಿರತೆ ದಾಳಿಗೆ ಬಾಲಕಿ ಸೇರಿದಂತೆ ನಾಲ್ವರು ಮೃತಪಟ್ಟ ಘಟನೆ ಚಿರತೆಗಳ ಮೇಲೆ ಭಯ ಉಂಟು ಮಾಡುವಂತಾಗಿದೆ. ಇದರ ನಡುವೆ ಕಳೆದ ಎರಡು ವರ್ಷದಿಂದ ವಿವಿಧ ಗ್ರಾಮಗಳಲ್ಲಿ ಜಾನುವಾರು, ಸಾಕು ನಾಯಿಗಳ ಮೇಲೆ ಚಿರತೆಗಳು ಎರಗುತ್ತಿರುವುದು ಅರಣ್ಯ ಇಲಾಖೆಯನ್ನು ಚಿಂತೆಗೀಡು ಮಾಡಿದೆ. ಆ ಕಾರಣಕ್ಕಾಗಿಯೇ ಇದೀಗ ಚಿರತೆಗಳ ಪುನರ್ವಸತಿ ಅಥವಾ ರಕ್ಷಣಾ ಕೇಂದ್ರ ಸ್ಥಾಪನೆ ವಿಚಾರ ಮುನ್ನಲೆಗೆ ಬಂದಿದೆ.

92 ಎಕರೆ ಪ್ರದೇಶ, 70 ಕೋಟಿ ರೂ. ವೆಚ್ಚ: ಮೈಸೂರು ಜಿಲ್ಲೆಯಲ್ಲಿ ಚಿರತೆಗಳ ಪುನರ್ವಸತಿ ಕೇಂದ್ರ ಸ್ಥಾಪನೆಗೆ ಕಳೆದ ವರ್ಷ ಚಿಂತಿಸಲಾಗಿತ್ತು. ಅದಕ್ಕಾಗಿ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಚಾಮುಂಡಿ ಪುನರ್ವಸತಿ ಕೇಂದ್ರಕ್ಕೆ ಹೊಂದಿಕೊಂಡಂತೆ ಇರುವ ಸ್ಥಳದಲ್ಲಿ 5–8 ಎಕರೆ ಪ್ರದೇಶದಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ಚಿರತೆಗಳ ಪುನರ್ವಸತಿ ಕೇಂದ್ರ ಸ್ಥಾಪನೆಗೆ ವಿಸ್ತೃತ ವರದಿ (ಡಿಪಿಆರ್) ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ, ಕೂರ್ಗಳ್ಳಿಯಲ್ಲಿ ಗುರುತಿಸಿದ್ದ ಸ್ಥಳ ಕಿರಿದಾಗಿದೆ ಎಂಬ ಅಭಿಪ್ರಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಇದೀಗ ಇಲವಾಲದ ಬಳಿಯಿರುವ ಅರಣ್ಯ ಸಿಬ್ಬಂದಿಗಳ ತರಬೇತಿ ಕೇಂದ್ರಕ್ಕೆ ಹೊಂದಿಕೊಂಡಂತೆ ಚಿರತೆಗಳ ಪುನರ್ವಸತಿ ಕೇಂದ್ರ ಸ್ಥಾಪಿಸಲು ಸ್ಥಳ ಗುರುತಿಸಲಾಗಿದೆ.

ಅಲ್ಲಿ 92 ಎಕರೆ ಜಾಗದಲ್ಲಿ ಚಿರತೆ ಪುನರ್ವಸತಿ ಕೇಂದ್ರ ತಲೆ ಎತ್ತಲಿದೆ. ಗುಜರಾತ್‌ನಲ್ಲಿ ಸಿಂಹಗಳ ಪುನರ್ವಸತಿ ಕೇಂದ್ರ ನಿರ್ಮಾಣದಂತೆ ಚಿರತೆಗಳ ಪುನರ್ವಸತಿ ಕೇಂದ್ರ ನಿರ್ಮಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಕಳೆದ ವರ್ಷ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಆಗಿದ್ದ ಸೌರಭ್ ಕುಮಾರ್ ನೇತೃತ್ವದ ತಂಡ ಗುಜರಾತ್‌ನಲ್ಲಿರುವ ಸಿಂಹಗಳ ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿತ್ತು. ಇದೀಗ ಅಂತಿಮವಾಗಿ ಚಿರತೆ ಪುನರ್ವಸತಿ ಕೇಂದ್ರದ ರೂಪುರೇಷೆ ಕುರಿತು ಡಿಪಿಆರ್ ತಯಾರಿಸಲಾಗಿದೆ.

ಈ ಕೇಂದ್ರ ಸ್ಥಾಪನೆಯಿಂದಾಗಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಜಿಲ್ಲೆಗಳಲ್ಲಿ ಉಪಟಳ ನೀಡಿ, ಸೆರೆ ಸಿಕ್ಕ ಚಿರತೆಗಳನ್ನು ತಂದು ಪುನರ್ವಸತಿ ಕಲ್ಪಿಸಲಾಗುತ್ತದೆ. ಇದರಿಂದ ಸೆರೆ ಹಿಡಿದ ಚಿರತೆಗಳ ಚಲನವಲನದ ಮೇಲೆ ಕಣ್ಣಿಡುವುದರೊಂದಿಗೆ ಮಿತಿ ಮೀರಿದ ಸಂಖ್ಯೆಯಲ್ಲಿ ಸಂತಾನಾಭಿವೃದ್ಧಿಯಾಗದಂತೆ ತಡೆಗಟ್ಟಲು ಕ್ರಮ ಕೈಗೊಂಡಂತಾಗುತ್ತದೆ.


> ಮೈಸೂರು ತಾಲೂಕಿನ ಇಲವಾಲದಲ್ಲಿರುವ ಅರಣ್ಯ ಇಲಾಖೆಯ ತರಬೇತಿ ಕೇಂದ್ರದ ಪಕ್ಕದ ಸರ್ವೆ ನಂ. 265ರಲ್ಲಿ 92 ಎಕರೆ ಭೂಮಿಯಲ್ಲಿ ಚಿರತೆ ಪುನರ್ವಸತಿ ಕೇಂದ್ರ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆ. ಈಗಾಗಲೇ ಪುನರ್ವಸತಿ ಕೇಂದ್ರದ ಡಿಪಿಆರ್ ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಸಚಿವ ಸಂಪುಟದಲ್ಲಿ ಅನುಮೋದನೆ ಕೊಡಿಸಲು ಮನವಿ ಮಾಡಲಾಗಿದೆ. ಈಗಾಗಲೇ ಅರಣ್ಯ ಸಚಿವರು ಯೋಜನೆ ಜಾರಿಗೆ ಉತ್ಸುಕತೆ ತೋರಿ ಒಪ್ಪಿಗೆ ನೀಡಿದ್ದಾರೆ. ಅನುದಾನ ಮಂಜೂರಾದರೆ ಚಿರತೆಗಾಗಿ ಪ್ರತ್ಯೇಕ ಕೇಂದ್ರ ಆರಂಭವಾಗಲಿದೆ. ಈ ಕೇಂದ್ರ ಸ್ಥಾಪನೆಯಾದರೆ ಮೈಸೂರು ಮಾತ್ರವಲ್ಲದೆ, ಸುತ್ತಮುತ್ತಲಿನ ಐದು ಜಿಲ್ಲೆಗಳಲ್ಲಿ ಸೆರೆ ಸಿಕ್ಕ ಚಿರತೆಗಳಿಗೆ ಪುನರ್ವಸತಿ ಕಲ್ಪಿಸಲು ಸಹಕಾರಿಯಾಗುತ್ತದೆ.
>
> –ಡಾ. ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ.

ಆತಂಕ ನಿರ್ಮಿಸಿದ ಆ ಮೂರು ಬಲಿ: ಮೈಸೂರು ಸುತ್ತುಮತ್ತ ನಾಗರಹೊಳೆ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದೊಂದಿಗೆ ಹಲವು ಸಾಮಾಜಿಕ ಹಾಗೂ ಮೀಸಲು ಅರಣ್ಯ ಪ್ರದೇಶವಿದೆ. ಇದರೊಂದಿಗೆ ಕೃಷಿ ಭೂಮಿಯೂ ಇರುವುದರಿಂದ ಕೆಲ ವರ್ಷಗಳಿಂದ ಚಿರತೆಗಳ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಗಿದೆ. ಇದರಿಂದ ನಗರ ಪ್ರದೇಶ, ಗ್ರಾಮೀಣ ಪ್ರದೇಶದ ಜನವಸತಿ ಪ್ರದೇಶಗಳಲ್ಲೂ ಚಿರತೆ ಸಂಚಾರ ಆಗ್ಗಾಗ್ಗೆ ಕಂಡು ಬರುತ್ತಿದೆ. ಅದರಲ್ಲೂ ತಿ.ನರಸೀಪುರ ತಾಲೂಕಿಗೆ ಸೇರಿದ ಪ್ರದೇಶದಲ್ಲಿ ಕಳೆದ ವರ್ಷ ಚಿರತೆ ಉಪಟಳ ತಾಲೂಕಿನ ಜನ ಮಾತ್ರವಲ್ಲದೆ, ಅರಣ್ಯ ಸಿಬ್ಬಂದಿಗಳ ನಿದ್ದೆಗೆಡಿಸಿತ್ತು. 2022 ಅ.31ರಂದು ಮಲ್ಲಿಕಾರ್ಜುನಸ್ವಾಮಿ ಬೆಟ್ಟ, 2022 ಡಿ.1ರಂದು ಎಸ್.ಕೆಬ್ಬೆಹುಂಡಿ, 2023 ಜ.20ರಂದು ಕನ್ನನಾಯಕನಹಳ್ಳಿ, 2023 ಜ.21ರಂದು ಹೊರಲಹಳ್ಳಿ ಓರ್ವ ಬಾಲಕಿ, ಒಬ್ಬರು ವೃದ್ಧೆ, ಯುವಕ, ಯುವತಿಯನ್ನು ಚಿರತೆ ದಾಳಿ ಮಾಡಿ ಕೊಂದು ಹಾಕಿದ್ದ ಪ್ರಕರಣ ಬೆಚ್ಚಿ ಬೀಳಿಸುವಂತೆ ಮಾಡಿತ್ತು.

ಏನೇನು ಇರುತ್ತದೆ: ಚಿರತೆ ಪುನರ್ವಸತಿ ಕೇಂದ್ರದದ ಸುತ್ತಲೂ 3 ಹಂತದ ಬೇಲಿ, ತಡೆಗೋಡೆ ನಿರ್ಮಿಸಲಾಗುತ್ತದೆ. ಸೆರೆ ಹಿಡಿದು ತಂದ ಆರೋಗ್ಯವಂತ ಚಿರತೆಗಳನ್ನು ಕೇವಲ ಬೋನಿನ ಮಾದರಿ ಕೊಠಡಿಯಲ್ಲಿರಿಸದೆ, ಬೃಹತ್ ವಿಸ್ತೀರ್ಣದ ಬೇಲಿಯುಳ್ಳ ಮೈದಾನದಲ್ಲಿ ಸಹಜ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಇದರೊಂದಿಗೆ ಆಸ್ಪತ್ರೆ, ಚಿಕಿತ್ಸಾ ಕೊಠಡಿ, ಶಸ್ತ್ರಚಿಕಿತ್ಸಾ ಕೊಠಡಿ, ಶವ ಪರೀಕ್ಷಾ ಕೊಠಡಿ, ಚಿರತೆ ಸಂರಕ್ಷಣಾ ವಾಹನ, ಆಂಬ್ಯುಲೆನ್ಸ್, ವೈಜ್ಞಾನಿಕ ಬೋನು, ಕ್ವಾರಂಟೈನ್ ಸೆಂಟರ್ ಸೇರಿದಂತೆ ಇನ್ನಿತರ ಸೌಲಭ್ಯವಿರುತ್ತದೆ. ಅಲ್ಲದೆ, ಚಿರತೆ ಕಾರ್ಯಪಡೆ(ಎಲ್‌ಟಿಎಫ್) ಕೇಂದ್ರ ಸ್ಥಳವಾಗಿಯೂ ಪುನರ್ವಸತಿ ಕೇಂದ್ರ ಕಾರ್ಯನಿರ್ವಹಿಸಲಿದೆ. ಚಿರತೆ ಹಾವಳಿಗೆ ಸಂಬಂಧಿಸಿದ ಯಾವುದೇ ದೂರು ಬಂದರೂ ಪುನರ್ವಸತಿ ಕೇಂದ್ರದಿಂದಲೇ ಕಾರ್ಯಪಡೆ ಕಾರ್ಯೋನ್ಮುಖವಾಗಲಿದೆ.

ಮೈಸೂರು ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಚಿರತೆ ಉಪಟಳ ಹೆಚ್ಚಾಗುತ್ತಿದ್ದು, ಕಳೆದ 7 ವರ್ಷಗಳಲ್ಲಿ 224 ಚಿರತೆಗಳನ್ನು ರಕ್ಷಣೆ ಮಾಡಲಾಗಿದೆ. ಮಂಡ್ಯ ಜಿಲ್ಲೆಯಲ್ಲಿ 79 ಚಿರತೆ ರಕ್ಷಣೆ ಮಾಡಲಾಗಿದೆ. ಮೈಸೂರು ವಿಭಾಗ ವ್ಯಾಪ್ತಿಗೆ ಮಂಡ್ಯ ಜಿಲ್ಲೆಯೂ ಸೇರಿರುವುದರಿಂದ ಎರಡೂ ಜಿಲ್ಲೆಗಳಿಂದ 2018ರಿಂದ 2024ರ ನವೆಂಬರ್ ವರೆಗೆ 303 ಚಿರತೆಗಳನ್ನು ರಕ್ಷಣೆ ಮಾಡಿದಂತಾಗಿದೆ.

ವಿಜಯ್ ಪ್ರಕಾಶ್ ಗಾಯನಕ್ಕೆ ಮನಸೋತ ಪ್ರೇಕ್ಷಕರು



ಮೈಸೂರು ಅರಮನೆ ವೇದಿಕೆಯಲ್ಲಿ ಭಾನುವಾರ ವಿಜಯ್‌ಪ್ರಕಾಶ್ ತಮ್ಮ ಗಾಯನದ ಮೂಲಕ ಸಂಗೀತದ ಸುಧೆ ಹರಿಸಿದರು.

ಸಂಗೀತದ ಅಬ್ಬರಕ್ಕೆ ಕುಣಿದು ಕುಪ್ಪಳಿಸಿದ ಯುವಜನತೆ



ವಿಜಯ್‌ಪ್ರಕಾಶ್ ಸಂಗೀತ ಮೋಡಿಗೆ ಕುಣಿದು ಕುಪ್ಪಣಿಸಿದ ಯುವಜನರು.

ಮೈಸೂರು,ಡಿ.22(ಪಿಎಂ)– ಖ್ಯಾತ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್ ಗಾನ ಮಾಧುರ್ಯಕ್ಕೆ ಸಭಿಕರು ಮನಸೋತು ಸಂಭ್ರಮಿಸಿದರು. ಬೆಳಗೆದ್ದು ಯಾರ ಮುಖವ ನಾನು ನೋಡಿದೆ... ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೆ ರಾಜಕುಮಾರ... ಮೊದಲಾದ ಗೀತೆಗಳ ಮೂಲಕ ವಿಜಯ್‌ಪ್ರಕಾಶ್ ಮೋಡಿ ಮಾಡಿದರು.

ಮೈಸೂರು ಅರಮನೆ ಮುಂದಿನ ವೇದಿಕೆಯಲ್ಲಿ ಭಾನುವಾರ ವಿಜಯ್ ಪ್ರಕಾಶ್ ತಮ್ಮ ಗಾಯನದ ಮೂಲಕ ಸಂಗೀತದ ಸುಧೆ ಹರಿಸಿದರು. ಅರಮನೆ ಮಂಡಳಿ ವತಿಯಿಂದ ಹಮ್ಮಿಕೊಂಡಿರುವ ಫಲಪುಷ್ಪ ಪ್ರದರ್ಶನದ ಪ್ರಯುಕ್ತ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಅಂತೆಯೇ ಎರಡನೇ ದಿನವಾದ ಇಂದು ವಿಜಯ್‌ಪ್ರಕಾಶ್ ಗೀತೆಗಳನ್ನು ಸಾದರಪಡಿಸಿ ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು.

ಅವರು ವೇದಿಕೆಗೆ ಪ್ರವೇಶಿಸುವ ಮುನ್ನ ಅವರ ತಂಡದ ಗಾಯಕರು, ವಾದ್ಯ ವೃಂದದವರು ಶ್ರೋತೃಗಳನ್ನು ಸಂಗೀತದ ಅಲೆಯಲ್ಲಿ ತೇಲಿಸಿದರು. ಈ ಮಧ್ಯೆ ವೇದಿಕೆಗೆ ಆಗಮಿಸಿದ ವಿಜಯ್‌ಪ್ರಕಾಶ್, 'ಜೈ ಹೋ...' ಎಂದು ರಾಗಬದ್ಧವಾಗಿ ಹೇಳಿ ಸಭಿಕರ ಎದೆಗೆ ಲಗ್ಗೆಯಿಟ್ಟರು. ಬಳಿಕ ಮಾತಿಗಿಳಿದ ಅವರು, ನನ್ನೂರು–ನಮ್ಮೂರು ಮೈಸೂರು... ಆಹಾ ಹೇಗಿ ದ್ದೀರಾ... ಇಂತಹ ವೇದಿಕೆಯಲ್ಲಿ ನಿಂತು ಕಾರ್ಯ ಕ್ರಮ ಕೊಡುತ್ತಿದ್ದೇನೆ ಎಂದರೆ ಅದಕ್ಕೆ ಮೈಸೂರು ಜನತೆಯೇ ಕಾರಣ ಎನ್ನುವ ಮೂಲಕ ಮೂಲತಃ ಮೈಸೂರಿನವರೇ ಆದ ಅವರು ತವರಿನ ಅಭಿಮಾನ ಮೆರೆದರು.

'ಓಂ ಶಿವೋಹಂ ರುದ್ರ ನಾಮಂ ಭಜೇಹಂ...' ಗೀತೆಯ ಮೂಲಕ ಪ್ರೇಕ್ಷಕರಲ್ಲಿ ಭಕ್ತಿಭಾವ ಮೂಡಿಸಿದರು. ಅಲ್ಲದೆ, 'ಹರ ಹರ ಮಹಾದೇವ್...' ಎಂದು ಹಾಡಿ, ಸಭಿಕರಿಂದಲೂ ಹಾಡಿಸಿ ಪುಳಕವಿಟ್ಟರು. ತಮ್ಮದೇ ಕಂಠಸಿರಿಯಲ್ಲಿ ಮೂಡಿಬಂದಿರುವ 'ಕಿರಿಕ್ ಪಾರ್ಟಿ' ಚಿತ್ರದ 'ಬೆಳಗೆದ್ದು ಯಾರ ಮುಖವ ನಾನು ನೋಡಿದೆ...' ಗೀತೆ ಹಾಡಿ ರಂಜಿಸಿದರು.

ನಂತರ 'ಕಾಂತಾರ' ಸಿನಿಮಾದ 'ಏ ಸಿಂಗಾರ ಸಿರಿಯೇ...' ಗೀತೆಯನ್ನು ವಿಜಯ್‌ಪ್ರಕಾಶ್ ಹಾಡಿದರು. ಈ ಹಾಡು ಸಹ ಅವರದೇ ಧ್ವನಿಯಲ್ಲಿ ಮೂಡಿ ಬಂದಿದೆ. ಸದರಿ ಹಾಡಿನ ಮೂಲಕ ವಿಜಯ್‌ಪ್ರಕಾಶ್ ಸಭಿಕರ ಮನಮುದ ಗೊಳಿಸಿದರು. ಅವರೊಂದಿಗೆ ವಿದುಷಿ ಲಕ್ಷ್ಮೀನಾಗರಾಜ್ ದನಿಗೂಡಿಸಿದರು. 'ಪಲ್ಲವಿ ಅನುಪಲ್ಲವಿ' ಸಿನಿಮಾದ 'ನಗುವ ನಯನ ಮಧುರ ಮೌನ' ಗೀತೆಯನ್ನು ವಿಜಯ್‌ಪ್ರಕಾಶ್, ವಿದುಷಿ ಲಕ್ಷ್ಮೀನಾಗ ರಾಜ್ ಅವರೊಂದಿಗೆ ಸಾದರಪಡಿಸಿ ಸಭಿಕರ ಮನಮುದಗೊಳಿಸಿದರು. ಇನ್ನು ಅನೇಕ ಗೀತೆಗಳ ಮೂಲಕ ವಿಜಯ್ ಪ್ರಕಾಶ್ ಪ್ರೇಕ್ಷಕರ ರಂಜಿಸಿದರು. ಅವರ ಗಾಯನ ಹಾಗೂ ವಾದ್ಯವೃಂದ ಸಂಗೀತದ ಅಬ್ಬರಕ್ಕೆ ಮನಸೋತು ಯುವಜನರು ಕುಣಿದು ಕುಪ್ಪಣಿಸಿದರು. ವಾರಾಂತ್ಯವಾದ ಹಿನ್ನೆಲೆಯಲ್ಲಿ ಭಾರೀ ಪ್ರಮಾಣದಲ್ಲಿ ಅರಮನೆ ಆವರಣದಲ್ಲಿ ನೆರೆದಿದ್ದ ಪ್ರೇಕ್ಷಕರು ಸಂಗೀತದ ಅಲೆಯಲ್ಲಿ ತೇಲಿದರು.

ಇದಕ್ಕೂ ಮುನ್ನ ವಿಜಯ್‌ಪ್ರಕಾಶ್ ಅವರ ತಂಡದ ಗಾಯಕ ನಿಖಿಲ್ ಪಾರ್ಥಸಾರಥಿ, 'ಶ್ರೀ ಜಗದೀಶ್ವರಿ ದುರ್ಗಾ ಮಾತಾ ಸ್ವಾಗತಂ... ಸುಸ್ವಾಗತಂ...' ಗೀತೆ ಪ್ರಸ್ತುತಪಡಿಸಿ, ಭಕ್ತಿಯ ಸುಧೆ ಹರಿಸಿದರು. ಬಳಿಕ ಶಾಶ್ವತಿ ಕಶ್ಯಪ್ ಮತ್ತು ಶಶಿಕಲಾ ಸುನೀಲ್ ಜೋಡಿಯು 'ಒಲಿದು ಬಾರಮ್ಮಯ್ಯ ಬೆಟ್ಟದ ಚಾಮುಂಡಿ ಒಲಿದು ಬಾರೇ...' ಜನಪದ ಗೀತೆಯೊಂದಿಗೆ ಸಭಿಕ ರಲ್ಲಿ ಭಕ್ತಿಭಾವ ಮೂಡಿಸಿದರು. ಬಳಿಕ ಶಾಶ್ವತಿ ಕಶ್ಯಪ್ 'ಮಾದೇವ ಮಾದೇವ...' ಜನಪದ ಗೀತೆ ಪ್ರಸ್ತುತಪಡಿಸಿದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ವಿದ್ವಾನ್ ನಾಗರಾಜ್, ಚಾಮರಾಜನಗರದ ಸುರೇಶ್ ಋಗ್ವೇದಿ ಸೇರಿದಂತೆ ಮತ್ತಿತರ ಗಣ್ಯರು ಹಾಜರಿದ್ದರು.

ನೃತ್ಯರೂಪಕದಲ್ಲಿ ಅನಾವರಣಗೊಂಡ ಬಿವಿಬಿ ವಿದ್ಯಾರ್ಥಿಗಳ ದೃಶ್ಯಕಾವ್ಯ...



ಮೈಸೂರಿನ ಭಾರತೀಯ ವಿದ್ಯಾಭವನ ಶಾಲೆ ಮಕ್ಕಳು ನೃತ್ಯರೂಪಕ ಸಾದರಪಡಿಸಿದರು.

ನೃತ್ಯರೂಪಕದಲ್ಲಿ ಮಹಿಷಾಶುರನ ಸಂಹಾರದ ದೃಶ್ಯಕಾವ್ಯವನ್ನು ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯ 9 ಮತ್ತು 10ನೇ ತರಗತಿ ಮಕ್ಕಳು ಅನಾವರಣಗೊಳಿಸಿ, ಪ್ರೇಕ್ಷಕರ ಮನಕ್ಕೆ ಲಗ್ಗೆಯಿಟ್ಟರು. ಆದಿಶಕ್ತಿಯು ನವರೂಪಗಳ ತಾಳಿ ಮಹಿಷಾಶುರನನ್ನು ಸಂಹರಿಸುವ ದೃಶ್ಯಾವಳಿ ಮೂಡಿಸಿ ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು. ಇದಕ್ಕೂ ಮುನ್ನ ವಿದ್ವಾನ್ ಆರ್.ರಘು ಅವರ ಶಾಸ್ತ್ರೀಯ ಸಂಗೀತಕ್ಕೆ ಸಭಿಕರು ತಲೆದೂಗಿದರು. ಪುರಂದರದಾಸರ ರಚನೆಯ 'ಪೋಗದಿರೆಲೋ ರಂಗ.. ಬಾಗಿಲಿಂದಾಚೆಗೆ', 'ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ...' ಭಕ್ತಿಗೀತೆಗಳ ಮೂಲಕ ಭಕ್ತಿ ಅಲೆಯಲ್ಲಿ ಸಭಿಕರು ತೇಲುವಂತೆ ಮಾಡಿದರು. ಇನ್ನು ಅನೇಕ ಶಾಸ್ತ್ರೀಯ ಗೀತೆಗಳನ್ನು ಅವರು ಸಾದರಪಡಿಸಿದರು. ಅರಮನೆ ಅಂಗಳದಲ್ಲಿ ಒಂದೆಡೆ ಫಲಪುಷ್ಪ ಪ್ರದರ್ಶನದ ವೈಭವ ಕಳೆಗಟ್ಟಿದ್ದರೆ, ಮತ್ತೊಂದೆಡೆ ಸಂಗೀತದ ಸುಗಂಧದ ಘಮಲು ಸೂಸುತ್ತಿತ್ತು.

ಆನ್‌ಲೈನ್‌ನಲ್ಲಿ ಔಷಧಿ ಖರೀದಿಸುವಾಗ ಎಚ್ಚರವಹಿಸಿ

ಸಂಸದ ಯದುವೀರ್ ಮನವಿ



2025ರ ಎಂಡಿಸಿಡಿಎ ಕೆಮಿಸ್ಟ್ಸ್ ಡೈರಿಯನ್ನು ಸಂಸದ ಯದುವೀರ್ ಕೃಷ್ಣಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರು ಬಿಡುಗಡೆಗೊಳಿಸಿದರು.

ಮೈಸೂರು, ಡಿ.22(ಎಸ್‌ಪಿಎನ್)– ಗ್ರಾಹಕರು, ಆನ್‌ಲೈನ್ ಔಷಧಿಗಳನ್ನು ಖರೀಧಿಸುವಾಗ ಎಚ್ಚರವಹಿಸಬೇಕು. ಆನ್‌ಲೈನ್ ಔಷಧಿಗಳು ಗುಣಮಟ್ಟ ಕಳಪೆ ಎಂಬ ದೂರುಗಳು ಬರುತ್ತಿವೆ ಎಂದು ಸಂಸದ ಯದುವೀರ್ ಕೃಷ್ಣಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ರಮಾ ಗೋವಿಂದ ಕಲಾವೇದಿಕೆಯಲ್ಲಿ ಮೈಸೂರು ಜಿಲ್ಲಾ ಕೆಮಿಸ್ಟ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 2025ರ ಎಂಡಿ ಸಿಡಿಎ ಕೆಮಿಸ್ಟ್ಸ್ ಡೈರಿ ಬಿಡುಗಡೆಗೊಳಿಸಿ ಮಾತನಾಡಿದರು.

ಗ್ರಾಹಕರು ಸಾಧ್ಯವಾದಷ್ಟು ನಿಮ್ಮ ಮನೆಯ ಹತ್ತಿರದಲ್ಲಿರುವ ಮೆಡಿಕಲ್ ಸ್ಟೋರ್‌ಗಳಲ್ಲಿ ಔಷಧಿಗಳನ್ನು ಖರೀಧಿಸಿ, ಲೋಕಲ್ ಮೆಡಿಕಲ್ ಸ್ಟೋರ್‌ಗಳನ್ನು ತೆರೆಯಲು ಸರ್ಕಾರದಿಂದ ಅನುಮತಿ ಬೇಕು. ಆದರೆ, ಆನ್‌ಲೈನ್ ಔಷಧ ಮಾರಾಟಗಾರರಿಗೆ ಸರ್ಕಾರದ ನಿಯಂತ್ರಣ ಇರುವುದಿಲ್ಲ. ಅಲ್ಲದೆ, ನೀವು ಆರ್ಡರ್ ಮಾಡುವ ಔಷಧಿಯ ಗುಣಮಟ್ಟ ಇರುವುದಿಲ್ಲ ಎಂಬ ದೂರುಗಳು ಸಾಕಷ್ಟು ಬರುತ್ತಿವೆ. ಇದರ ಬಗ್ಗೆ ಗ್ರಾಹಕರು ಎಚ್ಚರವಹಿಸುವಂತೆ ಸಲಹೆ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಮೆಡಿಕಲ್ ಅಂಗಡಿ ಮಾಲೀಕರು ಸಮುದಾಯ ಉಳಿವಿನಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಮೆಡಿಕಲ್ ಶಾಪ್ ಮಾಲೀಕರು ಗುಣಮಟ್ಟದ ಔಷಧಿ ನೀಡಿ, ರೋಗಿಗಳಿಗೆ ಉತ್ತಮ ಮಾರ್ಗ ದರ್ಶಕರಾಗಿಯೂ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಕಷ್ಟದಲ್ಲಿರುವ ಮೆಡಿಕಲ್ ಮಾಲೀಕರನ್ನು ಗುರುತಿಸಿದರೆ, ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 2500 ಮೆಡಿಕಲ್ ಶಾಪ್‌ಗಳಿವೆ. ಒಂದು ಶಾಪ್‌ನಲ್ಲಿ ಇಬ್ಬರಂತೆ ಕನಿಷ್ಟ 5 ಸಾವಿರ ಮಂದಿ ಅವಲಂಭಿತರಾಗಿದ್ದು, ಇವರ ಅನುಕೂಲಕ್ಕಾಗಿ ಸಿಎ ನಿವೇಶನ ಮುಡಾ ಕೊಡಿಸುವಂತೆ ಶಾಸಕ ಟಿ.ಎಸ್. ಶ್ರೀವತ್ಸಗೆ ಮನವಿ ಮಾಡಲಾಯಿತು.

ಪ್ರಧಾನಿ ಮೋದಿಯವರಿಗೆ ಕುವೈತ್‌ನ 'ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್' ಗೌರವ



ಕುವೈತ್, ಡಿ.22– ಎರಡು ದಿನದ ಕುವೈತ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿಯವರಿಗೆ ಕುವೈತ್ ಸರ್ಕಾರ 'ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್' ನೀಡುವ ಮೂಲಕ ಗೌರವಿಸಿದೆ. ಇಂದು ಕುವೈತ್ ಪ್ರಧಾನಿ ಮೋದಿಯವರಿಗೆ ತನ್ನ ಅತ್ಯುನ್ನತ ಗೌರವ 'ದಿ ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್' ಪ್ರದಾನ ಮಾಡಿದೆ. ಮೋದಿಯವರಿಗೆ ಕುವೈತ್‌ನಲ್ಲಿ ಲಭಿಸಿದ ಈ ಗೌರವವನ್ನು ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್, ಪ್ರಿನ್ಸ್ ಚಾರ್ಲ್ಸ್, ಮಾಜಿ ಅಮೆರಿಕದ ಅಧ್ಯಕ್ಷ ಜಾರ್ಜ್‌ಬುಷ್‌ರಂತಹ ಗಣ್ಯರಿಗೆ ಈ ಹಿಂದೆ ನೀಡಲಾಗಿತ್ತು.

ಕುವೈತ್ ಪ್ರಧಾನಿ ನರೇಂದ್ರ ಮೋದಿ ಯವರಿಗೆ ನೀಡಿದ ಗೌರವವು ಎರಡು ರಾಷ್ಟ್ರಗಳ ನಡುವಿನ ಸ್ನೇಹದ ಸಂಕೇತ ವೆಂದು ಪರಿಣಿಸಿದೆ. 'ದಿ ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್' ಕುವೈತ್‌ನ ನೈಟ್‌ಹುಡ್ ಆರ್ಡರ್ ಆಗಿದೆ ಈ ಆರ್ಡರ್ ಅನ್ನು ಸ್ನೇಹದ ಸಂಕೇತವಾಗಿ ರಾಷ್ಟ್ರಾಧ್ಯಕ್ಷರು ಮತ್ತು ವಿದೇಶಿ ಸಾರ್ವಭೌಮರು ಹಾಗೂ ವಿದೇಶಿ ರಾಜಮನೆತನದ ಸದಸ್ಯರಿಗೆ ನೀಡಲಾಗುತ್ತದೆ.

ಗಣರಾಜ್ಯೋತ್ಸವ ಪರೇಡ್‌ಗೆ ರಾಜ್ಯದ ಸ್ತಬ್ಧಚಿತ್ರ

ಬೆಂಗಳೂರು, ಡಿ.22– 2025ರ ಜನವರಿ 26 ರಂದು ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಕರ್ನಾಟಕವೂ ಸೇರಿ 15 ರಾಜ್ಯಗಳು ಆಯ್ಕೆಯಾಗಿವೆ.

ರಕ್ಷಣಾ ಇಲಾಖೆ ಆಯ್ಕೆಯಾದ ರಾಜ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. 2024ರ ಗಣರಾಜ್ಯೋತ್ಸವ ಪರೇಡ್‌ಗೆ ಕರ್ನಾಟಕ ಆಯ್ಕೆ ಆಗದ ಕಾರಣ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು.

ರಾಜ್ಯದಿಂದ ಈ ಬಾರಿ ಲಕ್ಕುಂಡಿಯ ಪ್ರಾಚೀನ ದೇವಾಲಯ ಸ್ತಬ್ಧಚಿತ್ರ ಪ್ರದರ್ಶಿಸುವ ಸಾಧ್ಯತೆ ಇದೆ. ವಿಶ್ವಪಾರಂಪರಿಕ ತಾಣ ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಸುತ್ತಿರುವ ರಾಜ್ಯ ಸರ್ಕಾರ ಲಕ್ಕುಂಡಿ ಆಯ್ಕೆ ಮಾಡುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ಹೇಳಿವೆ. ಚಾಲುಕ್ಯರು, ಕಲಚೂರಿಗಳ ಕಾಲದ ಹಲವು ಶೈವ, ಜೈನ ದೇವಾಲಯಗಳು ಲಕ್ಕುಂಡಿಯಲ್ಲಿವೆ.

ರಕ್ಷಣಾ ಇಲಾಖೆ ಪ್ರತಿ ಮೂರು ವರ್ಷಕ್ಕೆ ಒಂದಾವರ್ತಿಯಂತೆ ವಿವಿಧ ರಾಜ್ಯಗಳ ಸ್ತಬ್ಧ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡಲಿದೆ. ಪರೇಡ್‌ನಲ್ಲಿ ಸ್ತಬ್ಧ ಚಿತ್ರ ಪ್ರದರ್ಶನಕ್ಕೆ 15 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಾತ್ರ ಸೀಮಿತ ಮಾಡಲಾಗಿದೆ. ಇದಕ್ಕಾಗಿ ಅಂತರ್ ರಾಜ್ಯ ಮಂಡಳಿಯ ಆಧಾರದ ಮೇಲೆ ದೇಶವನ್ನು ಆರು ವಲಯಗಳನ್ನಾಗಿ ವಿಭಾಗಿಸಲಾಗಿದೆ. ಪ್ರತಿ ವಲಯಕ್ಕೂ ಕೋಟಾ ನಿಗದಿ ಮಾಡಿದೆ. 2024, 2025 ಮತ್ತು 2026 ರಲ್ಲಿ ಯಾವ ಯಾವ ರಾಜ್ಯಗಳು ಸ್ತಬ್ಧಚಿತ್ರ ಪ್ರದರ್ಶಿಸಬೇಕು ಎಂಬುದರ ಪಟ್ಟಿ ಈಗಾಗಲೇ ಮಾಡಲಾಗಿದೆ. ಆ ಪ್ರಕಾರ ದಕ್ಷಿಣದ ರಾಜ್ಯಗಳ ಪೈಕಿ ಆಂಧ್ರ ಮತ್ತು ಕರ್ನಾಟಕ್ಕೆ 2025ಕ್ಕೆ ಅವಕಾಶ ಸಿಕ್ಕಿದೆ. ಕೇರಳ, ತಮಿಳುನಾಡು ಮತ್ತು ಪುದುಚೇರಿಗೆ 2026 ರಲ್ಲಿ ಅವಕಾಶ ಸಿಗಲಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ: ಭಾರತದ ಪಂದ್ಯಗಳಿಗೆ ದುಬೈ ಆತಿಥ್ಯ

ದುಬೈ, ಡಿ.22– ಮುಂದಿನ ವರ್ಷದ ಆರಂಭದಲ್ಲಿ ನಿಗದಿಯಾಗಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ತನ್ನ ಎಲ್ಲಾ ಪಂದ್ಯಗಳನ್ನು ಭಾರತ ತಂಡವು ದುಬೈನಲ್ಲಿ ಆಡಲಿದೆ ಎಂದು ವರದಿಯಾಗಿದೆ.

ಶನಿವಾರ ರಾತ್ರಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ಮೊಹ್ಸಿನ್ ನಖ್ವಿ ಮತ್ತು ಅವರ ಯುಎಇ ಸಹವರ್ತಿ ಶೇಖ್ ನಹ್ಯಾನ್ ಅಲ್ ಮುಬಾರಕ್ ನಡುವಿನ ಸಭೆಯ ನಂತರ ದುಬೈಯನ್ನು ತಟಸ್ಥ ಸ್ಥಳವಾಗಿ ಆಯ್ಕೆ ಮಾಡಲಾಗಿದೆ ಎಂದು ಪಿಸಿಬಿಯ ವಿಶ್ವಾಸಾರ್ಹ ಮೂಲವು ಖಚಿತಪಡಿಸಿದೆ.

ಚಾಂಪಿಯನ್ಸ್ ಟ್ರೋಫಿಗೆ ಸಂಬಂಧಿಸಿದ ಗೊಂದಲಗಳು ಕೊನೆಗೂ ಬಗೆಹರಿದಿದ್ದು, ಐಸಿಸಿಯು ಚಾಂಪಿಯನ್ಸ್ ಟ್ರೋಫಿಯ ಅಂತಿಮ ವೇಳಾಪಟ್ಟಿಯನ್ನು ಪ್ರಕಟಿಸುವ ನಿರೀಕ್ಷೆಯಿದೆ. ಭಾರತ ತಂಡವು ಮುಂದಿನ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ತನ್ನ ಎಲ್ಲಾ ಪಂದ್ಯಗಳನ್ನು ಯುಎಇಯಲ್ಲಿ ಆಡಲಿದೆ. ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಸಂಬಂಧಿಸಿ ಭಾರತ–ಪಾಕಿಸ್ತಾನದ ಪಂದ್ಯ ಶ್ರೀಲಂಕಾದಲ್ಲಿ ನಡೆಯಬಹುದು ಎಂದು ಐಸಿಸಿ ಮೂಲಗಳು ತಿಳಿಸಿವೆ.

2027ರವರೆಗೆ ಭಾರತದ ಆತಿಥ್ಯದಲ್ಲಿ ನಡೆಯುವ ಐಸಿಸಿ ಟೂರ್ನಿಗಳಲ್ಲೂ ಪಾಕಿಸ್ತಾನ ತಂಡವು ತನ್ನ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ (ಹೈಬ್ರಿಡ್ ಮಾದರಿ) ಆಡಲಿದೆ. ಈ ಏರ್ಪಾಡು ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯುವ 2028ರ ಮಹಿಳಾ ಟಿ20 ವಿಶ್ವಕಪ್‌ವರೆಗೆ ಚಾಲ್ತಿಯಲ್ಲಿ ಇರಲಿದೆ.

ಮೈಸೂರಲ್ಲಿ ವಿಜೃಂಭಣೆಯ ಶ್ರೀ ಶಾರದಾದೇವಿ ಉತ್ಸವ



ಮೈಸೂರು ನಗರದಲ್ಲಿ 172ನೇ ಶ್ರೀ ಶಾರದಾದೇವಿಯವರ ಜಯಂತ್ಯೋತ್ಸವ ವಿಜೃಂಭಣೆಯಿಂದ ಭಾನುವಾರ ಜರುಗಿತು. ಈ ವೇಳೆ ಶಾಸಕ ಜಿ.ಟಿದೇವೇಗೌಡರು, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಸೇರಿದಂತೆ ಇತರರಿದ್ದರು.

> ಇದೇ ಮೊದಲ ಬಾರಿಗೆ ಶಾರದಾ ದೇವಿಯವರ ಜಯಂತ್ಯೋತ್ಸವ ನಡೆಯುತ್ತಿದ್ದು, ಪ್ರತಿ ವರ್ಷ ಈ ಶಾರದಾ ದೇವಿ ನಗರದಲ್ಲಿ ಮಾತೆ ಶಾರದಾದೇವಿಯವರ ಜಯಂತಿ ಉತ್ಸವ ನಡೆಯಬೇಕು. ಜತೆಗೆ ವಿವೇಕಾನಂದ ನಗರ ಮತ್ತು ರಾಮಕೃಷ್ಣ ನಗರದಲ್ಲಿಯೂ ಸಹ ಸ್ವಾಮಿ ವಿವೇಕಾನಂದ ಮತ್ತು ಶ್ರೀರಾಮಕೃಷ್ಣ ಪರಮಹಂಸರ ಜಯಂತಿ ಉತ್ಸವ ನಡೆಯಬೇಕು. ಈ ಮೂರು ಬಡಾವಣೆಗಳ ನಿವಾಸಿಗಳು ಈ ಮೂವರು ಮಹನೀಯರ ಜನ್ಮದಿನವನ್ನು ತಮ್ಮ ಬಡಾವಣೆಗಳಲ್ಲಿ ಹಬ್ಬದಂತೆ ಆಚರಿಸಬೇಕು.
>
> – ಡಿ.ಮಾದೇಗೌಡ, ಮಾಜಿ ಸದಸ್ಯರು, ವಿಧಾನ ಪರಿಷತ್

ಮೈಸೂರು, ಡಿ.22(ಎಸ್‌ಪಿಎನ್)– ಮೈಸೂರು ನಗರದಲ್ಲಿ 172ನೇ ಶ್ರೀ ಶಾರದಾ ದೇವಿಯವರ ಜಯಂತ್ಯೋತ್ಸವ ವಿಜೃಂಭಣೆಯಿಂದ ಭಾನುವಾರ ಜರುಗಿತು.

ಮೈಸೂರು ನಗರದ ಶಾರದದೇವಿ ನಗರದಲ್ಲಿ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ, ಶಾರದಾದೇವಿನಗರ ಹಿತರಕ್ಷಣಾ ವೇದಿಕೆ, ಶ್ರೀ ಉದ್ಭವ ಗಣಪತಿ ಮತ್ತು ಚಾಮುಂಡೇಶ್ವರಿ ಸೇವಾ ಸಂಘ, ಬಾಹುಸಾರ್ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕ ಸೇವಾ ಸಮಿತಿ , ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹಾಗೂ ಶಾರದಾದೇವಿನಗರ ನಿವಾಸಿಗಳ ಸಹಯೋಗದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ಶಾರದಾದೇವಿಯವರ 172 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಶಾರದಾದೇವಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಶಾರದೇವಿನಗರದಿಂದ ಶ್ರೀ ಶಾರದಾ ದೇವಿಯವರ ಭಾವಚಿತ್ರ ಹೊತ್ತ ಎರಡು ರಥಗಳು ಹಾಗೂ ವಿವೇಕಾನಂದನಗರ ದಿಂದ ವಿವೇಕಾನಂದರ ಭಾವಚಿತ್ರ ಹೊತ್ತ ರಥ ನಿವೇದಿತಾ ನಗರ ಮತ್ತು ಶಾರದಾ ದೇವಿ ನಗರದ ಪ್ರಮುಖ ರಸ್ತೆ ಗಳಲ್ಲಿ ಮೆರವಣಿಗೆ ನಡೆದು ಕೊನೆಗೆ ಶಾರದಾ ದೇವಿನಗರದ ವೃತ್ತದಲ್ಲಿ ಅಂತ್ಯಗೊಂಡಿತು. ಈ ವೇಳೆ ಎಲ್ಲಾ ರಸ್ತೆಗಳನ್ನು ಮಹಿಳೆಯರು ರಂಗೋಲಿಯಿಂದ ಸಿಂಗಾರಗೊಳಿಸಿದ್ದು, ವಿಶೇಷವಾಗಿತ್ತು.

ಹಳ್ಳಿಗಳಲ್ಲಿ ನಡೆಯುವ ದೇವರ ಜಾತ್ರಾ ಮಹೋತ್ಸವದಂತೆ ಶ್ರೀ ಶಾರದಾದೇವಿ ಉತ್ಸವವನ್ನು, ಶಾರದಾದೇವಿ ನಗರದ ಜನತೆ ಭಕ್ತಿ–ಭಾವದಿಂದ ಆಚರಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಶಾರದಾದೇವಿ ವೃತ್ತದಲ್ಲಿ ಶ್ರೀ ಶಾರದಾ ದೇವಿ ಅವರ ಪ್ರತಿಮೆ ಸ್ಥಾಪಿಸುವಂತೆ ಹಲವರ ಒತ್ತಾಯವಿದೆ. ಇದಕ್ಕೆ ಪೂರಕವಾಗಿ ಈ ವೃತ್ತದ ಅಭಿವೃದ್ಧಿಗೆ 1.35 ಕೋಟಿ ಅನುದಾನ ಮಂಜೂರು ಮಾಡಿಸಲಾಗಿದೆ. ಇನ್ನು ಹೆಚ್ಚಿನ ಬೇಕಿದ್ದರೆ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಶಾರದಾದೇವಿ ನಗರ ಬಹುತೇಕ ರಸ್ತೆ, ಉದ್ಯಾನವನಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಇದರ ಜೊತೆಗೆ ವಿಶ್ವಮಾನವ ಜೋಡಿ ರಸ್ತೆ, ದಕ್ಷಿಣೇಶ್ವರ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿಗೆ ಸೇರಿಸಲಾಗಿದೆ ಎಂದ ಶಾಸಕರು, ಈ ಬಡಾವಣೆ ಆರಂಭವಾದಾಗ 6 ಇಂಚಿನ ಪೈಪ್‌ಗಳನ್ನು ಹಾಕಲಾಗಿತ್ತು. ಇದೀಗ ಒಂದು ರಸ್ತೆಗೆ ಸಾವಿರ ಮನೆಗಳು ತಲೆಯೆತ್ತಿವೆ. ಇದರಿಂದ ಒತ್ತಡ ಹೆಚ್ಚಾಗಿದೆ. ಯುಜಿಡಿ ಪೈಪ್ ಕಟ್ಟಿಕೊಳ್ಳುತ್ತಿದೆ. ಈ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದೇ ನೀರಿನ ಪೂರೈಕೆಯಲ್ಲೂ ಸಮಸ್ಯೆಯಿದ್ದು, ಇದನ್ನು 600 ಕೋಟಿ ವೆಚ್ಚದಲ್ಲಿ ಉಂಡುವಾಡಿ ಯೋಜನೆ ಆರಂಭಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ನಗರಕ್ಕೆ 24X7 ನೀರು ಪೂರೈಸಲು ಕಬಿನಿ ಯೋಜನೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶ್ರಮಿಸುವುದಾಗಿ ಘೋಷಿಸಿದರಲ್ಲದೆ, ಮನೆಮನೆ ಮಾದೇಗೌಡರು ಎಂಎಲ್‌ಸಿ ಆಗಿದ್ದಾಗ ನಾನು ಸ್ವಲ್ಪ ದಿನ ಮಂತ್ರಿಯಾಗಿದ್ದೆ. ನಂತರ ನಮ್ಮ ಸರ್ಕಾರ ಬಿದ್ದು ಹೋಯಿತ್ತು. ನಂತರ ಮೈಸೂರಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರಲು ಸಾಧ್ಯವಾಗಲಿಲ್ಲ. ಅಭಿವೃದ್ಧಿ ಕೆಲಸ ಹಮ್ಮಿಕೊಳ್ಳುವುದೇ ಬೇಸರ ತರಸಿದೆ ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಎಲ್ಲಾ ಆಯಮದಲ್ಲೂ ಬೆಂಗಳೂರು ತನ್ನ ಹಳೆಯ ವೈಭವವನ್ನು ಕಳೆದುಕೊಂಡಿದೆ. ಆದರೆ, ಸಾಂಸ್ಕೃತಿಕ ನಗರಿ ಮೈಸೂರಿಗೆ ಆ ಗತಿ ಬಾರದಂತೆ ಜನರು ಎಚ್ಚರವಹಿಸಬೇಕು. ಆದರೆ, ನಮ್ಮ ಅಧಿಕಾರಿಗಳು ಟೌನ್ ಪ್ಲಾನ್ ಮೂಲಕ ಸಾಧಕರ ಹೆಸರನ್ನಿಟ್ಟು ಪೋಷಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣ ಆಶ್ರಮದ ಸರ್ವಜಯಾನಂದ ಜೀ ಮಹಾ ರಾಜ್, ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯ ಜಗದೀಶ್, ಜೆಡಿಎಸ್ ಮುಖಂಡ ಶೇಖರ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ರಾಕೇಶ್ ಭಟ್, ಎಚ್.ಜೆ. ಬಸವ ಲಿಂಗಪ್ಪ, ಕೆ.ಕೆಂಪಲಿಂಗರಾಜು, ಪಾಲಿಕೆ ವಲಯ ಕಚೇರಿ 3ರ ಆಯುಕ್ತ ಟಿ.ಎಸ್. ಸತ್ಯಮೂರ್ತಿ, ರೊ.ಆಯರಹಳ್ಳಿ ಪಿ.ವಿರೂ ಪಾಕ್ಷ, ಪ್ರೊ ಚಂದ್ರಶೇಖರ್, ಪ್ರಕಾಶ್ ಇತರರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ನಾರಾಯಣರಾಜು ರವರ ಮಗ ಶ್ರೀ. ಎಸ್. ಗೋಪಾಲರಾಜು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ 1ನೇ ಮತ್ತು 2ನೇ ಹಂತ, ಶಾರದದೇವಿ ನಗರದಲ್ಲಿರುವ ಹಾಲಿ ಮೈಸೂರು ಮಹಾನಗರ ಪಾಲಿಕೆ, ವ್ಯಾಪ್ತಿಗೆ ಒಳಪಡುವ ಸ್ವತ್ತಿನ ನಂ. 227, ಪಿ.ಐ.ಡಿ. ನಂ. 194384 ಮತ್ತು ಸ್ವತ್ತಿನ ನಂ. 227/1, ಪಿ.ಐ.ಡಿ. ನಂ. 194383, [ಈ ಹಿಂದೆ ಮೈಸೂರು ಜಿಲ್ಲೆ, ಕಸಬಾ ಹೋಬಳಿ, ಬೋಗಾದಿ ಗ್ರಾಮದಲ್ಲಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡಿರುವ ಸರ್ವೆ ನಂ. 227 ರ ಜಮೀನು] ಸ್ವತ್ತಿನ ಒಟ್ಟು ವಿಸ್ತೀರ್ಣ 6,536 ಚದರ ಅಡಿ ಉಳ್ಳ ಸ್ವತ್ತಿಗೆ ಒಗ್ಗೂಡಿಸಲಾದ ಚಕ್ಕುಬಂದಿ ಪೂರ್ವಕ್ಕೆ: ಸರ್ವೆ ನಂ. 226ರ ಜಮೀನು, ಪಶ್ಚಿಮಕ್ಕೆ: 6.00 ಮೀಟರ್ ರಸ್ತೆ, ಉತ್ತರಕ್ಕೆ: ನ್ಯೂ ಕಾಂತರಾಜ್ ಅರಸ್ ರಸ್ತೆ, ದಕ್ಷಿಣಕ್ಕೆ: ಪಾರ್ಕ್.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com